ದೀಕ್ಷೆ

೧

ಮುರಲೀಧರ ಊಟ ಮುಗಿಸಿ ಹೊರಬರುವುದರೊಳಗೆ ವಾತಾವರಣದಲ್ಲಿ ಬದಲಾವಣೆಯಾಗಿಬಿಟ್ಟಿತ್ತು. ಚಂದ್ರನಿರಲಿಲ್ಲ. ಭೀಕರವಾಗಿದ್ದ ಕರಿಯ ಮೋಡಗಳು ಆಕಾಶವನ್ನು ಆಕ್ರಮಿಸಿಕೊಂಡಿದ್ದುವು.

ಹತ್ತು ದಿನಗಳಿಂದ ಒಂದು ಹನಿಯೂ ಬಿದ್ದಿರಲಿಲ್ಲ. ಇನ್ನೇನು, ಮಳೆಗಾಲ ಕಳೆದಂತೆಯೇ–ಎಂದಿದ್ದರು ಎಲ್ಲರೂ. ಅಷ್ಟರಲ್ಲೇ—

ಟಪ್‌ಟಪೆಂದು ಸದ್ದಾಯಿತು, ಹಗಲೆಲ್ಲ ಕಾದು ಕಾವೇರಿದ್ದ ಡಾಮರು ರಸ್ತೆಯ ಮೇಲೆ. ಆತನ ಮುಖದಮೇಲೂ ತಣ್ಣನೆ ಬಿದ್ದಿತೊಂದು ಹನಿ. ಎಲ್ಲಿಯೋ ಒಂದೆಡೆ ಛಟ್‌ಛಟಿಲೆಂದು ಸದ್ದುಮಾಡುತ್ತ ಸಿಡಿಲೆರಗಿತು. ಬಿರುಸಾದ ಮಳೆಯೇ ಸಂದೇಹ ವಿರಲಿಲ್ಲ.

ಆ ಬೀದಿಯ ಮೂಲೆಯಲ್ಲಿದ್ದ ಬೀಡದ ಅಂಗಡಿಯವನು ಅವಸರ ಅವಸರ ವಾಗಿ ಕದವಿಕ್ಕುತ್ತಿದ್ದ –ಮಳೆ ಸುರಿಯುವುದಕ್ಕೆ ಮುಂಚೆ ಮನೆ ಸೇರಬೇಕೆಂದು. ಅಷ್ಟ ರಲ್ಲೆ ಅಂಗಡಿಯ ಬೆಳಕಿನ ಕಡೆಗೆ ಧಾವಿಸಿ ಬರುತ್ತ ಯಾರೋ ಒಬ್ಬನೆನ್ನುತಿದ್ದ.

"ಮೂರುಕಾಸಿನ ಬೀಡಿ ಕೊಟ್ಬಿಡಪ್ಪೋ!"

ಕತ್ತಲು ಕವಿದಿದ್ದ ಬೀದಿಯಲ್ಲಿ ಬೆಳಕು ಬೀರುತ್ತ, ಪ್ರಯಾಣಿಕರಿಲ್ಲದೆ ಖಾಲಿ ಯಾಗಿದ್ದೊಂದು ಬಸ್ಸು ವೇಗವಾಗಿ ಓಡಿತು. ಮುರಲೀಧರನಿಗೆ ಗೊತ್ತಿತ್ತು–ಅದು ಕೊನೆಯ ಬಸ್ಸು, ಧಾವಿಸುತ್ತಿದ್ದುದು ಶೆಡ್ಡಿನ ಕಡೆಗೆ. ಆ ಚಾಲಕನಿಗೂ ಆತುರವೇ...

ಹತ್ತು ಗಂಟೆಯಾಯಿತು ಹಾಗಾದರೆ.

ಶೇಷಣ್ಣನವರ ವಠಾರದ ಹೆಬ್ಬಾಗಿಲಿನಿಂದ ಹೆಣ್ಣುಧ್ವನಿಯೊಂದು ಕರೆಯು ತ್ತಿತ್ತು:

"ಶ್ರೀಧರಾ! ಶ್ರೀಧರಾ!"

ಮಳೆ ಬಂತು, ಮಗ ಬರಲಿಲ್ಲವೆಂದು ಕಾತರವೇನೋ.

ಮುರಲಿಗಿದಿರಾಗಿ ಯಾರೋ ಧಾವಿಸಿ ಬರುತ್ತಿದ್ದರು. ಇಬ್ಬರು.

ಒಬ್ಬನೆನ್ನುತಿದ್ದ:

"ಓಡು! ಬಂದ್ಬಿಡ್ತು!"

ಇನ್ನೊಬ್ಬನೆನ್ನುತ್ತಿದ್ದ:

"ಶುರುವಾಗೋದರೊಳಗೇ ಮನೆ ಸೇರ್ತೀವಲ್ಲ ಸದ್ಯಃ!"

ಯಾರೋ ತಿಳಿಯದು. ಹತ್ತಿರದ ಮನೆಗಳವರೇ ಇರಬೇಕು. ಮುರಲಿ ಬದಿಗೆ ಸರಿದು, ಓಡುತ್ತಿದ್ದವರಿಗೆ ಹಾದಿ ಮಾಡಿಕೊಟ್ಟ. ಕಾಣಿಸಲಿಲ್ಲವೆಂದು ಢಿಕ್ಕಿಹೊಡೆದು

ಹಲ್ಲು ಮುರಿದುಕೊಳ್ಳುವುದರಲ್ಲಿ ಯಾವ ಅರ್ಥವೂ ಇರಲಿಲ್ಲ.

ಮತ್ತೆ ಮಳೆ ಹನಿಯಿತು. ಗುಡುಗಿತು ಆಕಾಶ.

ಮುರಲೀಧರ ಬೇಗಬೇಗನೆ ಹೆಜ್ಜೆ ಹಾಕಿದ.

ಅಲ್ಲಿಯೇ ಇತ್ತು ಆತ ವಾಸವಾಗಿದ್ದ ಕೊಠಡಿ.

...ಕೊಠಡಿ ಸೇರುವುದಕ್ಕೂ ಮಳೆಸುರಿಯುವುದಕ್ಕೂ ಸರಿಹೋಯಿತು. ಸಾಲು ಕೊಠಡಿಗಳಲ್ಲಿ ಒಂದೆರಡು ಕಡೆ ಮಾತ್ರ ದೀಪವಿತ್ತು. ಬಲ ಮಗ್ಗುಲಿನವನು ಬಂದೇ ಇರಲಿಲ್ಲ. ತನ್ನದರ ಬೀಗ ತೆಗೆದು ದೀಪ ಹಾಕುತ್ತ ಮುರಲೀಧರ ಸಮಾಧಾನದ ನಿಟ್ಟುಸಿರು ಬಿಟ್ಟ:

'ಬದುಕಿದೆ!'

ಹೊಸ್ತಿಲಲ್ಲಿ ನಿಂತು, ಕತ್ತಲೆಯನ್ನು ಇರಿದು, ತಾನು ಬಿಟ್ಟು ಬಂದಿದ್ದ ಭೋಜನ ಶಾಲೆಯ ಕಡೆಗೊಮ್ಮೆ ಆತ ನೋಡಿದ. ಅಲ್ಲಿ ಹೊರಜಗಲಿಯ ದೀಪ ಉರಿಯುತ್ತಿತ್ತು. ತನಗಿಂತಲೂ ತಡವಾಗಿ ಊಟ ಮುಗಿಸಿದ ಮೂವರು ನಾಲ್ವರು ಬೀದಿಗಿಳಿಯಲಾರದೆ ಸಂಕಟಪಡುತ್ತ ಬಾಗಿಲಲ್ಲಿ ನಿಂತಿದ್ದರು.

[ಬೇಗನೆ ಹೊರಟು ತಾನು ಒಳ್ಳೆಯ ಕೆಲಸ ಮಾಡಿದೆ...ಇಲ್ಲದಿದ್ದರೆ ರಾತ್ರೆ ಯೆಲ್ಲ ಅಲ್ಲಿಯೇ ಕೊಳೆಯಬೇಕಾಗುತ್ತಿತ್ತು. ಕಳೆದ ತಿಂಗಳು ಒಂದು ರಾತ್ರೆ ಪಟ್ಟ ಪಾಡು. ಬಹಳ ಹೊತ್ತು ಕಾದ ಬಳಿಕ, 'ಹತ್ತೇ ಮಾರು ದೂರ, ಹೊರಟು ಬಿಡು ವುದೇ ಸರಿ'–ಎಂದು ಆತ ಹೊರಕ್ಕೆ ಧುಮುಕಿದ್ದ. ಆದರೆ, ಕೊಠಡಿ ಸೇರುವುದ ರೊಳಗೆ, ಆ ಎರಡೇ ನಿಮಿಷಗಳಲ್ಲಿ, ಸಂಪೂರ್ಣ ತೋಯ್ದು ಹೋಗಿದ್ದ. ಆಗ ಹಿಡಿದ ನಡುಕ, ಬೆಳಕು ಹರಿದು ಸೂರ್ಯನ ಮುಖದರ್ಶನವಾಗುವವರೆಗೂ ಬಿಟ್ಟು ಹೋಗಿರಲಿಲ್ಲ. ಅಂತಹ ಮಳೆ ಅದು! ಆ ಅನುಭವವನ್ನು ಸ್ಮರಿಸಿಕೊಂಡರೂ ಸಾಕು, ಮೈ ಮುಳ್ಳಾಗುತ್ತಿತ್ತು. ಅಬ್ಬ!]

ಒಮ್ಮೆಲೆ ಗಾಳಿ ಬೀಸಿತು. ಸುರಿಯುತಿದ್ದ ಮಳೆ, ತೆರೆದ ಕಿಟಕಿಯ ಎಡೆಯಿಂದ ಬಿಂದಿಗೆ ಬಿಂದಿಗೆಯಷ್ಟು ನೀರನ್ನು ಕೊಠಡಿಯೊಳಕ್ಕೆ ಚೆಲ್ಲಿತು.

ಆತ ತೋಯದೆ ಇದ್ದರೂ ಪುಸ್ತಕಗಳಿಗೆ ಜಲಸೇಚನವಾಯಿತು.

ಮುರಲೀಧರ ಕಿಟಕಿ ಮುಚ್ಚಿದ. ಅಲ್ಲಿಯೇ ಹಗ್ಗದ ಮೇಲೆ ಒಣಗುತ್ತಿದ್ದ ಅಂಗವಸ್ತ್ರವನ್ನು ತೆಗೆದು, ಒದ್ದೆಯಾಗಿದ್ದ ಪುಸ್ತಕಗಳನ್ನು ಒರೆಸಿದ.

ಪುನಃ ಬಾಗಿಲ ಬಳಿ ನಿಂತು, ಎದುರುಗಡೆಯಲ್ಲೇ ಅಭಿಷೇಕ ಮಾಡಿಸಿಕೊಳ್ಳು ತ್ತಿದ್ದ ವಿದ್ಯುತ್ ಕಂಬವನ್ನು ಆತ ದಿಟ್ಟಿಸಿದ.

ಗುಡುಗು, ಮಿಂಚು, ಮಳೆ. ಎಲ್ಲವೂ ಸಮ್ಮಿಲಿತವಾಗಿದ್ದ ರಣ ಕೋಲಾಹಲ.

ಮುದ್ದಣನ ಸಾಲುಗಳು ಮುರಲೀಧರನ ನೆನಪಿಗೆ ಬಂದುವು.

'ಕಾಲಪುರುಷಂಗೆ ಗುಣಮಣಮಿಲ್ಲಂಗಡ'

ಬಳಿಕ?

'ಒಡಲೊಳ್ ಗುಡುಗುಟ್ಟುಗುಂಗಡ.'

ಗುಡುಗುಟ್ಟುತ್ತಿರುವ ಒಡಲು!

ಆಕಾಶದ ಜಲಪಾತ್ರೆಯನ್ನು ಕುಕ್ಕಿ ಸಹಸ್ರರಂಧ್ರಗಳನ್ನು ಮಾಡಿದ ಹಾಗೆ. ಇಂದ್ರಲೋಕದ ಅಣೆಕಟ್ಟುಗಳೆಲ್ಲ ಏಕಕಾಲದಲ್ಲೇ ಬಿರಿದು ನೀರು ಹೊರ ಹರಿದ ಹಾಗೆ....

ಭಾವಣಿ ತೊಟ್ಟಿಕ್ಕತೊಡಗಿತು!

ಮಳೆಗಾಲದ ಸಂಕಟ ಇನ್ನು ಮುಗಿಯಿತು ಎಂದಿದ್ದ ಮುರಲೀಧರ. ಅದು ಮುಗಿದಿರಲಿಲ್ಲ. 'ನೋಡೋಣ, ಈ ಮಳೆ ಬಹಳ ಹೊತ್ತು ಇರಲಾರದು'–ಎಂಬ ಆಸೆಯೊಂದಿತ್ತು. ಅದೂ ಹುಸಿಯಾಯಿತು. ಹೆಂಚುಗಳೆಡೆಯಿಂದ ನೀರು ಸುರಿಯಿತೆಂದಮೇಲೆ—

ಗಾಳಿ ಬಲವಾಗಿ ಬೀಸಿತು, ಮತ್ತೊಮ್ಮೆ. ಬಲ್ಲೋನೆ ರೊಯ್‌ರೊಯ್ಯೆಂದು ಕಿಟಕಿಗೆ ಬಡೆಯಿತು. ಧಡಾರನೆ ಮುಚ್ಚಿಕೊಂಡಿತು ಅರ್ಧಬಾಗಿಲು. ದೀಪ ಅತ್ತಿತ್ತ ತೂಗಾಡಿತು. ಅದನ್ನು ಅನುಸರಿಸಿ ನೆರಳೂ ಉಯ್ಯಾಲೆಯಾಡಿತು ಗೋಡೆಯ ಮೇಲೆ.

ಗಾಳಿ ಬೀಸುತ್ತಲೇ ಇದ್ದರೆ ಮೋಡಗಳು ಚೆದರಿ ಹೋಗುತ್ತವೆಂಬುದು ಮುರಲೀಧರನಿಗೆ ಗೊತ್ತಿತ್ತು. ಆದರೆ ಆ ರಾತ್ರೆ, ಎಂದೂ ಕುಂದದ ಅಕ್ಷಯ ಸೇನೆಯ ಹಾಗೆ ಕಾರ್ಮೋಡಗಳು ದಟ್ಟೈಸಿದ್ದುವು. ಗಾಳಿಯೇ ದುರ್ಬಲವಾಗಿತ್ತು, ಆಗಲೆ ಕೈಸೋತು.

ಕಿಟಕಿ ಮುಚ್ಚಿದರೇನಂತೆ, ಅದರ ಸಂದಿಯಿಂದಲೇ ನೀರು ಧಾರೆ ಕಟ್ಟಿ ಒಳಕ್ಕೆ ಬಂತು. ಅಂಗಳವಾಗಲೆ ಕೆರೆಯಾಗಿತ್ತು, ಬಾಗಿಲಿನೆದುರು.

ಕೊನೆಯ ಕೊಠಡಿಯವನು ಹೇಳುತ್ತಿದ್ದ;

"ಮಳೆಗಾಲದಲ್ಲಿ ಇಲ್ಲೊಂದು ದೋಣಿ ಬೇಕು ಕಣ್ರೀ!"

ಅದನ್ನು ಕಾರ್ಯಗತಗೊಳಿಸಲು ಸಲಹೆಯೂ ಬಂದಿತ್ತು.

"ನಾವೇ ಕೊಂಡುಕೊಂಡು ತರೋಣ. ಹಣ, ಬಾಡಿಗೇಲಿ ಹಿಡಕೊಂಡರಾಯ್ತು."

ಕೆರೆ ಅಂಗಳದಲ್ಲಿ ಮಾತ್ರವಲ್ಲ. ಕೆಳಗೆ ಎಲ್ಲಾದರೂ ಒಮ್ಮೊಮ್ಮೆ ಚರಂಡಿ ಮುಚ್ಚಿಹೋಯಿತೆಂದರೆ, ಬೀದಿಯಲ್ಲೂ ನೀರು ನಿಲ್ಲುತಿತ್ತು. ಕೆಳಗೆ ದೂರದಲ್ಲಿದ್ದ ಹೋಟೆಲಿನ ಬಾಗಿಲವರೆಗೂ ನೀರೇ ಆಗ.

ಕೆರೆಯ ಬದಲು, ವಿಸ್ತಾರವಾದ ಸರೋವರ.

ಹೆಂಚುಗಳೆಡೆಯಿಂದ ನೀರು. ಮೊದಲು ಒಂದೆಡೆಯಿಂದ, ಬಳಿಕ ಹಲವಾರು ಕಡೆಗಳಿಂದ. ಮುಖ ತೊಳೆಯಲೆಂದು ನೀರು ತಂದಿಡುತ್ತಿದ್ದ ಒಂದು ಬಕೀಟಿತ್ತು. ನೀರು ಹೆಚ್ಚಾಗಿ ಸುರಿಯುತ್ತಿದ್ದ ಕಡೆ ಮುರಲಿ ಅದನ್ನಿರಿಸಿದ. ಪುಸ್ತಕಗಳಿದ್ದ ದೇವದಾರು ಹಲಗೆಯ ಪೆಟ್ಟಿಗೆಯನ್ನು, ಸುರಕ್ಷಿತವೆಂದು ತಾನು ಭಾವಿಸಿದ್ದ ಒಂದು

ಮೂಲೆಗೆ ಒಯ್ದು ನಿಲ್ಲಿಸಿದ. ಚಾಪೆಯನ್ನು ಸುರುಳಿ ಸುತ್ತಿ ಪೆಟ್ಟಿಗೆಯ ಮೇಲಿಟ್ಟ. ಹಗ್ಗದ ಮೇಲಿದ್ದ ಪಾಯಜಾಮವನ್ನೂ ಮೊಳೆಗೆ ತಗಲಿಸಿದ್ದ ಜುಬ್ಬವನ್ನೂ ಆ ಸುರುಳಿಯ ಮೇಲೆ ರಾಶಿ ಹಾಕಿದ.

ಸೋಲನ್ನೊಪ್ಪಿಕೊಂಡ ಗಾಳಿ ನಿಶ್ಚಲವಾಯಿತು. ಮಳೆಯೊಂದೇ ಸುರಿಯಿತು ಏಕಪ್ರಕಾರವಾಗಿ.

ಬಾಗಿಲನ್ನು ಪೂರ್ತಿ ಮುಚ್ಚಿ, ಅರ್ಧ ಕಿಟಿಕಿ ತೆರೆದು, ಮುರಲೀಧರ ಅದರ ಬಳಿ ಬಂದು ನಿಂತ.

ಯಾವ ಮುನ್‌ಸೂಚನೆಯೂ ಇಲ್ಲದೆ ದೀಪ ಆರಿ ಹೋಯಿತು. ಕತ್ತಲು ಕವಿದುದು ಆ ಕೊಠಡಿಯೊಂದನ್ನೇ ಅಲ್ಲ. ದೃಷ್ಟಿ ಹರಿಯುವಷ್ಟು ದೂರ ಆ ಪ್ರದೇಶದಲ್ಲೆಲ್ಲೂ ಬೆಳಕಿರಲಿಲ್ಲ.

ಆ ಅಪರಾತ್ರಿಯಲ್ಲಿ ವಿದ್ಯುತ್ ಬೆಳಕು ಮತ್ತೆ ಬರುವುದೆಂಬ ನಿರೀಕ್ಷೆಯಂತೂ ಭ್ರಮೆಯೇ.

ಮಳೆ ನಿಲ್ಲುವ ತನಕ ಆತ ಮಾಡುವುದು ಏನೂ ಉಳಿಯಲಿಲ್ಲ. ಕಾದಿರುವುದು, ಆವರೆಗೂ ಕಾದಿರುವುದು.

ಮನಸ್ಸು ಅಂತರ್ಮುಖಿಯಾಗಿ ತನ್ನ ಸಂಕಟವನ್ನು ನೆನೆಯಿತು.

ಯಾವುದಾದರೂ ವಿದ್ಯಾರ್ಥಿ ನಿಲಯವನ್ನು ಸೇರಲು ಎಷ್ಟೊಂದು ಪ್ರಯತ್ನಿಸಿದ್ದ ಆತ! ಯತ್ನ ಯಶಸ್ವಿಯಾಗಿರಲಿಲ್ಲ. ಮೊದಲ ವರ್ಷ ಆತ ಬೆಂಗಳೂರಿನಲ್ಲಿದ್ದುದು ಪರಿಚಯದವರೊಬ್ಬರ ಮನೆಯಲ್ಲಿ. ಊಟವಿರದೆ ಇದ್ದರೂ ವಾಸಕ್ಕೆಂದು ಕೊಠಡಿ ಕೊಟ್ಟಿದ್ದರು. ಬಾಡಿಗೆ ಇರಲಿಲ್ಲ. ಆದರೆ ಅವರ ಮನೆಯ ಹುಡುಗನಿಗೆ ಪಾಠ ಹೇಳಬೇಕಾಗಿತ್ತು. ಆ ಸಂಸಾರಕ್ಕೋಸ್ಕರ ಅಂಗಡಿ ಬೀದಿಯಿಂದ ಸಾಮಾನು ತರುವಂತಹ ಸಣ್ಣ ಪುಟ್ಟ ಕೆಲಸಗಳು ಬೇರೆ.

ಕಾಲೇಜಿಗೆ ದೂರವಾದರೂ ಒಂದು ರೀತಿಯಲ್ಲಿ ಅನುಕೂಲವಾಗಿತ್ತು.

ತಂದೆ ಸ್ಪಷ್ಟವಾಗಿ ಹೇಳಿಬಿಟ್ಟಿದ್ದರು:

'ಹೋಟೆಲು ಊಟದ ಶ್ರೀಮಂತಿಕೆ ಇನ್ನು ಸಾಧ್ಯವಾಗೋದಿಲ್ಲ ಮುರಲಿ.'

ತಾಯಿ ಆತನ ಪಕ್ಷ ವಹಿಸಿದ್ದರು.

'ದೊಡ್ಡ ಹುಡುಗರಿಗಂತೂ ಓದಿಸ್ಲಿಲ್ಲ. ಇವನೊಬ್ಬನಾದರೂ'

ತಂದೆ ಗದರಿದ್ದರು:

'ಸಾಕು ಅಧಿಕ ಪ್ರಸಂಗ! ನನ್ನಮಕ್ಕಳು ಯಾರೂ ಹೆಚ್ಚು ಓದಬೇಕಾದ್ದಿಲ್ಲ.'

ಒಂದು ಒಡಂಬಡಿಕೆ ಸಾಧ್ಯವಾದುದು ಹಿರಿಯಣ್ಣನಿಂದ. ಕೊನೆಗೆ, ಪ್ರತಿ ತಿಂಗಳೂ ಹದಿನೈದು ರೂಪಾಯಿ ಕಳುಹಲು ತಂದೆ ಒಪ್ಪಿದ್ದರು.

ಅವರು ಎಚ್ಚರಿಕೆಯನ್ನೂ ಕೊಟ್ಟಿದ್ದರು:

'ಒಂದು ಸಲ ಫೇಲಾದೆ ಅಂದ್ರೆ, ಅಲ್ಲಿಗೇ ಮುಕ್ತಾಯ. ನೆನಪಿಟ್ಕೋ.'

ಕಾಲೇಜು ಆರಂಭವಾಗುವ ಹೊತ್ತಿಗೆ ಮುರಲೀಧರ ಬೆಂಗಳೂರಿಗೆ ಬಂದ. ಆ ಪರಿಚಿತರ ಮನೆ ಅಲ್ಲಿರಲಿಲ್ಲ. ಅವರಿಗೆ ದಾವಣಗೆರೆಗೆ ವರ್ಗವಾಗಿತ್ತು.

ಆದರೂ ಎದೆಗುಂದದೆ ಆತ, ಐದು ರೂಪಾಯಿ ಬಾಡಿಗೆಗೆ ಒಂದು ಕೊಠಡಿ ಗೊತ್ತು ಮಾಡಿದ. ಒಂದೆರಡು ಕಡೆ ವಾರಾನ್ನ ದುಸ್ಸಾಧ್ಯವಾಗಿರಲಿಲ್ಲ. ಆದರೂ ಅದನ್ನು ಇಷ್ಟಪಡದೆ ಸ್ವಂತ ಅಡುಗೆಗೆ ಕೈ ಹಾಕಿದ. ಬೇಯಿಸುತ್ತಿದ್ದುದು ಅನ್ನ ಮಾತ್ರ. ಒಂದಾಣೆಯ ಸಾರು ಹೋಟೆಲಿನಿಂದ ಬರುತ್ತಿತ್ತು. ಅದೇ ಎರಡು ಹೊತ್ತಿಗೂ. ಹಣ ಮುಗಿಯುತ್ತ ಬಂತೆಂದು ಮುರಲೀಧರ, ಇತರ ಹುಡುಗರು ಪುಸ್ತಕ ಕೊಂಡುಕೊಳ್ಳುತ್ತಿದ್ದ ಹೊತ್ತಿನಲ್ಲಿ ತನ್ನಲ್ಲಿದ್ದ ಒಂದೆರಡನ್ನು ಮಾರಿದ.

ಬಳಿಕ ಎರಡು ಮೂರು ಕಡೆ ಬೆಳಗ್ಗೆಯೂ ಸಂಜೆಯೂ ಪಾಠ ಗೊತ್ತುಮಾಡಿ ಕೊಂಡ ಆತ. ಆ ಸಂಪಾದನೆಯಿಂದ ಸರಾಗವಾಗಿ ಉಸಿರಾಡುವುದು ಸಾಧ್ಯವಾಯಿತು. ಶಂಕರ ಐಯರ್ ನಡೆಸುತಿದ್ದ ಭೋಜನ ಶಾಲೆಯಲ್ಲಿ ದಿನಕ್ಕೊಂದು ಊಟ ಮಾಡಿದ. ಒಮ್ಮೊಮ್ಮೆ ಬೆಳಗ್ಗೆ. ಒಮ್ಮೊಮ್ಮೆ ರಾತ್ರೆ. ಒಟ್ಟು ಹತ್ತು ರೂಪಾಯಿ ತಿಂಗಳಿಗೆ.

ಅಸಹಾಯನಾಗಿ, 'ಇನ್ನು ಸಾಕು, ಊರಿಗೆ ಹೊರಟು ಬಿಡೋಣ' ಎನ್ನುವ ಯೋಚನೆಗಳು ಎಷ್ಟೋ ಸಾರೆ ಬಂದಿದ್ದುವು ಆತನಿಗೆ. ಹಾಗಾಗುತ್ತಿದ್ದುದು ವೈಯ ಕ್ತಿಕ ಸಂಕಟಗಳು ತೀವ್ರವಾದಾಗ...

ವೈಯಕ್ತಿಕ ಸಂಕಟ...

ತಲೆಯ ಮೇಲೊಂದು ಸೂರಿತ್ತು. ಆದರೂ ಮಳೆಯಿಂದ ರಕ್ಷಣೆ ಇರಲಿಲ್ಲ. ತನ್ನಷ್ಟು ಅನುಕೂಲವೂ ಇರದ ಸಹಸ್ರ ಸಹಸ್ರ ಜನ. ಅವರೆಲ್ಲ ತೋಯಿಸಿಕೊಳ್ಳು ತ್ತಿದ್ದರು, ತಲೆಯ ಮೇಲೆ ಬರಿಗೈ ಇರಿಸಿ. ತನ್ನನ್ನೂ ಮಳೆ ತೋಯಿಸುತ್ತಿತ್ತು. ಆದರೆ 'ಕೊಡೆ' ಇತ್ತು ತನಗೆ. ಈ ಪ್ರಪಂಚದ ದೃಷ್ಟಿಯಲ್ಲಿ ಕೊಡೆ ಇದ್ದೂ ತೋಯಿಸಿ ಕೊಳ್ಳುವವರೇ ವಾಸಿ, ಏನೂ ಇಲ್ಲದವರಿಗಿಂತ!

ಬದುಕು ಅಸಹನೀಯ ಎನಿಸುತ್ತಿದ್ದ ಘಳಿಗೆಗಳು. ಆದರೆ ಹಾಗಿದ್ದುದು ತನ ಗೊಬ್ಬನಿಗೇ ಏನು? ತನ್ನೊಬ್ಬನ ಆವರಣವನ್ನು ದಾಟಿ ಸುತ್ತಲೂ ಹತ್ತು ಕಡೆ ನೋಡಿ ದಾಗ ತನ್ನ ಪ್ರತಿಬಿಂಬಗಳೇ ಕಾಣಿಸುತ್ತಿರಲಿಲ್ಲವೆ ಆತನಿಗೆ? ತನ್ನ ಆರ್ತನಾದದ ಪ್ರತಿ ಧ್ವನಿಯೇ ಕೇಳಿಸುತ್ತಿರಲಿಲ್ಲವೆ?...

....ಜೋರೋ...ಚಿರಿ ಚಿರಿ ಚಿರಿ...ಚಿಟ್...ಚಿಟ್....

ಅರ್ಧ ತುಂಬಿದ್ದ ಬಕೀಟು ಮಾತ್ರವಲ್ಲ, ಹೊರಗಿನ ಭೂಮಿ ಕೂಡ.

ಮಳೆ ನಿಂತಿತೇನೋ ಹಾಗಾದರೆ?

ಹೌದು, ನಿಂತಿತ್ತು. ರಭಸ ಕಡಮೆಯಾಗಿ ಈಗ ಬೀಳುತ್ತಿದ್ದುದು ಬರಿಯ ಹನಿ....ತಟ ಪಟ...ಬರಿಯ ಹನಿ.

ಆದರೂ ಧೋ ಧೋ ಎಂದು ಸದ್ದು ಕೇಳುತ್ತಿತ್ತು. ಚರಂಡಿಯಲ್ಲಿ ಹರಿಯು ತ್ತಿದ್ದ ನೀರು.

ಕೊಚ್ಚೆ ನೀರಿನ ಜಲಪಾತ!

"ರೀ, ಮುರಲೀಧರ್! ರೀ! ಇದ್ದೀರೇನ್ರಿ ಒಳಗೆ?"

ಬಾಗಿಲು ತಟ್ಟಿದವನು ಕೊನೆಯ ಕೊಠಡಿಯಾತ.

"ಬನ್ನಿ, ಇದೀನಿ" ಎನ್ನುತ್ತ ಮುರಲೀಧರ ಕದ ತೆರೆದ.

ಮಂಡಿಯಲ್ಲಿ ಹೊಸದಾಗಿ ಗುಮಾಸ್ತೆ ಕೆಲಸಕ್ಕೆ ಸೇರಿಕೊಂಡಿದ್ದ ವ್ಯಕ್ತಿ ಆತ. ಒಂಟಿಯಾಗಿದ್ದ ಯುವಕ. ಆತ ಹೊರಗೇ ನಿಂತು ಹೇಳಿದ:

"ದೀಪಾನೇ ಇಲ್ವಲ್ರೀ. ನೆಲವೆಲ್ಲಾ ನೀರೇ. ಏನಪ್ಪಾ ಇದು? ಜಲಪ್ರಳಯವೋ ಏನ್ಕತೆ?"

"ನನ್ನ ಕೊಠಡೀಲೂ ಅಷ್ಟೆ. ಸದ್ಯಃ ಮಳೆ ನಿಂತಿತಲ್ಲ!"

"ಬೆಂಕಿ ಪೊಟ್ಣ ಇದ್ದರೆ ಕೊಡಿ ನೋಡೋಣ. ಒಂದು ಮೋಂಬತ್ತಿ ಇದ್ದ ಹಾಗೆ ನೆನಪು. ಎಲ್ಲಿದೆಯೋ ಹುಡುಕ್ಬೇಕು."

"ಇಲ್ವಲ್ರೀ...."

"ನನಗೊಂದು ಹುಚ್ಚು. ಸಿಗರೇಟು ಸೇದೋ ನನ್ನಲ್ಲೇ ಇಲ್ಲವೆಂದ ಮೇಲೆ ನಿಮ್ಮಲ್ಲಿರುತ್ತಾ?"

ಮುರಲೀಧರ ಸಣ್ಣನೆ ನಕ್ಕ.

ಬಂದಿದ್ದವನು ಗೊಣಗುತ್ತ ಮನೆ ಮಾಲಿಕನನ್ನು ಶಪಿಸುತ್ತ ತನ್ನ ಕೊಠಡಿಗೆ ಹಿಂತಿರುಗಿದ.

....ನಿಂತ ಮಳೆ ಮತ್ತೆ ಬರಲಿಲ್ಲ.

ನೆಲದ ನೀರಿಗೆ ಹರುಕು ಬಟ್ಟೆಯೊಂದನ್ನು ಅದ್ದಿ ಅದ್ದಿ ಮುರಲೀಧರ ಬಕೀಟಿಗೆ ಹಿಂಡಿದ. ಬಹಳ ಹೊತ್ತಿನ ಮೇಲೆ, ನೀರಿನ ಬದಲು ತೇವವಷ್ಟೆ ಉಳಿಯಿತು. ಪೆಟ್ಟಿಗೆಯನ್ನು ಮೊದಲ ಸ್ಥಾನದಲ್ಲೇ ಇರಿಸಿ, ಆ ಜಾಗದಲ್ಲಿ ಚಾಪೆಯನ್ನು ಬಿಡಿಸಿದ.

...ನಿದ್ದೆ ಬಲು ದೂರವಿತ್ತು. ಮೂಳೆಗಳನ್ನೇ ಅಪ್ಪಿಕೊಂಡಿತ್ತು ಮೈಯನ್ನು ಹೊಕ್ಕಿದ್ದ ಚಳಿ.

ದಿನಚರಿ ಬರೆಯುವುದಾಗಲಿಲ್ಲ ಆ ರಾತ್ರೆ.

ಮುರಲೀಧರನೆಂದುಕೊಂಡ:

'ಈ ಅನುಭವವನ್ನೆಲ್ಲ ತಾನು ಬರೆದಿಡಬೇಕು; ಬೆಳಗ್ಗೆ ಎದ್ದೊಡನೆಯೆ ಬರೆಯಬೇಕು.'

....ಹತ್ತಿಯ ಚಾದರವನ್ನು ಆದಷ್ಟು ಬಿಗಿಯಾಗಿ ಮೈಗೆ ಸುತ್ತಿಕೊಳ್ಳುತ್ತ ಮುರಲೀಧರ ಯೋಚಿಸಿದ.

'ಈ ದಿನದ ಈ ರಾತ್ರೆಯ ಅನುಭವದ ಟಿಪ್ಪಣಿಗೆ ತಲೆಕಟ್ಟು—ದೇವತೆಗಳ ಕಣ್ಣೀರು.'

೨

ನೀರಿನಲ್ಲಿ ಅದ್ದಿ ತೆಗೆದಿರಿಸಿದ್ದ ಹಾಗಿತ್ತು ಊರು, ಮಾರನೆಯ ಬೆಳಗ್ಗೆ. ಬೀದಿಗಳು ನಿರ್ಜನವಾಗಿದ್ದುವು. ಅಲ್ಲಿ ಇಲ್ಲಿ ಮನೆಗಳಿಂದ, ಊರ ಹೆಂಚುಗಳೆಡೆಯಿಂದ, ಹೊಗೆ ಮೇಲಕ್ಕೆ ಮೆಲ್ಲನೆ ಏಳತೊಡಗಿತು,—ಮತ್ತೆ ಎಲ್ಲಿ ಮಳೆ ಸುರಿಯುವುದೋ ಎಂದು ಅಳುಕುತ್ತ. ನಾಲ್ಕಾರು ದೊಡ್ಡ ಮನೆಗಳ ಅಡುಗೆಯೊಲೆಯ ಚಿಮಿಣಿಗಳು ಜೀವ ತಳೆದುವು. ಹಾಲಿನ ಸೈಕಲುಗಳು ಟ್ರಿಣ್‌ಗುಟ್ಟಿದುವು. ಗೂಡೆಯಲ್ಲೇ ಯಾವಾಗಲೂ ಪಾತ್ರೆಗಳನ್ನು ಹೊತ್ತು ತರುತ್ತಿದ್ದ ಹಾಲವ್ವನೂ ಮಂದಗಮನೆಯಾಗಿ ಬಂದಳು, ಎಡಗೈಯಿಂದ ಬುಟ್ಟಿಯನ್ನು ಆಧರಿಸುತ್ತ, ಬಲಗೈಯಿಂದ ಸೆರಗನ್ನು ಬಾಯಿಗೆ ಒತ್ತಿಕೊಳ್ಳುತ್ತ.

ಕೇಳಿ ಬಂದುದು ಮಾಮೂಲಿನ ಮಾತೇ.

"ಆಲು ಆಕಿಸ್ಕೊಳ್ರೆವ್ವಾ."

ಯಜಮಾನಿತಿ ಅಂದರು.

"ಬರೇ ನೀರು."

ಆಕೆಯ ಭುಜದ ಮೇಲಿಂದ ಮುಖ ತೋರಿಸಿ ಯಜಮಾನರೆಂದರು.

"ಮಳೇಲಿ ಎಮ್ಮೆ ತೋಯಿಸ್ಕೊಂಡ್ತೇನೋ, ಪಾಪ!"

ಗಂಡಸುಧ್ವನಿ ಕೇಳಿತೆಂದು ಹಾಲವ್ವನಿಗೆ ನಾಚಿಕೆಯಾಯಿತು.

"ಓಗಿ ಸೋಮಿ, ನೀವು...."

ಬೀದಿಯ ಮೂಲೆಯಿಂದ ಕೇಳಿಸಿತು ಉದಯರಾಗ.

"ಕೊತ್ತಮಿರಿ ಸೊಪ್ಪು, ಮೆಂತೇಸೊಪ್ಪು, ಮುಲ್ಲಂಗೀ..."

ತಾಳಬದ್ಧವಾದ ಲಯಬದ್ಧವಾದ ಪದೋಚ್ಚಾರ. ಹೆಜ್ಜೆ ಹೆಜ್ಜೆಗೂ ಕುಲುಕುತ್ತಿದ್ದ ಕಂಠ.

ಶೇಷಣ್ಣನವರ ವಠಾರದಿಂದ ತರಕಾರಿಯವಳಿಗೆ ಕರೆಬಂತು.

"ಏ ಕೊತ್ತಮಿರಿ ಸೊಪ್ಪು, ಬಾ ಇಲ್ಲಿ!"

ಮೂರು ಕಾಸಿನ ವ್ಯಾಪಾರ, ಎಂದಿನಂತೆಯೇ.

ಎಳೆಯ ಹುಡುಗರು ಅಂಗಳದ ಕೊಚ್ಚೆಯನ್ನು ದಾಟಿ ಬೀದಿಗಿಳಿದರು. ಅವರ ಅರಿವಿಲ್ಲದೆಯೇ ರಾತ್ರೆ ಸುರಿದುಬಿಟ್ಟಿತ್ತು ಮಳೆ. ಆದರೂ ಚರಂಡಿಯಲ್ಲಿ ನೀರಿತ್ತು, ಇಣಿಕಿ ನೋಡುವಷ್ಟು, ಇಳಿಯುವ ಸಾಹಸ ತೋರುವಷ್ಟು. ಬೀದಿ, ದೊಡ್ಡರಸ್ತೆಯನ್ನು ಸೇರಿಕೊಳ್ಳುವ ಮೂಲೆಯಲ್ಲಂತೂ, ಕಸಕಡ್ಡಿಗಳ ರಾಶಿಯನ್ನೇ ಎರಡು ಬದಿಗಳಿಗೂ ಚರಂಡಿ ಉಗುಳಿತ್ತು.

ಬೆಳಗ್ಗೆ ಬೇಗನೆದ್ದು ದಿನಚರಿಯ ಪುಸ್ತಕದೊಡನೆ ಹೊತ್ತುಕಳೆದ ಮುರಲೀಧರ, ಸೂರ್ಯರಶ್ಮಿ ಕಣ್ಣಿಗೆ ಬೀಳುವುದೇನೋ ಎಂದು ಹೊರಗಿಣಿಕಿ ನೋಡಿದ. ಮಂದ

ಪ್ರಕಾಶವಿತ್ತು. ದಿಟ್ಟತನದಿಂದ ಸೂರ್ಯ ಬಲುಬೇಗನೆ ಮೇಲಕ್ಕೇರುವ ಚಿಹ್ನೆಗಳಿದ್ದುವು. ಹಗಲು ಮಳೆ ಇಲ್ಲವಲ್ಲ—ಎಂದು ಸಮಾಧಾನಪಟ್ಟುಕೊಂಡು ಮುರಲೀಧರ, ಅಂಗಳದ ಅಂಚಿನಲ್ಲಿ ನಿಂತು ಚರಂಡಿಯ ಕಡೆ ನೋಡುತ್ತ ಗಾಢವಾದ ಆಲೋಚನೆಯಲ್ಲಿ ಮಗ್ನರಾಗಿದ್ದ ಎಳೆಯರ ಗುಂಪನ್ನು ದಿಟ್ಟಿಸಿದ.

ಅಯ್ಯರ್ ಭೋಜನ ಶಾಲೆ ಉಸಿರಾಡತೊಡಗಿತ್ತು. ನಿತ್ಯದ ಗ್ರಾಹಕರಿಗಾಗಿ ಕಾಫಿಯನ್ನೂ ಕೊಡುತ್ತಿದ್ದ ಶಂಕರಯ್ಯರ್. ಬೀದಿಯ ಮೂಲೆಯಿಂದ ಬೀಡದ ಅಂಗಡಿಯವನೂ ಬಂದ, ಕದ ತೆರೆಯಲೆಂದು.

ರಾತ್ರಿಯೆಲ್ಲ ಬರದೇ ಇದ್ದ ಮಗ್ಗುಲು ಕೊಠಡಿಯವನು, ಬೇರೆಯೇ ಲೋಕದಿಂದ ಬಂದವನಂತೆ ಪ್ರತ್ಯಕ್ಷನಾದ. ಬಟ್ಟೆಬರೆಗಳು ಬೆಚ್ಚಗಿದ್ದುವು. ತೋಯ್ದಿದ್ದ ಆ ಪ್ರದೇಶವನ್ನೆಲ್ಲ ನೋಡುತ್ತ 'ಇಸ್ಸಿ' ಎನ್ನುವಂತಿತ್ತು ಆತನ ಮುಖಭಾವ.

ಮುರಲೀಧರನನ್ನು ನೋಡಿದೊಡನೆ, ರಾತ್ರೆ ಬರದಿದ್ದುದಕ್ಕೆ ವಿವರಣೆ ಎಂಬಂತೆ ಆತನೆಂದ:

"ಮಳೇಲಿ ಸಿಕ್ಹಾಕ್ಕೊಂಡೆ ಕಣ್ರೀ. ಸ್ನೇಹಿತರ ಮನೇಲೆ ಇದ್ಬಿಟ್ಟೆ."

ತನ್ನ ನಿತ್ಯದ ಕೆಲಸವನ್ನು ಕುರಿತು ಆಗಲೆ ಯೋಚಿಸತೊಡಗಿದ್ದ ಮುರಲೀಧರ ಕೇಳಿದ.

"ಫ್ಯಾಕ್ಟರಿಗೆ ಹೋಗೋಲ್ವೆ ಹಾಗಾದರೆ?"

"ಇನ್ನು ಹೋಗೋದೇನ್ಬಂತು? ತಡವಾಯ್ತಲ್ಲ! ಒಳಗಂತೂ ಏನೇನು ಆಗಿದೆಯೊ?"

ಒಳಗಿನ ಸ್ಥಿತಿ ಮುರಲೀಧರನಿಗೆ ತಿಳಿಯದೆ? ಕದ ತೆರೆದೊಡನೆ ಹಿಡಿ ಶಾಪದ ಬೈಗಳು. ಆತನಿಗೆ ಗೊತ್ತಿತ್ತು.

ಕೊನೆಯ ಕೊಠಡಿಯವನಂತೂ ಎದ್ದೇ ಇರಲಿಲ್ಲ...

...ತಡವಾಗಬಾರದೆಂದು ಮುರಲೀಧರ ಬಾಗಿಲೆಳೆದುಕೊಂಡು ಭೋಜನ ಶಾಲೆಗೆ ಧಾವಿಸಿದ. ಒಲೆ, ಸೌದೆ, ಎರಡೂ ಒದ್ದೆಯಾಗಿದ್ದುದರಿಂದ ಸ್ನಾನದ ನೀರು ಬಿಸಿಯಾಗಿರಲಿಲ್ಲ. ಹೊತ್ತಾಯಿತೆಂದು ಏಳೆಂಟು ಜನ, ಸ್ನಾನದ ಮನೆಯ ಬಾಗಿಲ ಬಳಿ ಗದ್ದಲ ಮಾಡುತ್ತ ಸುಳಿದಾಡುತ್ತಿದ್ದರು. ಮುರಲೀಧರ ಸ್ನಾನದ ಯೋಚನೆಯನ್ನು ಬಿಟ್ಟು, ಇತರ ಪ್ರಾತರ್ವಿಧಿಗಳನ್ನು ತೀರಿಸಿ, ಗುಟುಕು ಕಾಫಿಯನ್ನು—ಬಿಸಿಯ ದ್ರಾವಕವನ್ನು—ಗಂಟಲೊಳಗೆ ಸುರಿದ. ತಣ್ಣಗಿದ್ದ ದೇಹಕ್ಕೆ ಆ ಸೇವನೆ ಆಪ್ಯಾಯಮಾನವಾಗಿತ್ತು. [ಲೆಕ್ಕ ಪುಸ್ತಕದಲ್ಲಿ ಬರೆದು ಕಾಫಿ ತಿಂಡಿಯನ್ನೆಂದೂ ಆತ ತೆಗೆದುಕೊಳ್ಳುತ್ತಿರಲಿಲ್ಲ. ತಿಂಡಿ, ಎಂದಾದರೊಮ್ಮೆ ಆತ ರುಚಿ ನೋಡುತ್ತಿದ್ದ ವಸ್ತು. ಕಾಫಿಗೆ ಒಂದಾಣೆ. ಅದು ನಗದಾಗಿಯೇ ಸಂದಾಯವಾಗುತ್ತಿತ್ತು.]

ಮುರಲೀಧರ ಪಾಠ ಹೇಳುತ್ತಿದ್ದ ಮನೆ ಇದ್ದುದು ಅರ್ಧ ಮೈಲಿ ದೂರದಲ್ಲಿ, ಏಳೂವರೆಯ ಹೊತ್ತಿಗೆಲ್ಲ ಆತ ಅಲ್ಲಿರಬೇಕು. ಅವಸರ ಅವಸರವಾಗಿಯೇ,

ಹೊರಡುವ ಸಿದ್ಧತೆಗೋಸ್ಕರ ಕೊಠಡಿಗೆ ಧಾವಿಸಿದ. ಹಿಂದಿನ ರಾತ್ರೆ ಮಳೆ ಸುರಿಯ ತೊಡಗಿದಾಗ ಜುಬ್ಬವನ್ನೂ ಪಾಯಜಾಮವನ್ನೂ ಬಲು ಎಚ್ಚರಿಕೆಯಿಂದ ತೆಗೆದು ಇರಿಸಿದ್ದನೇನೋ ನಿಜ. ಆದರೆ ತೇವ ತುಂಬಿದ್ದ ಗಾಳಿಯು ದೆಸೆಯಿಂದ ಮೈ ಕೊರೆಯು ವಷ್ಟು ತಣ್ಣಗಿದ್ದುವು ಬಟ್ಟೆ ಬರೆ. ಇರಿಚಲು ಬೀಸಿ ಒಂದೆರಡು ಕಡೆ ತೋಯ್ದಿದ್ದುವು ಕೂಡ. ಮೈಯು ಮೇಲೆಯೇ ಉಡುಪನ್ನು ಒಣಗಿಸಿಕೊಳ್ಳುವುದು ಹೊಸದೇನೂ ಅಲ್ಲವಲ್ಲ! ಅದನ್ನೇ ತೊಟ್ಟು, ಒದ್ದೆಯಾಗಿ ಭಾರವಾಗಿದ್ದ ಚಪ್ಪಲಿಗಳನ್ನು ಮೆಟ್ಟಿ ಮುರಲೀಧರ ಹೊರಬಿದ್ದ.

ಒಂದೆರಡು ಸಲ ಮನೆಯ ಒಡತಿ ಕೇಳಿದ್ದರು:

'ಮೇಸ್ಟ್ರೆ, ಎಷ್ಟು ಗಂಟೆ?'

ತಡವಾಗಿ ಬರುತ್ತಿದ್ದ ಕೆಲಸದವಳನ್ನೂ ಅವರು ಆಗಾಗ್ಗೆ ಕೇಳುವುದಿತ್ತು:

'ಸೀತಮ್ಮಾ, ಎಷ್ಟೇ ಗಂಟೆ?'

ಆ ಪ್ರಶ್ನೆ, ಆ ಧ್ವನಿ, ಮುರಲೀಧರನಿಗೆ ಅಪರಿಚಿತವಾಗಿರಲಿಲ್ಲ. ಹತ್ತು ಹದಿ ನೈದು ನಿಮಿಷ ತಾನು ತಡವಾಗಿ ಹೋದ ಅಂತಹ ಸಂದರ್ಭಗಳಲ್ಲಿ, ಮುರಲೀಧರ ಯಾವ ಉತ್ತರವನ್ನೂ ಕೊಡುತ್ತಿರಲಿಲ್ಲ. ಸಣ್ಣನೆ ಮುಗುಳುನಗುತಿದ್ದ–ತಪ್ಪು ಮಾಡಿದ ಎಳೆಯನ ಹಾಗೆ.

ಈ ದಿನವೂ ಅಂತಹ ಪ್ರಶ್ನೆಯನ್ನು ಇದಿರುನೋಡುತ್ತ ಆತ ಆ ಮನೆ ಸೇರಿದ.

ಒಡತಿ, ಹೊರಗಿನ ಕದ ತೆರೆದು ಮುರಲೀಧರನನ್ನು ಬರಮಾಡಿಕೊಳ್ಳುತ್ತ ಅಂದರು:

"ಕೂತ್ಕೊಳ್ಳಿ. ಬಂದ್ಬಿಡ್ತಾರೆ."

ಎಳೆಯ ಮಕ್ಕಳಿಬ್ಬರ ಅಭ್ಯಾಸದ ಕೊಠಡಿಯಲ್ಲಿ ಉಪಾಧ್ಯಾಯನಾಗಿ ಮುರಲೀ ಧರ ಕಾದು ಕುಳಿತ.

ಮತ್ತೂ ಹದಿನೈದು ನಿಮಿಷ ತಡವಾಗಿ ವಿದ್ಯಾರ್ಥಿಗಳು ಬಂದರು. ಮಾಧ್ಯಮಿಕ ಶಾಲೆಯಲ್ಲಿ ಅವರ ಅಧ್ಯಯನ. ಹಲವಾರು ಮಕ್ಕಳಿದ್ದ ಆ ಸಂಸಾರದಲ್ಲಿ ಅವರು ಅತ್ಯಂತ ಕಿರಿಯವರಾದ ಅಣ್ಣ ಮತ್ತು ತಂಗಿ. ಮನೆಯ ಯಜಮಾನರು, ಅಠಾರಾ ಕಚೇರಿಯಲ್ಲಿ ಹಿರಿಯ ಹುದ್ದೆಯಲ್ಲಿದ್ದ ಗಣ್ಯರು. ಸಿರಿವಂತಿಕೆ, ಮೈಜಡವಾಗಿ ಮಲಗಿ ಕೊಂಡಿದ್ದ ಮನೆ. ಆ ಮನೆಯನ್ನು ಪಾಠ ಹೇಳಲು ಗೊತ್ತುಮಾಡಿ ಕೊಟ್ಟಿದ್ದ ಮುರಲೀಧರನ ಉಪನ್ಯಾಸಕರು ಅಂದಿದ್ದರು;

'ಸ್ವತಃ ನಾನೇ ಬರಬೇಕೂಂತ ಅವರ ಆಗ್ರಹ. ಆದರೆ ನನಗೆ ಪುರುಸೊತ್ತಿಲ್ಲ. ಆ ಚಿಕ್ಕ ಹುಡುಗರಿಗೆ ಏನೂಂತ ಕಥೆ ಹೇಳ್ಕೊಂಡು ಕೂತಿರಲಿ? ನೀನು ಶ್ರದ್ಧೆಯಿಂದ ಪಾಠ ಹೇಳು. ಒಳ್ಳೆಯವರು. ತಿಂಗಳ ಕೊನೇಲಿ ಎಷ್ಟು ಕೊಡ್ತಾರೋ ಅಷ್ಟು ತಗೋ. ಹತ್ತು ರೂಪಾಯಿ ಸಿಕ್ಕಿಯೇ ಸಿಗುತ್ತೆ.'

ಆ ಉಪನ್ಯಾಸಕರಿಗಾದರೆ ಇಪ್ಪತ್ತು ಬರುತ್ತಿತ್ತು. ಹೇಳಿಕೊಡುವ ಪಾಠದ ಮಟ್ಟ ಒಂದೇ ಆದರೂ ಇಂಟರ್ ಓದುವ ವಿದ್ಯಾರ್ಥಿಗೆ ಅಷ್ಟೊಂದು ಕೊಡುವವರು ಯಾರು? ಮುರಲೀಧರನ ಕೈಗೆ ಎಂಟು ಬಂದಿತ್ತು. ಅದನ್ನು ಭದ್ರವಾಗಿ ಹಿಡಿದು ಕೊಳ್ಳುತ್ತ ಆತ ತೊದಲಿದ್ದ:

'ಹತ್ತು ಕೊಡ್ತಾರೆ ಅಂದಿದ್ರು....'

'ಈಗ ಇಷ್ಟು ತಗೊಪ್ಪಾ. ಮುಂದೆ ಜಾಸ್ತಿ ಮಾಡೋಣ,' ಎಂದಿದ್ದರು ಮಕ್ಕಳ ತಂದೆ.

ಆ ಸಂಪಾದನೆಗೂ ಎಲ್ಲಿ ಸಂಚಕಾರ ಒದಗುವುದೋ ಎಂದು, ಮುರಲೀಧರ ಮತ್ತೆಂದೂ ಅದರ ಪ್ರಸ್ತಾಪವನ್ನು ಮಾಡಲಿಲ್ಲ. 'ಮೇಸ್ಟ್ರು' ಎಂಬ ಗೌರವ ಸೂಚಕ ಸಂಬೋಧನೆಯಿಂದಲೇ, ಆತ ಸಮಾಧಾನ ಪಡಬೇಕಾಯಿತು.

ಸಂಜೆಯ ಹೊತ್ತು ಮುರಲೀಧರ ಪಾಠ ಹೇಳುತ್ತಿದ್ದ ಮನೆ ಮಾತ್ರ ಹಾಗಲ್ಲ. ನಿರ್ದಿಷ್ಟ ಸಂಪಾದನೆಯಿದ್ದ ಮಧ್ಯಮ ತರಗತಿಯ ಸಂಸಾರ. ಅವರು ಕೊಡುತ್ತಿದ್ದುದೂ ಎಂಟೇ. ಇಬ್ಬರು ಹುಡುಗರ ಆ ತಾಯಿ ಹೇಳಿದ್ದರು:

'ಎಂಟೇ ರೂಪಾಯಿ. ಹೆಚ್ಚು ಕೊಡೋದಕ್ಕೆ ನಮ್ಮಲ್ಲಿಲ್ಲ.'

ಮುಖ ಮುದುಡಿಸಿಕೊಳ್ಳದೆ ಮುರಲೀಧರನೆಂದಿದ್ದ:

'ಆಗಲಮ್ಮ.'

ಬಳಿಕ ನೆರೆಮನೆಯ ಒಬ್ಬ ಹುಡುಗನೂ ಆ ಇಬ್ಬರ ಜತೆ ಪಾಠ ಹೇಳಿಸಿಕೊಂಡ. ತನ್ನ ಪಾಲಿನ ನಾಲ್ಕು ರೂಪಾಯಿಗಳನ್ನು ಪ್ರತಿ ತಿಂಗಳೂ 'ಮೇಸ್ಟ್ರಿ'ಗೆ ತಂದೊಪ್ಪಿಸಿದ. ಆ ಮನೆಯಲ್ಲಿ ಮುರಲೀಧರನಿಗೆ ಹೆಚ್ಚು ಸಂಕೋಚವೆನಿಸುತ್ತಿರಲಿಲ್ಲ. ಎಂದಾದ ರೊಮ್ಮೆ ಅವರು ತಿಂಡಿ ಕೊಟ್ಟಾಗ, 'ಸ್ವೀಕರಿಸು' ಎನ್ನುತ್ತಿತ್ತು ಮನಸ್ಸು....

ಪಾಠ ಮುಗಿಸಿ ಹೊರಹೋಗುವವರೆಗೂ ಆತನಿಗೆ ಪೇಚಾಟವೆನಿಸುತ್ತಿದ್ದುದು ದೊಡ್ಡವರ ಮನೆಯಲ್ಲಿ. ಯಾವುದಾದರೂ ಹಬ್ಬದ ಮಾರನೆಯ ದಿನ ತಿಂಡಿ ದೊರೆ ತಾಗ, ಗಂಟಲನ್ನು ಸೇರಿದ ಬಿಸಿ ತುಪ್ಪವಾಗುತ್ತಿತ್ತು ಅದು. ತಿಂಡಿ ಮತ್ತು ನೀರು ಮಾತ್ರ. ಆ ಬಡಪಾಯಿಗೆ ಕಾಫಿಯ ಅಗತ್ಯವಿರಬಹುದೆಂದು ಮನೆಯವರು ಭಾವಿಸು ತ್ತಿರಲಿಲ್ಲ.

ಆತನ ವಿದ್ಯಾರ್ಥಿಗಳೇನೋ ಪ್ರೀತಿಯಿಂದ ಹೇಳುತ್ತಿದ್ದರು:

'ತಿನ್ನಿ ಸಾರ್. ನೀವು ತಿನ್ನೋದೇ ಇಲ್ಲ.'

[ದೊಡ್ಡವರೆಲ್ಲರನ್ನೂ 'ಸಾರ್' ಎಂದು ಸಂಬೋಧಿಸುವ ಮುರಲೀಧರನನ್ನು, ಆ ಎಳೆಯರು 'ಸಾರ್' ಎನ್ನುತ್ತಿದ್ದರು.]

ಮುರಲೀಧರ, ತಿಂಡಿಯ ತಟ್ಟೆಯನ್ನೊಮ್ಮೆ ದಿಟ್ಟಿಸಿನೋಡಿ ಮುಗುಳು ನಕ್ಕು, ಅದನ್ನು ಬರಿದುಗೊಳಿಸುತ್ತಿದ್ದ.

ಈ ಮನೆಯಲ್ಲಿ ಮುರಲೀಧರ ಸಂಕೋಚಪಟ್ಟುಕೊಳ್ಳಲು ಇನ್ನೂ ಒಂದು

ಕಾರಣವಿತ್ತು. ಆ ಎಳೆಯರ ಅಕ್ಕನೊಬ್ಬಳು ಮಹಾರಾಣೀಸ್ ಕಾಲೇಜಿನಲ್ಲಿ ಓದು ತ್ತಿದ್ದಳು, ಬಿ.ಎ. ತರಗತಿಯಲ್ಲಿ. ವಯಸ್ಸಿನಲ್ಲಿ ಪ್ರಾಯಶಃ ತನಗಿಂತ ಚಿಕ್ಕವಳು. ಆದರೆ ಹಳ್ಳಿಯವನಾದ ತನಗಿಂತಲೂ ಬೇಗನೆ ಆಕೆ ಅಧ್ಯಯನ ಆರಂಭಿಸಿರಬೇಕು. ಸುಂದರಿ, ಶೃಂಗಾರ ಪ್ರಿಯೆ. ಆಕೆ ದೃಷ್ಟಿಗೆ ಬಿದ್ದಾಗಲೆಲ್ಲ ಮುರಲೀಧರನಿಗೆ, ತಾನು ಬಡವನೆಂಬುದು ನೆನಪಾಗುತಿತ್ತು. ತನ್ನ ಉಡುಗೆತೊಡುಗೆಯ ವಿಷಯದಲ್ಲಿ ಲಜ್ಜೆ ಎನಿಸುತ್ತಿತ್ತು. ತನ್ನನ್ನು ಆಕೆ ಪ್ರೀತಿಸಿದರೂ ಪ್ರೀತಿಸಬಹುದೆಂದು ಹುಚ್ಚು ಯೋಚ ನೆಯೂ ಆತನನ್ನು ಕಾಡಿತು.

ಆದರೆ ಆ ಹುಡುಗಿ, ವಿದ್ಯಾರ್ಜನೆಗೂ ಅನುಕೂಲವಿಲ್ಲದ ಆ ವಿದ್ಯಾರ್ಥಿಯ ವಿಷಯದಲ್ಲಿ ಉದಾಸೀನಳಾಗಿಯೆ ಇದ್ದಳು. ಎಳೆಯರು ಪಾಠದ ನಡುವೆ ಅಕ್ಕನ ಪ್ರಸ್ತಾಪವೆತ್ತಿದರೆ, ಅಥವಾ ಹೊರಗೆ ಹೂದೋಟದಿಂದ ಆಕೆಯ ಸ್ವರ ಕೇಳಿಸಿದರೆ, ಮುರಲೀಧರನ ಕಿವಿ ನಿಮಿರುತಿತ್ತು. ಆತ ಅಂದುಕೊಳ್ಳುತ್ತಿದ್ದ: ಶ್ರೀಮಂತ ಕನ್ಯೆ ಬಡವನನ್ನು ಪ್ರೀತಿಸಬಾರದು ಎಂದು ಎಲ್ಲಿ ಹೇಳಿದೆ? ಪ್ರೀತಿಗೆ ನಿರ್ಬಂಧಗಳೂ ಉಂಟೆ? ಆತ ಹಾಗೆ ಯೋಚಿಸಿದರೂ ಆವಳ ಮನಸ್ಸಿನಲ್ಲಿ ಮಾತ್ರ ಸವಿಯಾದುದು ಏನೂ ಇರಲಿಲ್ಲ ಆತನಿಗೋಸ್ಕರ.

ಮುರಲೀಧರನಿಗೆ ಒಮ್ಮೊಮ್ಮೆ ಆಶ್ಚರ್ಯವೆನಿಸುವುದೂ ಇತ್ತು: ಇಷ್ಟೊಂದು ಜನ ವಿದ್ಯಾವಂತರಿರುವ ಆ ಮನೆಯಲ್ಲಿ ಅವರೇ ಯಾಕೆ ಚಿಕ್ಕವರಿಗೆ ಪಾಠ ಹೇಳ ಬಾರದು? ಆಕೆಯೇ ಯಾಕೆ ಆ ಜವಾಬ್ದಾರಿ ಹೊರಬಾರದು? ಆ ಸಮಸ್ಯೆಗೆ ಸ್ವತಃ ಆತನೇ ವಿವರಣೆಯನ್ನೂ ಒದಗಿಸುತ್ತಿದ್ದ: ದೊಡ್ಡವರ ಮನೆಯಲ್ಲಿ ಬೇರೆಯವರಿಂದಲೇ ಪಾಠ ಹೇಳಿಸುವುದು ಪದ್ಧತಿ.

......ಅಣ್ಣನೂ ತಂಗಿಯೂ ಬಂದರು. 'ತಡವಾಯ್ತೆ ಸಾರ್?' 'ಬಹಳ ಹೊತ್ತಾಯ್ತಾ ಬಂದು?' ಎನ್ನುವ ಒಂದು ಮಾತೂ ಇಲ್ಲ. ಹುಡುಗ ಉಣ್ಣೆಯ ಕೋಟು ಧರಿಸಿದ್ದ. ಸೊಂಪಾಗಿ ಬೆಳೆದಿದ್ದ ಮುದ್ದು ಮುಖ. ಹಣೆಯ ಮೇಲೆ ಲಾಸ್ಯವಾಡುತಿದ್ದ ಗುಂಗುರು ಕೂದಲು. ಆ ತುಂಬು ದವಡೆಗಳನ್ನು ಬೆರಳಿನಿಂದ ಮುಟ್ಟಿ ತಿವಿಯ ಬೇಕೆನ್ನಿಸುತ್ತಿತ್ತು ನೋಡಿದವರಿಗೆ. ಹುಡುಗಿ, ತೊಟ್ಟಿದ್ದ ಲಂಗದ ಮೇಲೆ ಇಡಿಯ ಕೈಗಳ, ಕಾಲರಿದ್ದ, ಸ್ವೆಟರ್ ಧರಿಸಿದ್ದಳು. ಅಕ್ಕನಂತೆಯೇ ಸುಂದರಿ.

ಶ್ಯಾಮು ಕೇಳಿದ:

"ಮಳೆ ನಿಂತ್ಹೋಯ್ತು, ಅಲ್ವೆ ಸಾರ್?"

ಕಿಟಕಿಯಾಚೆಗೆ ಓಡುತ್ತಿತ್ತು ಆತನ ದೃಷ್ಟಿ. ಮಳೆ ಆಗ ಸುರಿಯುತ್ತಿರಲಿಲ್ಲ ವೆಂದು ಎಷ್ಟೊಂದು ವಿಷಾದವೆನಿಸಿತ್ತು ಅವನಿಗೆ!

"ಹೂಂ."

ನಳಿನಿ ಮಿಸುಕುವ ಬೊಂಬೆಯಂತೆ ಉಪಾಧ್ಯಾಯರನ್ನೂ ಅಣ್ಣನನ್ನೂ ನೋಡುತ್ತ ಕುಳಿತಳು. ಮುರಲೀಧರನ ಜುಬ್ಬ ಒಂದೆರಡು ಕಡೆ ಒದ್ದೆಯಾಗಿದ್ದುದನ್ನು

ಕಂಡು, ಶ್ಯಾಮು ಪ್ರಶ್ನಿಸಿದ:

"ಮಳೇಲಿ ನೆನಕೊಂಡು ಬಂದಿರಾ ಸಾರ್?"

"ಇಲ್ಲವಲ್ಲ!"

ಶ್ಯಾಮುನಿಗೆ ನಿರಾಸೆಯಾಯಿತು. ಆತನೆಂದ:

"ನಮ್ಮ ಅಮ್ಮ ಅಂದ್ಲು–ರಾತ್ರಿ ಭಾರೀ ಮಳೆ ಬಂತಂತೆ.... ಇವತ್ತು ಸ್ಕೂಲಿಗೆ ರಜಾ ಕೊಡಬಹುದು. ಅಲ್ವೆ ಸಾರ್?"

ಹಜಾರದಲ್ಲಿದ್ದ ಗಡಿಯಾರ ಎಂಟು ಹೊಡೆಯತೊಡಗಿತು. ತುಸು ಅಸಹನೆ ಯಿಂದ ಮುರಲೀಧರನೆಂದ:

"ರಜಾ ಕೊಡೋದು ಕಾಣ್ಲೆಲ್ಲ. ಎಲ್ಲಿ, ಪಾಠ ಶುರುಮಾಡೋಣ."

ಆವರೆಗೂ ಸುಮ್ಮನಿದ್ದ ನಳಿನಿ ಅಂದಳು.

"ಇವತ್ತು ಪಾಠ ಬೇಡಿ ಸಾರ್, ಮಳೆ ಅಲ್ವಾ?"

ಮುರಲೀಧರ ನಸುನಕ್ಕ:

"ನಿಮ್ಮಮ್ಮ ಬಯ್ತಾರೆ."

"ಊಂ! ಬಯ್ಯೊಲ್ಲ..."

ಅಷ್ಟರಲ್ಲೆ ಅವರ ತಾಯಿಯ ಧ್ವನಿ ಸಮೀಪದಿಂದಲೇ ಕೇಳಿಸಿತು.

"ಏನೇ ಅದು, ತಲೆಹರಟೆ?"

ಶ್ಯಾಮು ಪುಸ್ತಕವನ್ನು ತೆರೆದ. ನಳಿನಿಯೂ ಅಣ್ಣನನ್ನು ಅನುಸರಿಸಿದಳು. ಪ್ರತಿ ದಿನವೂ ಮುರಲೀಧರ ಪಾಠ ಮುಗಿಸಿ ಹೊರಬೀಳುತ್ತಿದ್ದುದು ಎಂಟೂವರೆಗೆ. ಆ ದಿನ ಅದು ಸಾಧ್ಯವಿರಲಿಲ್ಲ. ಬಂದುದು ತಡವಾದರೇನಂತೆ? ಒಂದು ಗಂಟೆಯ ಹೊತ್ತು ಆತ ಅಲ್ಲಿರಲೇಬೇಕು. ಮೊದಲೇ ಎದ್ದನೆಂದರೆ ಮನೆಯೊಡತಿ ಅತ್ತ ಸುಳಿದು ಕೇಳುತ್ತಿದ್ದರು:

'ಆಯ್ತೆ ಪಾಠ?'

ಅದರ ನೆನಪಾಗಿ ಕಸಿವಿಸಿಗೊಳ್ಳುತ್ತ ಮುರಲೀಧರ ಕೇಳಿದ;

"ತಡವಾಗಿ ಎದ್ದಿರಾ ಇವತ್ತು?"

ನಿರುತ್ಸಾಹ ಲವಲೇಶವಾದರೂ ಇಲ್ಲದ ಧ್ವನಿಯಲ್ಲಿ ಶ್ಯಾಮುನೆಂದ:

"ಹೂಂ ಸಾರ್. ಮಳೆ ಅಂತ, ಅಮ್ಮ ಏಳು ಘಂಟೆಗೆ ಎಬ್ಬಿಸ್ಲಿಲ್ಲ."

ಮುರಲೀಧರ ಪಾಠದತ್ತ ದೃಷ್ಟಿಯೋಡಿಸುತ್ತಿದ್ದಂತೆ ಶ್ಯಾಮು, ಎರಡೂ ಭುಜ ಗಳನ್ನು ಕುಪ್ಪಳಿಸಿ, ಕೈಗಳನ್ನು ಬಿಗಿಯಾಗಿ ಎದೆಗೆ ಕಟ್ಟಿಕೊಂಡು ಹೇಳಿದ:

"ತುಂಬಾ ಛಳಿ! ಅಲ್ವಾ ಸಾರ್?"

"ಹೂಂ," ಎಂದ ಮುರಲೀಧರ. ನಳಿನಿಯ ಕಡೆ ತಿರುಗಿ ಆತನೆಂದ:

"ಎಲ್ಲಮ್ಮಾ, ಈ ಲೆಕ್ಕ ಮಾಡು..."

...ಮತ್ತೆ ಕೊಠಡಿಗೆ. ಅಲ್ಲಿಂದ ಭೋಜನ ಶಾಲೆಗೆ. ಬಳಿಕ ಆ ದಿನದ ಪಾಠದ

ಪುಸ್ತಕಗಳನ್ನು ಆಯ್ದುಕೊಳ್ಳುವ, ತಿರುವಿ ನೋಡುವ, ಅವಸರದ ಕೆಲಸ.

ಬೀದಿಗಿಳಿಯುತ್ತಿದ್ದಂತೆ ಚಪ್ಪಲಿ ಕಿತ್ತುಹೋಯಿತು. ಆ ಜೋಡಿಗೆ ಆತ ಕೊಟ್ಟಿದ್ದುದು ಒಂದೂಮುಕ್ಕಾಲು ರೂಪಾಯಿ. ಕೊಂಡುದು ಒಂದು ಸಂಜೆ, ಮಾರ್ಕೆಟಿನ ಬಳಿ ಬೀದಿಯ ಬದಿಯಲ್ಲಿ ಸಿದ್ಧಸಾಮಗ್ರಿಗಳನ್ನು ಹರಡಿ ಕುಳಿತಿದ್ದ ಮೋಚಿಯಿಂದ. ಆ ನಾಲ್ಕು ತಿಂಗಳಲ್ಲೇ ದುರಸ್ತಿಗಾಗಿ ಆರಾಣೆ ವೆಚ್ಚವಾಗಿತ್ತು. ಈಗ ಮತ್ತೂ ಒಂದಾಣೆ...

'ಪುಣ್ಯಕ್ಕೆ ನಡುದಾರಿಯಲ್ಲಿ ಕಿತ್ತುಹೋಗಲಿಲ್ಲವಲ್ಲ,' ಎನ್ನುತ್ತ ಮುರಲೀಧರ, ಚಪ್ಪಲಿಗಳನ್ನೆತ್ತಿಕೊಂಡು ಕೊಠಡಿಗೆ ಹಿಂತಿರುಗಿ, ಅಲ್ಲಿ ಅವುಗಳನ್ನಿರಿಸಿ, ಬರಿಗಾಲಿನಲ್ಲೆ ಕಾಲೇಜಿನ ದಾರಿಹಿಡಿದ...

ಕಾಲೇಜುಗಳಿಗೆ, ಆಫೀಸುಗಳಿಗೆ, ಹೋಗುವ ಹೊತ್ತು. ಹತ್ತು ಹನ್ನೊಂದರ ಅವಧಿಯಲ್ಲಿ ಅವೆನ್ಯೂರಸ್ತೆ ಗಿಜಿಗಿಜಿ ಎನ್ನುತಿತ್ತು ಜನದಟ್ಟಣೆಯಿಂದ. ಸಹಸ್ರ ಸಹಸ್ರ ಸೈಕಲ್ ಸವಾರರು. ಅಷ್ಟೇ ಜನ ಕಾಲಾಳುಗಳು....ಆ ಜಂಗುಳಿಯಲ್ಲಿ ಒಬ್ಬ ನಾಗಿ, ಆ ಸಾಗರದಲ್ಲೊಂದು ಬಿಂದುವಾಗಿ, ಮುರಲೀಧರ ನಡೆದ ಎಂದಿನಂತೆ. ಸಹ ಪಾಠಿಗಳು ಕಣ್ಣಿಗೆ ಬೀಳುತಿದ್ದರು. ಆದರೆ ಅವರೊಡನೆ ಬೆರೆಯುವುದು ಆತನಿಗೆ ಇಷ್ಟವಿರಲಿಲ್ಲ. ಯಾವಾಗಲೂ ಅಷ್ಟೇ. ಒಬ್ಬಂಟಿಗನಾಗಿಯೇ ನಡೆಯುವ, ಒಂಟಿ ಯಾಗಿಯೇ ಇರಬಯಸುವ, ಜೀವ ಆತ.

ವಿದ್ಯಾರ್ಥಿಗಳ ಗುಂಪಿನಲ್ಲಿದ್ದಾಗ ಮುರಲೀಧರನಿಗೆ, ತಾನು ಅಲ್ಲಿ ಪರಕೀಯ ನೆಂದು ಭಾಸವಾಗುತ್ತಿತ್ತು. ಅರ್ಹತೆ ಇಲ್ಲದ ಮನುಷ್ಯ ಹಿರಿಯ ಅಂತಸ್ತಿನವರೊಡನೆ ಬೆರೆತ ಹಾಗೆ. ಪ್ರವೇಶ ಪತ್ರವಿಲ್ಲದೆ ಸಭಾಂಗಣವನ್ನು ಹೊಕ್ಕ ಹಾಗೆ.

ಹರಟೆಪ್ರಿಯರ ಬಳಗದಲ್ಲಂತೂ ಆತನಿಗೆ ಸ್ಥಾನವಿರಲಿಲ್ಲ. ವಿಷಯವಿಲ್ಲದೆಯೇ ಇವರೆಲ್ಲ ಎಷ್ಟೊಂದು ಮಾತನಾಡುವರಲ್ಲ!–ಎಂದು ಮುರಲೀಧರನಿಗೆ ಎಷ್ಟೋ ವೇಳೆ ವಿಸ್ಮಯವೆನಿಸುತ್ತಿತ್ತು. ಆತ ಗೌರವಿಸುತ್ತಿದ್ದ ಕೆಲ ಹುಡುಗರೂ ಇದ್ದರು. ಆತ್ಮೀಯ ರೆಂದಲ್ಲವಾದರೂ ಯೋಗ್ಯರೆಂದು, ಅವರೊಡನೆ ಮುರಲೀಧರ ವರ್ತಿಸುತಿದ್ದ. ಅವರು ತಾವಾಗಿಯೇ ಎಷ್ಟೋ ವೇಳೆ ಆತನನ್ನು ಮಾತನಾಡಿಸುತ್ತಿದ್ದರು. ಉತ್ತರ ಮಾತ್ರ ಒಂದು ಪ್ರಶ್ನೆಗೆ ಒಂದೇ. ಹೀಗಾಗಿ ಆತ, ಯಾರಿಗೂ 'ಮುರಲಿ'ಯಾಗಲಿಲ್ಲ. ಸ್ನೇಹಿತ ರೆನ್ನಿಸಿಕೊಂಡವರಿಗೂ ಸ್ನೇಹಿತನಾಗಿಯೇ ಉಳಿದ.

'ಮೌನಮುನಿ' ಎಂದು ಅವನನ್ನು ಲೇವಡಿ ಮಾಡಿದ ವಿದ್ಯಾರ್ಥಿಗಳೂ ಇದ್ದರು. ಅದು ಕಿವಿಗೆ ಬಿದ್ದಾಗ ಮುರಲೀಧರ ನಸುನಗುತ್ತಿದ್ದ. ಪ್ರತಿಭಟಿಸುತ್ತಿರಲಿಲ್ಲ.

ತರಗತಿಯಲ್ಲಂತೂ ಆತನಿಗೆ ಪ್ರಿಯವಾಗಿದ್ದುದು ಯಾವುದಾದರೊಂದು ಮೂಲೆ. ಅಲ್ಲಿದ್ದು, ತರಗತಿ ಮುಗಿದೊಡನೆ ಯಾರ ಕಣ್ಣಿಗೂ ಬೀಳದಂತೆ ಹೊರಡುವುದೇ ಆತ ನಿಗೆ ಇಷ್ಟವಾಗಿತ್ತು.

ಪ್ರವಚನ ಶುರುವಾಗುವುದಕ್ಕೆ ಮುಂಚೆ, ಇಲ್ಲವೆ ಯಾರಾದರೂ ಉಪನ್ಯಾಸಕರು

ಬರದೇ ಇದ್ದ ಹೊತ್ತಿನಲ್ಲಿ, ಆತ ರಕ್ಷಣೆ ಪಡೆಯುತ್ತಿದ್ದ ಒಂದು ಜಾಗವಿತ್ತು. ವಾಚನಾಲಯ. ಅಲ್ಲಿಯೂ ಒಂದು ಮೂಲೆಯನ್ನಾಶ್ರಯಿಸಿ, ಪತ್ರಿಕೆಗಳ ಮೂಲಕ ಆತ ವಿಶ್ವವಿಹಾರ ಕೈಗೊಳ್ಳುತ್ತಿದ್ದ...

...ಚಪ್ಪಲಿ ಮೆಟ್ಟಿಕೊಂಡು ಬಂದಿದ್ದರೆ ಪಾಯಜಾಮ ಖಂಡಿತವಾಗಿಯೂ ಕೊಳೆಯಾಗುತ್ತಿತ್ತು. ಕಿತ್ತುಹೋದುದರಿಂದ ಆದ ಲಾಭ ಇದು! ಬಿಸಿಲು ಬೇರೆ ಬಲವಾಯಿತು. ಸಂಜೆ ಮತ್ತೆ ಮಳೆ ಬರಬಹುದೆಂಬ ಶಂಕೆ ತಲೆದೋರಿದರೂ, ಈಗ ಜುಬ್ಬ ಪಾಯಜಾಮ ಬೆಚ್ಚಗೆ ಒಣಗುವಂತಾಯಿತಲ್ಲಾ, ಎಂದು ಮುರಲೀಧರನಿಗೆ ಸಮಾಧಾನವಾಯಿತು.

ತಡವಾಗಿತ್ತು ಆಗಲೆ. ತರಗತಿ ಶುರುವಾಗುವ ಹೊತ್ತು. ಬೇಗ ಬೇಗನೆ ಆತ ಹೆಜ್ಜೆ ಇಟ್ಟ.

ಎದುರುಗಡೆಯಿಂದ ಬರುತಿದ್ದ, ಸಹಪಾಠಿ ಮಹದೇವಯ್ಯ. ಆತನೆಂದ;

"ಓಡ್ಬೇಡೀಪ್ಪಾ. ಫಸ್ಟ್ ಪಿರೇಡಿಲ್ಲ."

"ಹಾಗೇನು?" ಎಂದ ಮುರಲೀಧರ ನಿರ್ವಿಕಾರ ಧ್ವನಿಯಲ್ಲಿ. ಆ ಸಮಯವನ್ನು ಹೇಗೆ ಕಳೆಯಬೇಕೆಂಬುದಂತೂ ಆತನಿಗೆ ಸ್ಪಷ್ಟವಾಗಿತ್ತು.

"ನೀವು ವಾಚನಾಲಯಕ್ಕೆ ತಾನೆ?" ಎಂದ ಮಹದೇವಯ್ಯ.

"ಹೂಂ."

ಅಷ್ಟಕ್ಕೇ ನಿಲ್ಲುವುದು ಶಿಷ್ಟಾಚಾರವಲ್ಲವೆಂದು ಮುರಲೀಧರ ಮುಂದುವರಿದು ಕೇಳಿದ:

"ಬರ್ತೀರಾ?"

"ಇಲ್ಲವಪ್ಪ! ನಾನು ಕ್ಯಾಂಟೀನಿಗೆ ಹೋಗ್ತೀನಿ."

...ವಾಚನಾಲಯದಲ್ಲಿ ಒಬ್ಬಿಬ್ಬರಿದ್ದರು, ಅಷ್ಟೆ...

ಆ ದಿನದ ಪತ್ರಿಕೆ ಸುಲಭವಾಗಿಯೆ ಮುರಲೀಧರನಿಗೆ ದೊರೆಯಿತು.

ಮೊದಲ ಪುಟದ ಮುಖ್ಯ ಶೀರ್ಷಿಕೆಗಳನ್ನು ಆತ ಓದಿದ. ಕೆಳ ಮೂಲೆಯಲ್ಲಿ ದಪ್ಪ ಅಕ್ಷರಗಳಲ್ಲಿ ಸ್ಥಳೀಯ ವಾರ್ತೆಯೊಂದು ಅಚ್ಚಾಗಿತ್ತು:

"ನಗರದಲ್ಲಿ ಭಾರೀ ಮಳೆ; ದುರಂತ; ಸಾವು!"

ನಗರದ ಹೊರವಲಯದಲ್ಲಿ ಸಿಡಿಲೆರಗಿತ್ತು. ಆದರೆ ಯಾರೂ ಸತ್ತಿರಲಿಲ್ಲ. ನಗರದೊಳಗೆ ಮಾತ್ರ ತಂತಿ ಹರಿದು ರಸ್ತೆಯ ಮೇಲಿದ್ದ ಇಬ್ಬರು ಆ ನಿಮಿಷವೇ ಅಸುನೀಗಿದ್ದರು. ವಿಶ್ವೇಶ್ವರಪುರದಲ್ಲಿ ಒಂದು ಮಗು, ಚರಂಡಿ ನೀರಿನಲ್ಲಿ ತೇಲಿ ಹೋಗಿ ಕಾಲುವೆಯ ಪಾಲಾಗಿತ್ತು. ಶ್ರೀರಾಮಪುರದ ನೂರಾರು ಗುಡಿಸಲುಗಳು ಕುಸಿದು ಬಿದ್ದು, ಸಂಸಾರಗಳು ಸಂಕಷ್ಟಕ್ಕೆ ಒಳಗಾಗಿದ್ದುವು....

ಮುರಲೀಧರ ನಿಧಾನವಾಗಿ ಆ ವಿವರವನ್ನೋದಿದ. ಓದಿದ ಬಳಿಕ ನಿಟ್ಟುಸಿರು ಬಿಟ್ಟ.

ದೇವತೆಗಳ ಕಣ್ಣೀರಿನೊಡನೆ ಜನರ ಕಣ್ಣೀರೂ ಬೆರೆತಿತ್ತು.

೩

ನವರಾತ್ರಿ ಕಳೆದು ದೀಪಾವಳಿ ಸಮೀಪಿಸುತ್ತಿತ್ತು. ಅದೊಂದು ಶನಿವಾರ ಸಂಜೆ, ವಾಚನಾಲಯದಿಂದ ತಂದಿದ್ದ ಇಂಗ್ಲಿಷ್ ಕಾದಂಬರಿಯನ್ನೋದುತ್ತ ಮುರಲೀಧರ ಹಾಸಿಗೆಯ ಸುರುಳಿಗೊರಗಿ ಚಾಪೆಯ ಮೇಲೆ ಕುಳಿತಿದ್ದ. ಕದ ತಟ್ಟಿದ ಸದ್ದಾಯಿತು.

ಬಾಗಿಲು ತೆರೆದಾಗ ಮುರಲೀಧರನ ಕಣ್ಣಿಗೆ ಬಿದ್ದುದು, ಯೌವನಾವಸ್ಥೆಯನ್ನು ದಾಟುತ್ತಲಿದ್ದ ಒಬ್ಬ ವ್ಯಕ್ತಿ. ಪ್ಯಾಂಟು, ಶರಟು, ಕ್ರಾಪು, ಗಡಿಯಾರ. ಮುಗುಳು ನಗೆಯೋ ಗಾಂಭೀರ್ಯವೋ ಎನ್ನುವುದು ಅರ್ಥವಾಗದಂತೆ ತುಟಿಗಳು ಕೊಂಕಿಸಿ ಬಿಗಿದುಕೊಂಡಿದ್ದುವು.

ಮುರಲೀಧರ ಕೇಳಿದ:

"ಯಾರು ಬೇಕಾಗಿತ್ತು?"

ಆಗಂತುಕ ಉಚ್ಚರಿಸಿದುದು ಆತನ ಹೆಸರನ್ನೇ. ತೆರೆದ ತುಟಿಗಳು ಮೊದಲಿನಂತೆಯೇ ಮತ್ತೆ ಬಿಗಿದುಕೊಂಡುವು.

ಮುರಲೀಧರನೆಂದ:

"ನಾನೇ, ಬನ್ನಿ."

ಆ ಮನುಷ್ಯ ಒಳ ಬಂದ. ಪೀಠೋಪಕರಣಗಳಿಲ್ಲದ ಆ ಕೊಠಡಿಯನ್ನೊಮ್ಮೆ ಆತ ನಿರ್ವಿಕಾರ ದೃಷ್ಟಿಯಿಂದ ನೋಡಿದ.

ಚಾಪೆಯ ಮೇಲೆ ಕುಳಿತರೆ ಪ್ಯಾಂಟು ಮುದುಡುವ ಸಂಭವ. ಅದನ್ನು ಗಮನಿಸಿ, ತನ್ನ ಪೆಟ್ಟಿಗೆಯತ್ತ ಬೊಟ್ಟು ಮಾಡಿ, ಮುರಲೀಧರನೆಂದ:

"ಕೂತ್ಕೊಳ್ಳಿ."

ಕರವಸ್ತ್ರವನ್ನು ಹೊರತೆಗೆದು ಜಾಗರೂಕತೆಯಿಂದ ಬಿಡಿಸಿ ಪೆಟ್ಟಿಗೆಯ ಮೇಲೆ ಹಾಸಿ ಆತ ಕುಳಿತ.

ಬಳಿಕ ಪ್ರಶ್ನೆ ಬಂತು:

"ಒಬ್ಬರೇ ಇದೀರಾ ಇಲ್ಲಿ?"

"ಒಬ್ಬನೇ."

ಯಾರು ಆತ, ಉಪಾಧ್ಯಾಯನೆ? ಉಪನ್ಯಾಸಕನೆ? ಸ್ವಲ್ಪ ಹೊತ್ತು ದಿಟ್ಟಿಸಿದ ಬಳಿಕ, 'ಎಲ್ಲೋ ನೋಡಿದೀನಿ' ಅನಿಸಿತು.

ಆ ಮನುಷ್ಯನೆಂದ:

"ನಿಂತೇ ಇದೀರಲ್ಲ. ಕೂತ್ಕೊಳ್ಳಿ."

ಮುರಲೀಧರ, ಮನಸಿನೊಳಗೆ ಸಿಕ್ಕುಗಟ್ಟಿದ್ದ ಸಮಸ್ಯೆಯನ್ನು ಬಿಡಿಸಲಾಗದೆ, ಹಾಸಿಗೆಯ ಸುರುಳಿಯ ಮೇಲೆ ಗೋಡೆಗೊರಗಿ ಕುಳಿತ.

"ನನ್ನ ಗುರುತು ಸಿಗಲಿಲ್ಲ, ಅಲ್ವೆ?"

"ಇಲ್ಲ."

ಸಿಗರೇಟು ತೆಗೆದು ಬಾಯಿಗಿರಿಸಿ ಕಡ್ಡಿ ಗೀರುತ್ತ ಆತನೆಂದ:

"ಶಂಕರಯ್ಯರ್ ಹೋಟ್ಲಿಗೆ ಆಗಾಗ್ಗೆ ನಾನು ಬರ್‍ತಾ ಇರ್‍ತೀನಿ."

ಹೌದು, ಅಲ್ಲಿಯೇ ಕಂಡಿದ್ದುದು. ಅಧ್ಯಾಪಕವೃಂದದವನಲ್ಲ.

"ಹೂಂ. ಅಲ್ಲಿ ನಿಮ್ಮನ್ನ ನೋಡಿದ ನೆನಪಿದೆ."

ಕುಳಿತಲ್ಲೆ ಕೆಳಗೆ ಕಡ್ಡಿಯನ್ನೆಸೆಯಲು, ನಿಮಿಷದ ಬಳಿಕ ಬೂದಿ ಕೊಡವಲು, ಆತ ಹಿಂದುಮುಂದು ನೋಡಲಿಲ್ಲ. ಆ ಮನುಷ್ಯ ನೈರ್ಮಲ್ಯ ಪ್ರಿಯನಾಗಿದ್ದುದು ತನ್ನ ಪೋಷಾಕಿನ ವಿಷಯದಲ್ಲಿ ಮಾತ್ರ.

"ನಿಮ್ಮ ತರಗತೀಲಿ ನಾರಣಪ್ಪ ಅಂತ ಒಬ್ಬ ಹುಡುಗ ಇದಾನೆ. ನಿಮಗೆ ಗೊತ್ತೆ?"

ಈತ ನಾರಣಪ್ಪನ ಸಂಬಂಧಿಕನಿರಬೇಕೆಂದು ಊಹಿಸುತ್ತ ಮುರಲೀಧರನೆಂದ:

"ಓಹೋ. ಆತ ನನ್ನ ಗ್ರೂಪೇ."

"ಖಾದೀದು ಜುಬ್ಬ ಪಾಯಜಾಮ ಹಾಕ್ಕೋತಾನಲ್ಲ?"

"ಹೌದು. ಅವನೇ. ಗೊತ್ತಾಯ್ತು."

"ನಿಮ್ಮದೂ ಅದೇ ರೀತಿಯ ಡ್ರೆಸ್ಸು–ಗೊತ್ತಿದ್ದೇ ಇರುತ್ತೆ."

ಆ ಮಾತಿನ ಸರಣಿ ಮುರಲೀಧರನಿಗೆ ತುಸು ವಿಚಿತ್ರವೆನಿಸಿತು. ಆತ ದೃಷ್ಟಿ ತಗ್ಗಿಸಿ ತನ್ನ ಉಡುಪನ್ನೊಮ್ಮೆ ನೋಡಿದ. ಬಳಿಕ, ಆ ವ್ಯಕ್ತಿಯ ನೋಟವನ್ನು ಸಂಧಿಸಿದ.

"ಆದರೆ ನನ್ನದು ಖಾದಿಯಲ್ಲ. ಖಾದಿಗೆ ಬೆಲೆ ಜಾಸ್ತಿ."

ಮತ್ತೊಮ್ಮೆ ಬೂದಿ ಕೊಡವಿ ಆ ಮನುಷ್ಯ ನಸುನಕ್ಕ.

"ಅದು ನಿಜ. ಆದರೂ ನಾರಣಪ್ಪ ನಿಮ್ಮ ಸ್ನೇಹಿತ ಅನ್ನಿ."

ನಾರಣಪ್ಪ ಏನೋ ತಪ್ಪುಮಾಡಿರಬೇಕು, ಆತನ ಮನೆಯವರು ವಿಷಯ ತಿಳಿದುಕೊಳ್ಳಲು ಯತ್ನಿಸುತ್ತಿದ್ದಾರೆ, ಎನಿಸಿತು ಮುರಲೀಧರನಿಗೆ. ಇತರ ವಿದ್ಯಾರ್ಥಿಗಳಿಗಿಂತ ಸ್ವಲ್ಪ ಭಿನ್ನನಾಗಿದ್ದ, ಏಕಾಂತಪ್ರಿಯನಾಗಿದ್ದ, ನಾರಣಪ್ಪ, ಆತನ ಗಮನವನ್ನು ಸೆಳೆದಿದ್ದುದೇನೋ ನಿಜ. ಆದರೆ ಗೆಳೆತನ ಬೆಳೆದಿರಲಿಲ್ಲ. ಅದಕ್ಕೆ ಅವಕಾಶ ದೊರೆತಿರಲಿಲ್ಲ....

"ಸ್ನೇಹಿತ ಅಂತ ಹೇಳಲಾರೆ. ನೋಡಿದೀನಿ ಅಷ್ಟೆ."

"ನಿಮ್ಮ ಗಣಿತದ ಅಧ್ಯಾಪಕರು ನನಗೆ ಗೊತ್ತು. ನೀವು ಶ್ರದ್ಧೆಯಿಂದ ವ್ಯಾಸಂಗ ಮಾಡೋ ವಿದ್ಯಾರ್ಥೀಂತ ಅವರು ಹೇಳಿದ್ರು."

ಲಜ್ಜೆಯಿಂದ ಮುಖ ರಂಗೇರುವ ಪ್ರಮೇಯ.

"ನನ್ನನ್ನು ಅವರು ಗುರುತಿಟ್ಟುಕೊಂಡಿರೋದೇ ಆಶ್ಚರ್ಯ."

"ಯಾಕೆ? ನಿಮ್ಮಂಥವರ ಮೇಲೆ ಅಧ್ಯಾಪಕರ ದೃಷ್ಟಿ ಬೀಳೋದು ಸ್ವಾಭಾವಿಕ. ನೀವು ಸ್ವಪ್ರಯತ್ನದಿಂದ ಮುಂದಕ್ಕೆ ಬರೋರು ಅನ್ನೋದು, ನಿಮ್ಮನ್ನು ನೋಡಿದರೇ ಗೊತ್ತಾಗುತ್ತೆ."

ಆ ಹೊಗಳಿಕೆಯಿಂದಂತೂ ಮುರಲೀಧರನ ಮುಖ ಕೆಂಪಗಾಯಿತು. ಆ ಮಾತು ಅಸಂಬದ್ಧವಾಗಿಯೂ ತೋರಿತು ಆತನಿಗೆ.

ಒಮ್ಮೆಲೆ, ವರಾನ್ವೇಷಕರಾಗಿ ಇವರು ಬಂದಿಲ್ಲವಷ್ಟೆ?–ಎಂಬ ಸಂದೇಹ ಅವನಲ್ಲಿ ಮೊಳೆಯಿತು. ಮರುಕ್ಷಣದಲ್ಲೆ ಆ ಸಂದೇಹ, ನಂಬುಗೆಯಾಗಿ ಮಾರ್ಪಟ್ಟಿತು. ಸಮಸ್ಯೆ ಬಗೆಹರಿದಂತಾಗಿ ಕುತೂಹಲವೆನಿಸಿತು. ತುಂಟತನದ ಕಿರುನಗೆ ಕಣ್ಣುಗಳಲ್ಲಿ ಮಿಂಚಿತು. ಉತ್ತರರೂಪವಾಗಿ ಏನನ್ನೂ ಹೇಳದೆ, ಆ ವ್ಯಕ್ತಿಯನ್ನೇ ನೋಡುತ್ತ ಆತ ಕುಳಿತ.

ಕೊಡವಿದ ಬೂದಿಯ ಉಂಡೆಯನ್ನು, ಸಣ್ಣನೆ ಬೀಸಿದ ಗಾಳಿ ಗೋಡೆಯ ಬದಿಗೆ ಒಯ್ದಿತು. ಆ ಮನುಷ್ಯನ ದೃಷ್ಟಿ ಬೂದಿಯನ್ನು ಹಿಂಬಾಲಿಸಿತು, ಒಂದು ನಿಮಿಷ. ಬಳಿಕ ಮುರಲೀಧರನನ್ನು ಇರಿಯುವ ಕಣ್ಣುಗಳಿಂದ ನೋಡುತ್ತ ಆತನೆಂದ:

"ನೀವು ಆ ನಾರಣಪ್ಪನ ಹಾಗೆ ಅಡ್ಡದಾರಿ ಹಿಡಿಯುವವರಲ್ಲವೇ ಅಲ್ಲ."

ಆತ ವರಾನ್ವೇಷಕನೆಂದು ತಾನು ಊಹಿಸಿದುದು ತಪ್ಪು ಎನಿಸಿತು ಮುರಲೀಧರನಿಗೆ.

"ನಿಮಗೆ ನಾರಣಪ್ಪ ಸಂಬಂಧಿಕನೆ?"

ಆ ಮನುಷ್ಯ ನಸುನಕ್ಕು ನುಡಿದ:

"ಹೂಂ. ಅದಕ್ಕೇ ಇಷ್ಟೆಲ್ಲ ಕೇಳ್ತಿರೋದು. ತರಗತಿಯಲ್ಲಿ ಆತನ ಸಹವಾಸ ಯಾರ ಜತೆಗೆ ಅಂತ ಹೇಳ್ತೀರಾ?"

ದುರ್ನಡತೆಗೂ ನಾರಣಪ್ಪನಿಗೂ ಸಂಬಂಧ ಕಲ್ಪಿಸುವುದು ಕಷ್ಟವೆಂದು ಮುರಲೀಧರನಿಗೆ ತೋರಿತು.

"ಯಾವಾಗಲೂ ಆತ ಒಂಟಿಯಾಗಿಯೇ ಇರೋದು ಜಾಸ್ತಿ."

"ನೀವು ಅವನ ಮೇಲೆ ನಿಗಾ ಇಡಬೇಕು ಮುರಲೀಧರ್. ಆತ ಚಳವಳಿ ಸೇರ್ಕೊಂಡಿದಾನೆ. ಯುದ್ಧ ಸಮಯ. ಕಂಟೋನ್ಮೆಂಟಿನಲ್ಲಿ ಮಿಲಿಟರಿ ಇದೆ. ಆತ ಹಾಗೆಲ್ಲ ರಾಜದ್ರೋಹ ಮಾಡ್ತಾ ಇದ್ದರೆ ಸರಕಾರ ಸುಮ್ಮನಿರುತ್ತಾ?"

ಮುರಲೀಧರನ ಪಾಲಿಗೆ ಆಶ್ಚರ್ಯಕರವೆನಿಸಿದ ಆ ಮಾತು, ದೂಷಣೆಯಾಗಿ ತೋರಲಿಲ್ಲ. ಅಂತಹ ಕೆಲಸದಲ್ಲಿ ಮನೆಯವರ ಅಡ್ಡಿ ಆತಂಕಗಳಿರುವುದು ಸಹಜವಾಗಿತ್ತು.

"ಇದೊಂದೂ ನನಗೆ ಗೊತ್ತೇ ಇರ್ಲಿಲ್ಲ."

"ಆ ಚಳವಳಿಯೇ ಅಂಥಾದ್ದು. ಗುಪ್ತವಾಗಿ ಮಾಡ್ತಾರೆ. ನಾರಣಪ್ಪ ಮೊದಲು ಅಧ್ಯಯನದಲ್ಲಿ ಎಷ್ಟು ಚುರುಕಾಗಿದ್ದ ಅಂತ! ಈಗ ಪೋಲಿ ಅಲೆದು ಕಾಲಹರಣ

ಮಾಡ್ತಿದಾನೆ. ನೀವು ಅವನ ಮೇಲೆ ಕಣ್ಣಿಟ್ಟು ಆತ ಏನೇನು ಮಾಡ್ತಾನೆ ಅನ್ನೋ ದನ್ನ ತಿಳಿಸಿದರೆ...."

ವಾಕ್ಯ ಪೂರ್ತಿಯಾಗಲಿಲ್ಲವೆಂದು ಮುರಲೀಧರ ಆ ಮನುಷ್ಯನನ್ನ ದಿಟ್ಟಿಸಿದ. ಆತ ಸಿಗರೇಟಿನ ತುಂಡನ್ನು ನೆಲದ ಮೇಲಿರಿಸಿ, ಬೂಟಿನಿಂದ ಹಿಚುಕಿ ಬೆಂಕಿಯನ್ನು ಸಾಯಿಸಿ, ಮುಂದುವರಿಸಿದ:

"ನಿಮಗಿದರಿಂದ ಪ್ರಯೋಜನವಾಗುತ್ತೆ."

ಆ ಮಾತಿಗೆ ಪ್ರತಿಯಾಗಿ ಏನು ಹೇಳಬೇಕೆಂಬುದೇ ಮುರಲೀಧರನಿಗೆ ತೋಚ ಲಿಲ್ಲ. ಆ ಮನುಷ್ಯನ ಕಾಲ ಬಳಿಯಲ್ಲಿ ಬಿದ್ದಿತ್ತು, ವಿರೂಪಗೊಂಡಿದ್ದ ಸಿಗರೇಟಿನ ಶವ. ನೆಲ ಹೊಲಸಾಗಿತ್ತು.

ಧ್ವನಿ ಮತ್ತೂ ಕೇಳಿಸಿತು:

"ಈ ಸಲಹೇನ ನೀವು ಸ್ವೀಕರಿಸದೇ ಇದ್ದರೆ ನಿಮಗೆ ತೊಂದರೆಯಾಗುತ್ತೆ."

ಒಮ್ಮೆಲೆ, ಆಳದಿಂದಲೇ ಮೇಲಕ್ಕೆ ಬಂದ ಧ್ವನಿಯಲ್ಲಿ ಮುರಲೀಧರ ಕೇಳಿದ:

"ನಿಮ್ಮ ಹೆಸರೇನು?"

ಆ ಮನುಷ್ಯ ಚಕಿತನಾದರೂ ಮುಖಮುದ್ರೆ ಬದಲಾಗಲಿಲ್ಲ.

"ರಾಮಚಂದ್ರಯ್ಯ ಅಂತ."

"ಎಲ್ಲಿ ಕೆಲಸ ಮಾಡ್ತಿದೀರಾ?"

"ನಾನು ಸಬ್ ಇನ್ಸ್‌ಪೆಕ್ಟರು. ಸ್ಪೆಷಲ್ ಬ್ರಾಂಚಿನಲ್ಲಿದೀನಿ."

ಹಾಸಿಗೆಯ ಸುರುಳಿ ಮುರಲೀಧರನಿಗೆ ಸರಳ ಮಂಚವಾಯಿತು, ಕ್ಷಣ ಕಾಲ.

"ಹಾಗೇನು?"

ಸಣ್ಣ ನಗೆಯೊಡನೆ ದೃಢಸ್ವರದಲ್ಲಿ ಪ್ರಶ್ನೆ ಬಂತು:

"ನಾರಣಪ್ಪನಿಗೂ ನನಗೂ ಇರೋ ಸಂಬಂಧ ಈಗ ಅರ್ಥವಾಯ್ತೇ?"

"ಆಯ್ತು."

ಒಂದೇ ಪದ. ಸುತ್ತಿಗೆಯ ಏಟು ಬಿದ್ದು, ಕಲ್ಲು ಬಂಡೆಯಿಂದೊಂದು ತುಣುಕು ಕೆಳಕ್ಕೆ ಸರಿದಹಾಗೆ.

ರಾಮಚಂದ್ರಯ್ಯ ಎದ್ದು ನಿಂತು ಹೇಳಿದ:

"ಬನ್ನಿ, ಒಂದಿಷ್ಟು ಕಾಫಿ ತಗೋಳೋಣ."

ಮುರಲೀಧರನೂ ಎದ್ದ.

"ಕ್ಷಮಿಸಿ. ನಾನು ಇಷ್ಟು ಹೊತ್ತಿನಲ್ಲಿ ಕಾಫಿ ಕುಡಿಯೋದಿಲ್ಲ."

ಆತ ಒಮ್ಮೆ ಹೊರಟುಹೋಗಲೆಂದು ಆಡಿದ ಮಾತು, ಕೊನೆಯದು.

"ಅಥವಾ, ಪೋಲೀಸ್ ಇಲಾಖೆಯವರ ಜತೆ ಓಡಾಡೋದಕ್ಕೆ ಭಯವೊ? ಹೆದರ್ಕೋಬೇಡಿ. ನಾನಿದೀನಿ. ಬನ್ನಿ."

"ಕ್ಷಮಿಸಿ ಸಾರ್."

"ನಿಮ್ಮಿಷ್ಟ. ನಾನು ಒತ್ತಾಯಿಸೋದಿಲ್ಲ. ಇನ್ನೊಮ್ಮೆ ನಿಮ್ಮನ್ನ ಬಂದು ನೋಡ್ತೀನಿ."

"ಶಂಕರಅಯ್ಯರ್ ಹೋಟ್ಲಲ್ಲಿ ಸಿಕ್ಕಿಯೇ ಸಿಗ್ತೀವಲ್ಲ."

ಆತ್ಮೀಯವಲ್ಲದ ಸ್ವರ. 'ನೀನು ಬರದೇ ಇದ್ದರೆ ವಾಸಿ' ಎನ್ನುವುದರ ಬದಲು ಆ ಮಾತು.

ರಾಮಚಂದ್ರಯ್ಯ ಅದನ್ನು ಗಮನಿಸದಂತೆಯೇ ತೋರಲಿಲ್ಲ. "ರೈಟೋ" ಎನ್ನುತ್ತ ಆತ ಹೊರಟು ಹೋದ.

ಮುರಲೀಧರನ ಮೈ ಉರಿಯಿತು. ಆ ಕಾವಿನಿಂದ ಉದ್ವಿಗ್ನಗೊಂಡಿತು ಮನಸ್ಸು. ಎಂತಹ ನಟನೆ! ಎಂತಹ ನೀಚ ಕೆಲಸ! ಬಾಡಿಗೆಯ ಗೂಢಚಾರನಾಗಿ ತನ್ನನ್ನು ನೇಮಿಸಲು ಯತ್ನಿಸಿದ್ದ ಆ ಸಬ್ ಇನ್ಸ್‌ಪೆಕ್ಟರು. ಆಳರಸರ ರಾಜ್ಯಯಂತ್ರ ಚಲಿಸುವ ರೀತಿಯೇ ಅಂಥದೇನೋ?

ಪೆಟ್ಟಿಗೆಯ ಹಿಂಬದಿಯಲ್ಲಿದ್ದ ಕಸಬರಿಕೆಯನ್ನು ಕೈಗೆತ್ತಿಕೊಂಡು, ರಾಮಚಂದ್ರಯ್ಯ ಉಳಿಸಿಹೋಗಿದ್ದ ಹೊಲಸನ್ನು ಮುರಲೀಧರ ಗುಡಿಸಿ ಒಟ್ಟುಗೂಡಿಸಿದ. ಕಾಗದದ ಚೂರಿನಲ್ಲಿ ಅದನ್ನೆತ್ತಿ ಹೊರಕ್ಕೆ ದಾಟಿಸಿದ.

ಆದಷ್ಟು ಬೇಗನೆ ನಾರಣಪ್ಪನನ್ನು ಕಾಣಬೇಕೆಂದು ಮುರಲೀಧರ ತವಕಿಸಿದ. ಸೋಮವಾರದವರೆಗೂ ಆತ ಕಾಯುವುದು ಅನಿವಾರ್ಯವಾಗಿತ್ತು...

...ಕಾಲೇಜಿಗೆ ಹೋದೊಡನೆಯೆ ಮುರಲೀಧರನ ಕಣ್ಣುಗಳು ನಾರಣಪ್ಪನನ್ನು ಹುಡುಕಿದುವು. ನಸುಗಪ್ಪು ಮೈಯ, ದುಂಡುಮೋರೆಯ, ನುಣುಪು ಕೂದಲಿನ ಆ ವಿದ್ಯಾರ್ಥಿ. ಶಾಂತವಾಗಿ ಮೌನವಾಗಿ ಇರುತ್ತಿದ್ದ ಆತನನ್ನು ಅಪಾಯಕಾರಿ ವ್ಯಕ್ತಿಯಾಗಿ ಪರಿಗಣಿಸುವುದು ಖಂಡಿತ ಸಾಧ್ಯವಿರಲಿಲ್ಲ.

ವಿರಾಮದ ವೇಳೆಯಲ್ಲಿ ಆತನ ಬಳಿ ಸಾರಿ ಮುರಲೀಧರ ಹೇಳಿದ:

"ನಾರಣಪ್ಪ, ನಿಮ್ಮ ಜತೇಲಿ ಸ್ವಲ್ಪ ಮಾತನಾಡೋದಿದೆ."

ಸ್ನೇಹಪೂರ್ಣವಾದ ಮುಗುಳುನಗೆಯೊಡನೆ ನಾರಣಪ್ಪನೆಂದ:

"ಏನು ವಿಶೇಷ?"

"ರಹಸ್ಯ. ಇಬ್ಬರೇ ಎಲ್ಲಾದರೂ ಕೂತ್ಕೊಳ್ಳೋದು ವಾಸಿ."

ಕರಿಯ ಮೋಡವೊಂದು ನಾರಣಪ್ಪನ ಮುಖದ ಮೇಲಿಂದ ಹಾದು ಹೋಯಿತು. ಹುಬ್ಬುಗಳು ಒಟ್ಟಾಗಿ ಯೋಚಿಸಲೆಳಸುತ್ತ ಒಂದನ್ನೊಂದು ಸಮೀಪಿಸಿದುವು.

"ಕ್ಯಾಂಟೀನಿಗೆ ಹೋಗೋಣವೆ? ನಿಮ್ಮ ಕಾಫಿ ಇನ್ನೂ ಆಗಿಲ್ಲಾಂತ ತೋರುತ್ತೆ."

"ಪರವಾಗಿಲ್ಲ. ಕ್ಯಾಂಟೀನಿಗೆ ಬೇಡಿ. ಅಲ್ಲಿ ಜನ ಜಾಸ್ತಿ."

ದೂರದಲ್ಲಿ ಅಗಲಕಿರಿದಾದ ಬನಪ್ಪ ಪಾರ್ಕು ಉದ್ದಕ್ಕೆ ಮಲಗಿತ್ತು. ದೇವದಾರು ಮರಗಳು. ಕಲ್ಲು ಬೆಂಚುಗಳು ಕೆಳಗೆ. ಇಬ್ಬರ ದೃಷ್ಟಿಯೂ ಅತ್ತ ಹರಿದಂತೆ

ನಾರಣಪ್ಪನೆಂದ:

"ಬನ್ನಿ, ಹೋಗೋಣ."

ತಮ್ಮಿಬ್ಬರ ನಡುವೆ ಪುಸ್ತಕಗಳನ್ನಿರಿಸಿ ಬೀದಿಗೆ ಬೆನ್ನು ಮಾಡಿ ಮನೆಗಳತ್ತ ನೋಡುತ್ತ ಇಬ್ಬರೂ ಕುಳಿತ ಬಳಿಕ, ಮುರಲೀಧರ ಕೇಳಿದ:

"ನಿಮಗೆ ರಾಮಚಂದ್ರಯ್ಯ ಅಂತ ಯಾರಾದರೂ ಗೊತ್ತಾ?"

"ರಾಮಚಂದ್ರಯ್ಯ? ಇಲ್ಲ. ಯಾರು?"

"ಪೋಲೀಸ್ ಸಬ್ ಇನ್ಸ್‌ಪೆಕ್ಟರಂತೆ. ಸ್ಪೆಷಲ್ ಬ್ರಾಂಚಿನವನಂತೆ. ಶನಿವಾರ ಸಾಯಂಕಾಲ ನನ್ನ ಕೊಠಡಿಗೆ ಬಂದಿದ್ದ..."

....ಉಸಿರು ಬಿಗಿ ಹಿಡಿದು ನಾರಣಪ್ಪ ಮುರಲೀಧರನ ಮಾತುಗಳಿಗೆ ಕಿವಿಗೊಟ್ಟ. ನಡುವೆ ಒಮ್ಮೆಯೂ ಮಾತನಾಡಲಿಲ್ಲ. ಉದ್ಗಾರವೆತ್ತಲಿಲ್ಲ. ಅಲ್ಲಗಳೆಯುವ ಉತ್ತರ ಕೊಡಲಿಲ್ಲ...

....ಮೊದಲ ಉದ್ವೇಗ ಇಳಿದರೂ ತುಸು ಕಂಪಿಸುತ್ತಲಿದ್ದ ಧ್ವನಿಯಲ್ಲಿ ಮುರಲೀಧರ ಕೇಳಿದ:

"ನನ್ನ ಮಾತಿನಲ್ಲಿ ನಿಮಗೆ ನಂಬಿಕೆ ಇದೆ, ಅಲ್ವಾ?"

ನಾರಣಪ್ಪ ನಸುನಕ್ಕ. ಆತನ ಒಣಗಿದ್ದ ಗಂಟಲಲ್ಲಿ ತಡವರಿಸಿ ಉರುಳುತ್ತ ಮಾತು ಹೊರಬಂತು:

"ಇಲ್ಲದೆ ಏನ್ರಿ?"

ಮತ್ತೆ ಮೌನ ನೆಲೆಸಿತು. ಪರಿಸ್ಥಿತಿಯ ಗಭೀರತೆಯನ್ನು ಕುರಿತು ಯೋಚಿಸಿದ ನಾರಣಪ್ಪ.

ಕೆಟ್ಟ ಸುದ್ದಿಯನ್ನು ತಂದುಕೊಟ್ಟ ತಪ್ಪಿಗೆ, ತಾನು ಒಳ್ಳೆಯದೇನನ್ನಾದರೂ ಹೇಳಬೇಕು ಎಂದು ಮುರಲೀಧರನಿಗೆ ಅನಿಸಿತು.

"ಇನ್ನೊಮ್ಮೆ ಬರಲಿ ಆತ! ಚೆನ್ನಾಗಿ ಛೀಮಾರಿ ಮಾಡಿ ಕಳಿಸ್ತೀನಿ."

ನಾರಣಪ್ಪ, ಅಸಮ್ಮತಿ ಸೂಚಕವಾಗಿ ತಲೆಯಲ್ಲಾಡಿಸುತ್ತ ಅಂದ:

"ಹಾಗೆ ಮಾಡ್ಬೇಡಿ. ಸುಮ್ನೆ ಯಾತಕ್ಕೆ ಅಪಾಯಕ್ಕೆ ಗುರಿಯಾಗ್ತೀರಾ?"

ಆ ಮಾತನ್ನು ಮುರಲೀಧರ ನಿರೀಕ್ಷಿಸಿರಲಿಲ್ಲ.

"ಮತ್ತೆ? ಗೂಢಚಾರನಾಗು ಅಂತೀರಾ?"

"ಹಾಗಂದ್ನೆ? ಜಗಳಕ್ಕೆ ಹೋಗ್ಬೇಡಿ, ಅಷ್ಟೆ."

ಆತ ಸಮವಯಸ್ಕನೇ ಆದರೂ, ಬಹಳ ಹಿರಿಯರಾದವರು ಆಡಿದ ಹಾಗಿತ್ತು ಮಾತು. ನಾರಣಪ್ಪನಿಂದ ಹೆಚ್ಚು ವಿಷಯ ತಿಳಿದುಕೊಳ್ಳಬೇಕು, ಆ ರಹಸ್ಯ ಚಳವಳಿಯಲ್ಲಿ ತಾನೂ ಪಾಲುಗೊಳ್ಳಬೇಕು, ಅಪಾಯದ ಹೊಣೆಗಾರಿಕೆಯನ್ನು ತಾನೂ ಸ್ವಲ್ಪ ಹೊರಬೇಕು–ಎನಿಸಿತು ಮುರಲೀಧರನಿಗೆ.

"ನನ್ನಿಂದ ನಿಮಗೆ ಯಾವತ್ತಾದರೂ ಏನಾದರೂ ಸಹಾಯ ಬೇಕೆನಿಸಿದರೆ

ಖಂಡಿತ ಕೇಳಿ ನಾರಣಪ್ಪ."

ಆತ ಸಲಿಗೆಯ, ಹೃತ್ಪೂರ್ವಕವಾದ, ನಗೆ ನಕ್ಕ.

"ಅಂಥಾದೇನಿಲ್ರೀ, ಮುಚ್ಚುಮರೆ ಯಾಕೆ ಅಂತ ನನಗೂ ಎಷ್ಟೋ ಸಾರೆ ಅನಿಸುತ್ತೆ. ನಾವು ಸತ್ಯ ಅಂತ ನಂಬಿದ್ದನ್ನ ಹೇಳೋದಕ್ಕೆ ಮಾಡೋದಕ್ಕೆ ಯಾರ ಹೆದರಿಕೆ? ಆದರೆ ನಮ್ಮಣ್ಣ—"

ಮಾತು ನಿಂತಿತು. ಹೊರಬರುವುದು ಉಚಿತವಲ್ಲವೇನೋ ಎನ್ನುವಂತೆ ಪದಗಳು ಒಳಗೇ ತಲೆಮರೆಸಿಕೊಂಡುವು.

ಮುರಲೀಧರ ಅದನ್ನು ಗಮನಿಸಲಿಲ್ಲ. ಮತ್ತೆ ಪ್ರಶ್ನಿಸಲಿಲ್ಲ. ಕೆದಕಿ ಕೇಳಲಿಲ್ಲ.

ಸ್ವಲ್ಪ ತಡೆದು, ಸ್ವರ ಕೇಳಿಸಿದರೂ ಸ್ವಗತ ಎನ್ನುವಂತೆ, ನಾರಣಪ್ಪನೇ ನುಡಿದ:

"ಈ ಖಾದಿ ಕೈಕೊಡುತ್ತೆ ಅಂತ ನನಗೆ ಗೊತ್ತಿತ್ತು....ದೇಶಕ್ಕೋಸ್ಕರ ಜೈಲು ಅನುಭವಿಸೋಕೆ ನಾನೇನೂ ಹೆದರೋದಿಲ್ಲ. ಆದರೆ ನಮ್ಮಮ್ಮ ಸಂಕಟ ಪಟ್ಕೋತಾಳೆ."

ತನ್ನಷ್ಟಕ್ಕೇ ಇರುತ್ತಿದ್ದ ಆ ಒಂದು ಜೀವದ ಒಡಲಲ್ಲಿ ಅಂತಹ ಯೋಜನೆಗಳೂ ಇದ್ದುವೆಂಬುದನ್ನು ಆ ವರೆಗೂ ತಾನು ತಿಳಿದೇ ಇರಲಿಲ್ಲವಲ್ಲ ಎಂದು ಮುರಲೀಧರನಿಗೆ ಸೋಜಿಗವೆನಿಸಿತು. ಆ ಸಹಪಾಠಿಯ ವಿಷಯದಲ್ಲಿ ಆತನಿಗೆ ಗೌರವ ಹುಟ್ಟಿತು.

"ನಾರಣಪ್ಪ. ನನ್ನಿಂದ ನಿಮಗೇನಾದರೂ ಉಪಯೋಗವಾದರೆ ಸಂತೋಷವೇ. ಇನ್ನೇನೂ ಇಲ್ಲದೆ ಹೋದರೂ ನಮ್ಮೊಳಗಿನ ಪರಿಚಯಕ್ಕಾದರೂ ಆ ಇನ್ಸ್‌ಪೆಕ್ಟರ್ ಕಾರಣನಾದ! ಅದಕ್ಕಾಗಿ ಆತನಿಗೆ ಧನ್ಯವಾದ ಅರ್ಪಿಸಬಹುದು. ಏನಂತೀರಾ?"

ನಗುವ ಅಭ್ಯಾಸವೇ ಆ ತುಟಿಗಳಿಗೆ ಇಲ್ಲವೇನೋ ಎಂದು ಮುರಲೀಧರ ಹಿಂದೆ ಭಾವಿಸಿದ್ದ. ಆ ಭಾವನೆ ನಿಜವಾಗಿರಲಿಲ್ಲ. ನಾರಣಪ್ಪನ ಮುಖದಿಂದ ಮಂದಹಾಸ, ಬೇಕು ಎಂದಾಗಲೆಲ್ಲ ಅತ್ಯಂತ ಸಹಜವಾಗಿ ಸೂಸುತಿತ್ತು.

"ನಾನಾಗಿಯೇ ನಿಮ್ಮ ಪರಿಚಯ ಮಾಡ್ಕೋಬೇಕೂಂತಿದ್ದೆ. ನೀವು ಕತೆಗಿತೆ ಬರೀತೀರಿ ಅಲ್ವೆ?"

"ಇಲ್ವಲ್ಲ! ಯಾರು ಹಾಗಂದರು?"

ಮಾತು ಪ್ರಿಯವೆನಿಸಿದರೂ ಘನತರವಾದ ಆರೋಪವೇ! ಹಳೆಯ ಕಥೆ. ಊರಲ್ಲಿ ಪ್ರೌಢಶಾಲೆಯಲ್ಲಿದ್ದಾಗ ಏನನ್ನೋ ಬರೆದಿದ್ದ. ಒಂದು ಕೈಬರೆಹದ ಪತ್ರಿಕೆಗೆ ಸಂಪಾದಕನಾಗಿದ್ದ. ಅಂಥದೊಂದು ಹಳೆಯ ಸಂಚಿಕೆಯನ್ನು ಇಲ್ಲಿ ಕೆಲ ಹುಡುಗರು ನೋಡಿಯೂ ಇದ್ದರು ಹಿಂದೆ.

"ಮಹದೇವಯ್ಯ ಹೇಳ್ದ. ಈಗಲ್ಲಾಂತಿಟ್ಕೊಳ್ಳಿ."

ಸುದ್ದಿಯ ಮೂಲ ಸ್ಪಷ್ಟವಾಯಿತು.

"ಏನು ಮಹಾ? ಅಂಥ ಕಥೆ ಎಲ್ರೂ ಬರೀತಾರೆ."

"ಇರಬಹುದು. ಆದರೆ ನಾನು ಬರೆಯೋದಿಲ್ಲ ನೋಡಿ."

"ಈಗೇನೂ ಅಂಥ ಉತ್ಸಾಹ ನನಗಿಲ್ಲ. ವಿದ್ಯಾರ್ಜನೆಗೆ ಅಂತ ಈ ಊರಲ್ಲಿ ಕಾಲಯಾಪನೆ ಮಾಡೋದೇ ದೊಡ್ಡ ಸಮಸ್ಯೆಯಾಗಿದೆ."

ನಾರಣಪ್ಪ ಒಲವು ತುಂಬಿದ ದೃಷ್ಟಿಯಿಂದ ಮುರಲೀಧರನನ್ನು ನೋಡಿದ.

"ನನಗೆ ಇದು ಹುಟ್ಟೂರು ಅನ್ನೋದಷ್ಟೇ ವ್ಯತ್ಯಾಸ. ನಾವೇನೂ ಶ್ರೀಮಂತರಲ್ಲ. ಆಗಲೇ ಹೇಳಿದೆನಲ್ಲ. ಬಹಳ ದಿವಸದಿಂದ ನಿಮ್ಮನ್ನು ನೋಡ್ತಿದ್ದೆ. ಪರಿಚಯ ಮಾಡ್ಕೋಬೇಕು ಅನಿಸಿತ್ತು, ಆದರೂ ಸಂದರ್ಭ ಒದಗಿರ್ಲಿಲ್ಲ."

"ನಾನೂ ಸ್ವಲ್ಪ ಮಟ್ಟಿಗೆ ಸಂಕೋಚ ಪ್ರವೃತ್ತಿಯವನೇ. ನಾನಾಗಿ ಯಾರ ಜತೇಲೂ ಸೇರಿಕೊಳ್ಳೋದಿಲ್ಲ."

"ಗೊತ್ತು."

ಇಬ್ಬರನ್ನೂ ಬಿಗಿದುಬಿಟ್ಟಿತ್ತು, ಇಂತಹದೇ ಎಂದು ಹೇಳಲಾಗದ, ಅಗೋಚರವಾದ, ಒಂದು ರಜ್ಜು. ಆ ಭೇಟಿಯವರೆಗೂ ತನ್ನ ಹೃದಯ ಭಾರವಾಗಿತ್ತೆಂದು ನಂಬಲು ಮುರಲೀಧರ ಈಗ ಸಿದ್ಧನಿರಲಿಲ್ಲ. ನಾರಣಪ್ಪನೂ ಅಷ್ಟೇ. ಅಪಾಯದ ಕರಿಯ ಛಾಯೆ ಆವರಿಸಿದ್ದ ವ್ಯಕ್ತಿಯಂತೆ ಆತ ತೋರುತ್ತಲೇ ಇರಲಿಲ್ಲ. ಇಬ್ಬರಿಗೂ ಪ್ರಿಯವಾದ ವಿಷಯಗಳನ್ನು ಕುರಿತು ಬಾಲ್ಯ ಸ್ನೇಹಿತರು ಮಾತನಾಡುವಂತಿತ್ತು, ಆ ಸಂಭಾಷಣೆ.

ಕಾಲೇಜಿನ ಕಡೆ ನೋಡಿ ನಾರಣಪ್ಪನೆಂದ:

"ಹುಡುಗರೆಲ್ಲ ಒಳಗೆ ಹೋಗ್ತಿದಾರೆ, ಏಳಿ."

ಎದ್ದು ನಿಂತಾಗ ಮುರಲೀಧರನನ್ನು ನೋಡಿ, ಬೀದಿಯತ್ತ ತಿರುಗಿ, ಮತ್ತೆ ನಾರಣಪ್ಪನೇ ಅಂದ:

"ಗೂಢಚಾರರೆಲ್ಲ ಈ ಬೀದೀಲಿ ಓಡಾಡೋದು ಜಾಸ್ತಿ. ನನ್ನ ಪರಿಚಯ ವಿದ್ದೋರು ನಮ್ಮಿಬ್ಬರನ್ನೂ ಜತೇಲಿ ನೋಡಿದರು ಅಂದರೆ—"

"ಮಹಾ! ನೋಡ್ಕೊಳ್ಳಿ. ನನಗೆ ಅದರ ಯೋಚನೆ ಇಲ್ಲ. ಯಾರ ಹೆದರಿಕೆಯೂ ನನಗಿಲ್ಲ."

ಅವರ ಗೆಳೆತನಕ್ಕೆ ಮುದ್ರೆಯಂತಿತ್ತು ಆ ಮಾತು.

ಕಾಲೇಜಿನ ಹತ್ತಿರ ಬರುತಿದ್ದಂತೆ ನಾರಣಪ್ಪ ಕೇಳಿದ:

"ಆತನ ಹೆಸರು ರಾಮಚಂದ್ರಯ್ಯ ಅಂತ ಅಂದ್ರಿ, ಅಲ್ವೆ?"

"ಹೂಂ. ಯಾರೋ ಲೆಕ್ಚರರ್ ಇರಬಹುದೂಂತಿದ್ದೆ ಮೊದಲು. ಬರೇ ನೋಟಕ್ಕೆ, ಆಸಾಮಿ ಎಂಥವನೂಂತ ಗೊತ್ತೇ ಆಗೋದಿಲ್ಲ."

ನಾರಣಪ್ಪ ನಸುನಕ್ಕು ಅಂದ:

"ನಿಜ. ಬರೇ ನೋಟದಿಂದಲೇ ಯಾವಾಗಲೂ ಒಬ್ಬರ ಗುಣ ಕಂಡುಹಿಡಿಯೋಕೆ ಆಗೊಲ್ಲ."

ನೋಟ ಮಾತ್ರದಿಂದ ನಾರಣಪ್ಪನ ಗುಣವನ್ನು ತಿಳಿದಿದ್ದನೆ ಮುರಲೀಧರ? ಗೆಳೆಯನ ಮಾತಿನ ಸೂಕ್ಷ್ಮವನ್ನು ಗ್ರಹಿಸಿ ಆತನಿಗೂ ನಗು ಬಂತು.

ೞ

ಆ ದಿನ ಆರಂಭವಾಗಲಿದ್ದ ಕ್ರಿಕೆಟ್ ಪಂದ್ಯಾಟ, ನಗರದ ಕ್ರೀಡಾಭಿಮಾನಿಗಳ ಗಮನ ಸೆಳೆದಿತ್ತು. ಬಹು ಮಂದಿ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ರಜಾ ಕೊಡಲು ನಿರ್ಧರಿಸಿದ್ದರು.

ಮುರಲೀಧರ ಕ್ರಿಕೆಟ್ ಹುಚ್ಚನಾಗಿರಲಿಲ್ಲ. ಆದರೆ, ಎಳೆಯರ ಉತ್ಸಾಹ ಅಂಟು ಜಾಡ್ಯದಂತಿತ್ತು. ಮೊದಲ ಪಿರೇಡು ಮುಗಿಸಿಕೊಂಡು ತಾನೂ ಹೊರಬೀಳಬೇಕು, ಎಂದು ಯೋಚಿಸುತ್ತ ಆತ ತರಗತಿಯನ್ನು ಸೇರಿದ.

ಅಲ್ಲಿ ಇದ್ದವರು ಏಳೆಂಟು ಜನ. ಮುರಲೀಧರನ ಕಣ್ಣುಗಳು ತಮಗೆ ಬೇಕಾಗಿದ್ದ ವ್ಯಕ್ತಿಯನ್ನು—ನಾರಣಪ್ಪನನ್ನು—ಹುಡುಕಿದುವು. ಆತ ಬಂದಿರಲಿಲ್ಲ. ಕ್ರೀಡಾಂಗಣದ ಪ್ರೇಕ್ಷಕರಲ್ಲಿ ಒಬ್ಬನಾಗಿ ನಾರಣಪ್ಪ ಕುಳಿತಿರಬಹುದೆಂದು ನಂಬುವುದು ಕಷ್ಟವಾಗಿತ್ತು. ತೋರಿಕೆಗೆ ಶೀತಲವೆಂದು ಕಂಡರೂ ಉರಿಯುತ್ತಿದ್ದ ಬೆಂಕಿಯಲ್ಲವೆ ಆ ಹೃದಯದಲ್ಲಿದ್ದುದು? ನೂರು ಜನರ ನೋವನ್ನು ನುಂಗಿದ್ದ ಆ ವಿಷಕಂಠ, ಸಂತೋಷ ಸಮಾರಂಭದಲ್ಲಿ ಮೈಮರೆಯುವುದುಂಟೆ?...

ಉಪನ್ಯಾಸಕರು ಒಳಬಂದು ಬಿಕೋ ಎನ್ನುತಿದ್ದ ತರಗತಿಯನ್ನು ನೋಡಿದರು. ಬೇಸರವನ್ನು ತೋರ್ಪಡಿಸದೆ ಹುಡುಗರನ್ನು ಉದ್ದೇಶಿಸಿ ಅವರೆಂದರು:

"ನೀವು ಯಾಕಪ್ಪಾ ಬಂದಿದೀರಿ? ಕ್ರಿಕೆಟ್ ಬೇಡವೆ ನಿಮಗೆ?"

ವಿದ್ಯಾರ್ಥಿಗಳು ಕಿರುನಗೆಯ ಪ್ರತ್ಯುತ್ತರವಿತ್ತರು:

ಹಾಜರಿ ಹಾಕುವ ಕೆಲಸ ಮುಗಿಸಿ ಅಧ್ಯಾಪಕರೆಂದರು.

"ಇಷ್ಟು ಜನಕ್ಕೆ ಎಂಥ ಪಾಠ? ನೀವೂ ಹೋಗಿ ಬೇಕಾದರೆ."

ಎದ್ದು ಹೊರಬೀಳಲು ಹುಡುಗರು ಹಿಂದುಮುಂದು ನೋಡುತ್ತಿದ್ದುದನ್ನು ಕಂಡು ಅಧ್ಯಾಪಕರೇ ಮತ್ತೂ ಅಂದರು:

"ತಮಾಷೆಯಲ್ಲ. ನೀವು ಹೋಗ್ಬಹುದು. ನಾವಾಗಿಯೇ ಮೊದಲೇ ರಜಾ ಜಾಹೀರು ಮಾಡಿದ್ದರೆ ಚೆನ್ನಾಗಿತ್ತು."

ಅಷ್ಟು ಹೇಳಿ ಅವರೇ ಎದ್ದರು. ಶಿಕ್ಷಕರನ್ನು ಹಿಂಬಾಲಿಸುವುದು ವಿದ್ಯಾರ್ಥಿಗಳಿಗೆ ಬಲು ಸುಲಭವೆನಿಸಿತು.

ಬೀದಿಗಿಳಿದ ಮುರಲೀಧರನ ಕಾಲುಗಳೇನೋ ಆಟದ ಬಯಲಿಗೆ ಅಭಿಮುಖ

ವಾಗಿ ನಡೆದುವು. ಆದರೆ, ಪ್ರವೇಶದ ಟಿಕೆಟು ಕೊಳ್ಳುವ ಜಾಗ ಸಮೀಪಿಸಿದಾಗ, ಒಳ ಹೋಗಬೇಕೆ ಬೇಡವೆ ಎಂಬ ಯೋಚನೆ ಆತನನ್ನು ಬಾಧಿಸಿತು. ಆ ವೆಚ್ಚಕ್ಕಾಗಿ ಹೆಚ್ಚಿನ ನಾಲ್ಕಾಣೆಯ ಪೂರ್ವ ಸಿದ್ಧತೆಯನ್ನೇನೋ ಆತ ಮಾಡಿದ್ದ. ಆದರೂ ಹಿಮ್ಮೆಟ್ಟುವ ಬಯಕೆಯಾಯಿತು. ವಾಚನಾಲಯವಿತ್ತು ಅಲ್ಲೇ. ಸಂಘದ ಕಟ್ಟಡ, ತೆರೆದ ಬಾಗಿಲುಗಳು, ಪರಿಚಿತನಾದ ಆತನನ್ನು ಕರೆಯುತ್ತಿದ್ದುವು. ಆದರೆ, ಬಯಲಿನ ಆವರಣದೊಳಗಿಂದ ಕಲರವವೂ ಏಳುತ್ತಿತ್ತು. ಮೋಹಕವಾಗಿತ್ತು ಆ ಹರ್ಷೋದ್ಗಾರ. ಅದು ಕಿವಿಗೆ ಬಿದ್ದೊಡನೆ, ಹಿಂದಿರುಗುವ ಬಯಕೆಯನ್ನು ಮೆಟ್ಟಿ ನಿಂತಿತು ಮನಸ್ಸು...

ಬೆಳಗ್ಗೆ ಪಾಠ ಹೇಳಲು ಹೋದಾಗ ಶ್ಯಾಮು ಅಂದಿದ್ದ:

'ನಾವಿವತ್ತು ಮ್ಯಾಚಿಗೆ ಹೋಗ್ತೀವಿ ಸಾರ್. ನೀವು ಬರೊಲ್ವಾ?'

ಆ ಆಟದಲ್ಲಿ ತನಗೆ ಅಷ್ಟೊಂದು ಆಸಕ್ತಿ ಇಲ್ಲವೆಂದು ಆ ಎಳೆಯರೆದುರು ಹೇಳುವುದು ಅವಮಾನದ ವಿಷಯವಾಗಿತ್ತು ಮುರಲೀಧರನಿಗೆ.

'ಬರಬೇಕೂಂತಿದೀನಿ.'

'ನಮ್ಮಕ್ಕನಿಗೆ ರಜಾ ಇಲ್ವಂತೆ. ಆದರೂ ಅವಳು ಬರ್ತಾಳೆ. ರಜಾ ಕೊಡದೇ ಇರೋದು ತಪ್ಪಲ್ವ ಸಾರ್?'

ಮುರಲೀಧರ ನಸುನಕ್ಕು, ತಾನೂ ಈಸಾರೆ ಮ್ಯಾಚ್ ನೋಡಲು ಹೋಗುವುದೇ ಸರಿ ಎಂದು ನಿರ್ಧರಿಸುತ್ತ, ನುಡಿದ:

'ಖಂಡಿತವಾಗಿಯೂ ತಪ್ಪು.'

ಆ ದಿನದ ಪಂದ್ಯಾಟದಲ್ಲಿ ಭಾಗವಹಿಸಲಿದ್ದ ನಮ್ಮ ಸಂಸ್ಥಾನದ ತಂಡದ ಪ್ರತಿಯೊಬ್ಬ ಕ್ರೀಡಾಪಟುವಿನ ವಿಷಯವೂ ಶ್ಯಾಮುನಿಗೆ ಗೊತ್ತಿತ್ತು. ಆ ಆಯ್ಕೆ ಅಸಮರ್ಪಕ ಎಂಬ ಅಭಿಪ್ರಾಯವೂ ಇತ್ತು ಆತನಿಗೆ.

'ಬೌಲರ್ ಶ್ರೀನಿವಾಸ್ ಇಲ್ದೆ ಅದೆಂಥ ಮ್ಯಾಚ್ ಸಾರ್?'

ಶ್ಯಾಮನ ಅಭಿಪ್ರಾಯದೊಡನೆ ಸಮರಸನಾಗುವುದೊಂದೇ ಮುರಲೀಧರನಿಗಿದ್ದ ದಾರಿ.

ಎದುರಾಳಿಗಳಾಗಿ ಬಂದಿದ್ದ ಹೊರಗಿನವರ ವಿಷಯವೂ ತಿಳಿದಿತ್ತು ಆ ಶ್ಯಾಮುನಿಗೆ. 'ಕುಲಗೋತ್ರ'ಗಳ ವಿವರ ಕೂಡ.

ಶ್ಯಾಮು ಒಬ್ಬನೇ ಎಂದಲ್ಲ. ನಳಿನಿಯೂ ಅತ್ಯಂತ ಆಸಕ್ತಿಯಿಂದ ಅಣ್ಣನ ಪ್ರತಿಯೊಂದು ಮಾತಿಗೂ ಕಿವಿಗೊಡುತ್ತಿದ್ದಳು.

ಆ ಬೆಳಗ್ಗೆ ಅವರ ಗಮನವನ್ನು ಪಾಠದೆಡೆಗೆ ಸೆಳೆಯುವುದು ಮುರಲೀಧರನಿಗೆ ಬಹಳ ಕಷ್ಟವಾಯಿತು. ಕ್ರಿಕೆಟಿಗೆ ಸಂಬಂಧಿಸಿ ಅವರಷ್ಟು ತನಗೆ ತಿಳಿಯದಲ್ಲಾ ಎಂದು ನಾಚಿಕೆಯೂ ಆಯಿತು.

ಈಗ ಒಳಹೋಗದೇ ಇದ್ದರೆ ನಾಳೆ ಬೆಳಗ್ಗೆ ಪೂರಾ ಅವಮಾನವಾಗುವ

ಸಂಭವ. ಒಂದೆರಡು ಪ್ರಶ್ನೆಗಳಿಂದಲೇ, ಮ್ಯಾಚಿಗೆ ತಾನು ಬರಲಿಲ್ಲವೆಂಬುದನ್ನು ಶ್ಯಾಮು ಕಂಡುಹಿಡಿಯಬಹುದು. ಆತನ ದೃಷ್ಟಿಯಲ್ಲಿ 'ಮೇಸ್ತ್ರ' ಬೆಲೆ ಕಡಮೆಯಾಗಿ ತೋರಬಹುದು. ಆ ಎಳೆಯರ ಅಕ್ಕ...

ಅಂತಹ ಪರಿಸ್ಥಿತಿಗೆ ಮುರಲೀಧರ ಸಿದ್ಧನಿರಲಿಲ್ಲ.

ಅಲ್ಲದೆ, ಸಂಜೆ ಪಾಠ ಹೇಳಲು ಹೋಗುವ ಮನೆಯ ಹುಡುಗರೂ ಪಂದ್ಯಾಟದ ಪ್ರಸ್ತಾಪ ಮಾಡಲಾರರೆಂಬ ಭರವಸೆ ಏನು?

ಒಂದು ವೇಳೆ ನಾರಣಪ್ಪನೂ ಒಳಗೇ ಇದ್ದನೆಂದರೆ?

ಅರಿವಿಲ್ಲದಂತೆಯೇ ಆತ್ಮೀಯತೆಯ ಅವ್ಯಕ್ತ ರಜ್ಜು ಅವರಿಬ್ಬರನ್ನೂ ಬಂಧಿಸಿತ್ತು. ನಾರಣಪ್ಪನ ವಿಷಯದಲ್ಲಿ ಪ್ರೇಮ ಆದರಗಳು ಮುರಲೀಧರನಲ್ಲಿ ಮೊಳೆತಿದ್ದುವು. ಗೆಳೆತನದ ಬುನಾದಿಯಾದ ಆ ಸಂಭಾಷಣೆಯನ್ನು ಮೆಲುಕು ಹಾಕುತ್ತ ಎಷ್ಟೋ ಸಾರೆ ಮುರಲೀಧರ ತನ್ನನ್ನು ತಾನೇ ಪ್ರಶ್ನಿಸಿದ್ದ: ಯಾಕೆ ಹೀಗೆ? ಯಾಕೆ? ನಾರಣಪ್ಪ ತನಗೆ ಪ್ರಿಯನಾಗಿ ತೋರುತ್ತಿರುವುದಕ್ಕೆ ಕಾರಣವೇನು? ಏನು?

ಎಲ್ಲ ವಿದ್ಯಾರ್ಥಿಗಳ ಹಾಗಿರಲಿಲ್ಲ ನಾರಣಪ್ಪ. 'ನಾವು ಸ್ನೇಹಿತರಾಗಿರಲು ಇದೊಂದೇ ಗುಣ ಸಾಲದೆ?'—ಎನಿಸುತ್ತಿತ್ತು ಮುರಲೀಧರನಿಗೆ. ಸ್ವತಃ ಆತನ ಮನೋವೃತ್ತಿಯೂ ಅಂಥದೇ ಅಲ್ಲವೆ?

ದೇಶದ ಸ್ವಾತಂತ್ರ್ಯ, ಸ್ವಾತಂತ್ರ್ಯಕ್ಕೋಸ್ಕರವಾದ ಹೋರಾಟ...ಗಹನವೆನಿಸಿದರೂ ಪವಿತ್ರ ವಿಚಾರಗಳು. ಅಂತಹ ವಿಚಾರಗಳಿರುವ ವ್ಯಕ್ತಿ, ವಿನೋದ ವಿಹಾರಗಳಿಗಾಗಿ ಹೆತ್ತವರ ಹಣವನ್ನು ವ್ಯಯಮಾಡುವುದೊಂದನ್ನೇ ತಿಳಿದಿದ್ದ ಅಸಂಖ್ಯ ವಿದ್ಯಾರ್ಥಿಗಳಿಗಿಂತ ಭಿನ್ನವಾಗಿರುವುದು ಸ್ವಾಭಾವಿಕವೇ ಸರಿ.

"ಟಿಕೆಟ್ ಕೊಡಿ."

ತೂತು ಮಾಡಿದ ಚುಕ್ಕಿಗಳುದ್ದಕ್ಕೂ ಹರಿದು ಒಂದು ಕೈ ಹೊರ ನೀಡಿದ ಹಸುರು ಕಾಗದ.

ದ್ವಾರಪಾಲಕನಿಗೆ ಅದರ ಅರ್ಪಣೆ.

ಅಲ್ಲೊಬ್ಬ, ಎಲ್ಲರಿಗೂ ಕೇಳಿಸುವಂತೆ ತನ್ನಷ್ಟಕ್ಕೆ ಅಂದುಕೊಂಡ:

"ಒಳಗೆ ಜಾಗವೇ ಇಲ್ಲ. ಏನೂಂತ ಟಿಕೆಟ್ ಕೊಡ್ತಾ ಇದಾರೊ?"

ಆತ ಸತ್ಯವನ್ನೇ ಆಡಿದ್ದ. ನಾಲ್ಕಾಣೆಯ ಅಂಕಣವೆಲ್ಲ ಭರ್ತಿಯಾಗಿತ್ತು. ಉಳಿದ ಕಡೆಗಳಲ್ಲೂ ಅಷ್ಟೆ. ಊಟ ತಿಂಡಿ ಪಾನೀಯಗಳ ಪರಿವೆ ಇಲ್ಲದೆ, ರಣಗುಡುತ್ತಿದ್ದ ಬಿಸಿಲನ್ನು ಗಮನಿಸದೆ, ಎಳೆಯರಿಂದ ಮುದುಕರವರೆಗೆ ಜನ ಅಲ್ಲಿ ಕಿಕ್ಕಿರಿದು ನೆರೆದಿದ್ದರು. ಎಲ್ಲರ ದೃಷ್ಟಿ ಕೇಂದ್ರೀಕರಿಸಿದ್ದುದೂ ಆಡುತ್ತಿದ್ದ ಕ್ರೀಡಾಪಟುಗಳ ಮೇಲೆ. ನಿಮಿಷ ನಿಮಿಷಕ್ಕೂ ಆಡುವವರೊಡನೆ ಭಾಗಿಗಳಾಗುವ ಪ್ರೇಕ್ಷಕರು. ಔಟಾಯಿತೆಂದು ಆಟಗಾರ ನಿರಾಸೆಯ ನಿಟ್ಟುಸಿರು ಬಿಡದೆ ಇರಬಹುದು. ಆದರೆ

ವೀಕ್ಷಕರ ಪಾಲಿಗೆ ಅದು ಯಮಯಾತನೆ. ಎಲ್ಲರನ್ನೂ ಅಣಕಿಸುತ್ತ ಚೆಂಡು ದೂರ ಬಲು ದೂರ ಹೋದರಂತೂ ಸಂಭ್ರಮದ ಕೋಲಾಹಲ ನೆರೆದವರ ಪಾಲಿಗೆ. ನಮ್ಮವರೆಂಬ ಅಭಿಮಾನವಿದ್ದರೂ ಹೊರಗಿನವರೆಂಬ ಭೇದಭಾವವಿರಲಿಲ್ಲ. ಮೆಚ್ಚುಗೆ ಸೂಚಿಸುವ ವಿಷಯದಲ್ಲಿ ಯಾರೂ ಜಿಪುಣರಾಗಿರಲಿಲ್ಲ.

ಕೆಲ ಗಂಟೆಗಳ ಮಟ್ಟಿಗೆ ಜನಜಂಗುಳಿಯನ್ನು ಒಂದಾಗಿ ಬೆಸೆಯ ಹೊರಟಿತ್ತು ಆಟ.

ನಿಂತವರ ನೂಕುನುಗ್ಗಲಿನಲ್ಲಿ ಸ್ವಲ್ಪ ಹೊತ್ತು ಮುರಲೀಧರ ಚಡಪಡಿಸಿದ. ಪುಸ್ತಕಗಳು ಕೈತಪ್ಪಿ ಹೋಗಬಾರದೆಂದು ಭದ್ರವಾಗಿ ಎದೆಗೆ ಅಮುಕಿ ಹಿಡಿದು, ಸಾಧ್ಯವಾದ ಕಡೆಗಳಲ್ಲೆಲ್ಲ ಆತ ದೃಷ್ಟಿಹರಿಸಿದ. ಬಿಳಿಯ ಪೋಷಾಕು ಅಲ್ಲಿ ಇಲ್ಲಿ ಕಾಣಿಸುತ್ತಿತ್ತು. ಆದರೆ ನಾರಣಪ್ಪ? ಎಲ್ಲಿ, ಯಾವ ಮೂಲೆಯಲ್ಲಿ ಇರುವ ಆತ?

ಶ್ಯಾಮು, ನಳಿನಿ, ಅವರ ಅಕ್ಕ...ಸೀರೆಗಳೇ ಸೀರೆಗಳು, ಲಂಗಗಳು, ಫ್ರಾಕುಗಳು—ವಿವಿಧ ಬಣ್ಣಗಳ ಪ್ರದರ್ಶನ. ಅದು ದೂರದ ದೃಶ್ಯ. ಬಗೆ ಬಗೆಯ ಮನುಷ್ಯಾಕೃತಿಗಳು ಮಾತ್ರ. ಪರಿಚಿತರನ್ನು ಗುರುತಿಸುವುದು ಸುಲಭವಾಗಿರಲಿಲ್ಲ.

ಅಲ್ಲಲ್ಲಿ ಮುರಲೀಧರನ ಸಹಪಾಠಿಗಳು ಕೆಲವರು ಕಾಣಿಸಿಕೊಂಡರು. ಪುಸ್ತಕಗಳೊಡನೆ ಕಾಲೇಜಿಗೆಂದು ಬಂದವರೇ ಅಲ್ಲ ಅವರು. ಆ ದಿನದ ಕಾರ್ಯಕ್ರಮ ಅವರೆಲ್ಲರ ಪಾಲಿಗೆ ಪೂರ್ವ ನಿಶ್ಚಿತವೆಂಬುದನ್ನು ಅವರ ಬರಿಗೈಗಳೇ ಸಾರುತ್ತಿದ್ದುವು.

ಒಮ್ಮಿಂದೊಮ್ಮೆಲೆ ಮುರಲೀಧರನಿಗೆ ತಾನು ಹಿಡಿದುಕೊಂಡಿದ್ದ ಪುಸ್ತಕಗಳ ನೆನಪಾಗಿ ನಾಚಿಕೆ ಎನಿಸಿತು. ಯಾವುದೊ ಸಭೆಯ ಒಳಕ್ಕೆ ನುಸುಳಿದ ಅಪರಿಚಿತ ಮನುಷ್ಯನಂತಾಯಿತು ಅವನ ಮನೋಸ್ಥಿತಿ.

ಒಳಗೆ ತಾನು ಬರಲೇಬಾರದಾಗಿತ್ತು ಎಂದುಕೊಂಡ ಆತ.

ಆಟ ನಡೆದಿತ್ತು. ಆಸಕ್ತಿ ಇಲ್ಲದೆಯೆ ಮುರಲೀಧರ ನಿಂತ.

ಜನ ಉತ್ಸಾಹ ತೋರುತ್ತಿದ್ದರು; ಸಂತೋಷ ಸೂಚಿಸುತ್ತಿದ್ದರು; ಸಮಾಧಾನ ವ್ಯಕ್ತಪಡಿಸುತ್ತಿದ್ದರು. ಆ ಗುಂಪಿನೊಡನೆ ಬೆರೆತಿದ್ದರೂ, ಒಂಟಿಯಾಗಿಯೇ ಇರುವ ಬೇರೆಯೇ ಜೀವವಾಗಿ ಮುರಲೀಧರ ಹೊತ್ತು ಕಳೆದ. ಜನರ ಹರ್ಷಧ್ವನಿಯೊಡನೆ ಯಾಂತ್ರಿಕವಾಗಿ ಆತನ ತುಟಿಗಳೂ ಮುಗುಳು ನಕ್ಕುವು. ಆದರೆ ಕಣ್ಣುಗಳು ಲವಲವಿಕೆ ತೋರಲಿಲ್ಲ.

ಆ ಪ್ರೇಕ್ಷಕರ ನಡುವೆ ನಾರಣಪ್ಪನಿಲ್ಲವೆಂಬ ಭಾವನೆಯೇ ಮುರಲೀಧರನಲ್ಲಿ ಬಲಗೊಂಡಿತು. ಆತ ಬಂದಿರಬಹುದೆಂಬ ಶಂಕೆಯಾದರೂ ಹೇಗೆ ಹುಟ್ಟಿತೊ?—ಎಂದು ತನಗೆ ತಾನೇ ಮುರಲೀಧರ ಛೀಮಾರಿ ಹಾಕಿದ.

ನಿಂತೇ ಇದ್ದ ಕಾಲುಗಳು ತಮಗೆ ಆಯಾಸವಾಗುತ್ತಿದೆಯೆಂದು ಸೂಚನೆ ಕೊಟ್ಟುವು. ಮನಸ್ಸೇ ಇಲ್ಲದ ಮೇಲೆ ಕಾಲುಗಳೇನು ಮಾಡುತ್ತವೆ, ಪಾಪ!

ಭುಜಗಳ ಮೇಲಿನಿಂದ ಇಣಕಿ ನೋಡಬೇಕಾದ ಆಟದ ಕಣ ಒಂದೆಡೆ;

ಸಮೀಪದಲ್ಲೆ ಬೆನ್ನಹಿಂದೆ ಇದ್ದ ಹೆಬ್ಬಾಗಿಲು ಒಂದೆಡೆ. ನಾಲ್ಕು ಹೆಜ್ಜೆ ನಡೆದ ರಾಯಿತು, ಬೀದಿ ಸಿಗುವುದು.

ಎರಡು ಮೂರು ಸಾರೆ ದ್ವಾರಪಾಲಕ ಸ್ವಯಂಸೇವಕರ ಕಡೆಗೆ ನೋಡಿದ ಮುರಲೀಧರ, ಮನಸ್ಸು ಗಟ್ಟಿಮಾಡಿಕೊಂಡು ಹೊರಟೇಬಿಟ್ಟ. ಹಾಗೆ ಹೊರಟ ತನ್ನನ್ನು ಯಾರೂ ಗುರುತಿಸದಿದ್ದರೆ ಸಾಕು, ಎಂಬುದೊಂದೇ ಆಗ ಆತನ ಮನಸ್ಸಿನೊಳಗಿದ್ದ ಹಂಬಲ.

"ಪಾಸು ತಗೊಳ್ರೀ."

"ಬೇಡಿ."

ಸಮೀಪದಲ್ಲೆ ಸಂಭ್ರಮದ ಆಟ ನಡೆಯುತ್ತಿರುವುದನ್ನು ತಾನು ಬಲ್ಲೆ ಎಂಬಂತೆ ತುಸು ಮೌನದಿಂದಲೆ ಉದ್ದಕ್ಕೆ ಮಲಗಿತ್ತು ಬೀದಿ. ಜನಸಂಚಾರವೂ ಕಡಮೆಯಾಗಿದ್ದಂತೆ ಭಾಸವಾಗುತ್ತಿತ್ತು. ನಿಜವಾಗಿ ನೋಡಿದರೆ, ಪ್ರತಿ ದಿನವೂ ಆ ಹೊತ್ತಿನಲ್ಲಿ ಬೀದಿಗಳಿರುತ್ತಿದ್ದುದೇ ಹಾಗೆ. ಆದರೆ ಈ ದಿವಸ ನಗರದಲ್ಲಿ ಕ್ರಿಕೆಟ್ ಆಟ ನಡೆಯುತ್ತಿದ್ದುದೇ ಅದಕ್ಕೆ ಕಾರಣವೇನೋ ಎಂಬ ಭ್ರಮೆ ಹುಟ್ಟುವಂತಿತ್ತು.

ಸ್ವಲ್ಪ ಹೊತ್ತು ವಾಚನಾಲಯದೊಳಗಿದ್ದರಾಯಿತೆಂದು ಮುರಲೀಧರ ನಿರ್ಧರಿಸಿದ.

ಒಳಗಿದ್ದವರು ಒಬ್ಬಿಬ್ಬರು ಮಾತ್ರ. ಪತ್ರಿಕೆಗಳ ಆ ಲೋಕ ಆತನಿಗೆ ಪ್ರಿಯವಾಗಿತ್ತು. ವಾರ ಪತ್ರಿಕೆ, ಮಾಸಪತ್ರಿಕೆ, ದಿನಪತ್ರಿಕೆ–ಒಂದೊಂದರಲ್ಲೂ ಒಂದೊಂದು ವೈಶಿಷ್ಟ್ಯವನ್ನು ಆತ ಕಾಣುತಿದ್ದ. ದಿನಪತ್ರಿಕೆಯನ್ನಂತೂ, ಪ್ರತಿಯೊಂದನ್ನು ಓದಿದಾಗಲೂ, ಬದುಕು ಹೊಚ್ಚಹೊಸದು ಎನ್ನುವ ಭಾವನೆಯುಂಟಾಗುತ್ತಿತ್ತು. ಕಾಲಮುಗಳುದ್ದಕ್ಕೂ ಕಣ್ಣೋಡಿಸುತ್ತ ಲೋಕಸಂಚಾರ ಮಾಡುವುದು, ಅತ್ಯಂತ ಸಂತೋಷಕರವಾದ ಅನುಭವವಾಗಿತ್ತು ಆತನಿಗೆ.

ಪತ್ರಿಕೆಗಳನ್ನೆಲ್ಲ ಓದಿ ವಾಚನಾಲಯದಿಂದ ಹೊರಬೀಳುವಾಗ, ಪ್ರಿಯವಾದುದನ್ನು ಬಿಟ್ಟು ಬರುವ ನೋವೂ ಇರುತ್ತಿತ್ತು, ಸ್ವಲ್ಪ.

ಹೊರಡುತ್ತಿದ್ದ ಮುರಲೀಧರನನ್ನು ಉದ್ದೇಶಿಸಿ ಜವಾನ ಕೇಳಿದ:

"ನೀವು ಓಗ್ಲಿಲ್ವಾ ಮ್ಯಾಚ್ ನೋಡೋಕೆ?"

"ಹೋಗಿ ಬಂದ್ಬಿಟ್ಟೆ," ಎಂದ ಮುರಲೀಧರ.

ಆಟ ಮುಗಿಯುವುದಕ್ಕೆ ಮುಂಚೆಯೆ ಯಾಕೆ ಬಂದಿರೆಂಬ ಮತ್ತೊಂದು ಪ್ರಶ್ನೆಗೆ ಅವಕಾಶ ಕೊಡದೆ ಆತ ಬೇಗ ಬೇಗನೆ ಹೆಜ್ಜೆ ಹಾಕಿದ.

ಬ್ಯಾಂಕಿನೆದುರಲ್ಲಿದ್ದ ಪುಟ್ಟ ಹೋಟೆಲಿನಲ್ಲಿ ಒಂದು ಗುಟುಕು ಕಾಫಿ. [ಮ್ಯಾಚಿನ ಹೆಸರಲ್ಲಿ ನಾಲ್ಕಾಣೆ ತೆತ್ತುದಂತೂ ನಷ್ಟವೇ ಆಯಿತು.] ಬಳಿಕ ಕೊಠಡಿಗೆ.

ಆ ಜಾಗ ಸಮೀಪಿಸುತ್ತಿದ್ದಂತೆ ಸಮೀಪದ ಮನೆಯವರೊಬ್ಬರು ಕೇಳಿದರು:

"ಇಷ್ಟು ಬೇಗ್ನೆ ಮ್ಯಾಚು ಮುಗೀತೇನ್ರಿ?"

"ಇಲ್ಲ, ನಡೀತಾ ಇದೆ."

"ಮತ್ತೆ ನೀವು?"

ಸುಳ್ಳು ಹೇಳುವುದೊಂದೇ ಆತನ ಮುಂದಿದ್ದ ಸುಲಭದ ಹಾದಿ.

"ತಲೆ ನೋಯ್ತಿತ್ತು, ಬಂದ್ಬಿಟ್ಟೆ."

"ನಮ್ಮ ಹುಡುಗರನ್ನು ಎಲ್ಲಾದರೂ ನೋಡಿದಿರಾ?"

ಮನೆಯಾಕೆ ಮುಖ ತೋರಿಸಿ, ಗಂಡನ ಮಾತಿಗೆ ತಮ್ಮ ಧ್ವನಿಯನ್ನೂ ಸೇರಿಸಿದರು:

"ಊಟಾನೂ ಮಾಡ್ದೆ ಹೋಗಿವೆ."

"ನಾನು ನೋಡ್ಲಿಲ್ರೀ. ಭಾರೀ ಜನಸಂದಣಿ. ಹುಡುಗರು ಅಲ್ಲಿಯೇ ಇರ್ತಾರೆ ಬಿಡಿ. ಬೇರೆಲ್ಲಿಗೆ ಹೋಗ್ತಾರೆ?"

ಸಮಾಧಾನವೆನಿಸದೆ ಮನೆಯವರು ಗೊಣಗಿದರು;

"ಎಂಥ ಕ್ರಿಕೆಟೋ ಏನು ಹುಚ್ಚೋ..."

...ಸಂಜೆಯವರೆಗೂ ಮುರಲೀಧರನಿಗೆ ವಿರಾಮವಿತ್ತು. ಓದುತ್ತ ಹೊತ್ತು ಕಳೆಯುವುದೇನೂ ಕಷ್ಟವಾಗಿರಲಿಲ್ಲ. ಪಠ್ಯಪುಸ್ತಕಗಳಿದ್ದುವು, ಪಠ್ಯವಲ್ಲದ ಪುಸ್ತಕ ಗಳಿದ್ದುವು. ಆದರೆ ಮುರಲೀಧರನ ಮನಸ್ಸನ್ನು ತಮ್ಮೆಡೆಗೆ ಸೆಳೆಯಲು ಅವು ಸಮರ್ಥ ವಾಗಲಿಲ್ಲ.

ಆತನ ಅನಿರೀಕ್ಷಿತ ಸಾಮೀಪ್ಯದ ಲಾಭ ದೊರೆತುದು, ಸುರುಳಿ ಸುತ್ತಿ ಮೂಲೆ ಗುಂಪಾಗಿದ್ದ ತೆಳುಹಾಸಿಗೆಗೆ. ಅದನ್ನು ಬಿಡಿಸಿ ಮುರಲೀಧರ ಒರಗಿಕೊಂಡ. ನಿದ್ದೆ ಸಾಧ್ಯವಿರಲಿಲ್ಲ. ಮಿದುಳು ಬಿಸಿಯಾಗಿತ್ತು. ಪದರುಪದರಾಗಿ ಯೋಚನೆಗಳೀಗ ಸುರುಳಿ ಬಿಚ್ಚಿದುವು.

ತಂದೆಯ ಆರೋಗ್ಯ ಸರಿಯಾಗಿಲ್ಲವೆಂದು ಅಣ್ಣ ಇತ್ತೀಚೆಗೆ ಕಾಗದ ಬರೆದಿದ್ದ. ಸದಾ ದುಡಿಯುವ ಆ ಜೀವಕ್ಕೆ ಅದೇನು ತೊಂದರೆಯೊ? ತಮಾಷೆಗಾಗಿ ಸಮವಯಸ್ಕರು ಒಮ್ಮೊಮ್ಮೆ ತಂದೆಯನ್ನು ಕೇಳುವುದಿತ್ತು; 'ನೀವು ಬ್ರಾಹ್ಮಣರೊ? ಒಕ್ಕಲಿಗರೊ?' ಹಾಗೆ ಪ್ರಶ್ನಿಸಲು ಕಾರಣ–ಕೃಷಿಕೂಲಿಗಳ ಜತೆ ಸೇರಿ ಮುರಲೀಧರನ ತಂದೆ ದುಡಿಯುತ್ತಿದ್ದ ರೀತಿ. ತಾವೆಲ್ಲ ನಿಸ್ಸಂಶಯವಾಗಿಯೂ ನೆಲದ ಮಕ್ಕಳು. ಬೀಜಗಳು ಮೊಳೆತು, ಸಸಿ ಚಿಗುರಿ, ಹಾಲು ತೆನೆ ಬಲಿತು ಹಣ್ಣಾದಾಗಲೇ ತುತ್ತು ಆಹಾರದ ಭದ್ರತೆ. ಆದರೆ ದೊರೆಯುತ್ತಿದ್ದುದು ಸ್ವಲ್ಪ. ತಿನ್ನಲು ಇದ್ದ ಬಾಯಿಗಳು ಹಲವು. ಬೇರೆ ಸಂಪಾದನೆ ಇಲ್ಲದೆ ಹೋದರೆ ಆ ಸಂಸಾರ ಹಾಗೆಯೇ ಬಹಳ ಕಾಲ ಮುಂದುವರಿಯದು....

ಬೇರೆ ಸಂಪಾದನೆ—

ವಿದ್ಯಾರ್ಜನೆಗಾಗಿ ತಾನು ಬಂದಿದ್ದ. ಮುಂದೆ? ಈ ವರ್ಷದ ಅಧ್ಯಯನವನ್ನು ಹಾಗೂ ಹೀಗೂ ಮಾಡಿ ಮುಗಿಸಬಹುದು. ಆದರೆ ಪದವೀಧರನಾಗಲು ಬೇಕಾದ

ಅನಂತರದ ಎರಡು ವರ್ಷ? ಆ ದಿಕ್ಕಿನಲ್ಲಿದ್ದುದು ಬರಿಯ ಕತ್ತಲು. ಪದವೀಧರ ರಾದವರಿಗೆಲ್ಲ ಉದ್ಯೋಗ ಕಾದಿತ್ತೆ? ಕೊನೆಯ ಕೊಠಡಿಯಾತ ಹೇಳಿದ್ದ:

'ಮಂಡಿ ಕೆಲಸ ಬೇಜಾರಾಗಿದೆ. ಅಲ್ಲಿ ಬರೋದು ಶಂಕರ ಅಯ್ಯರಿಗೆ ಕೊಡೋ ದಕ್ಕೂ ಸಾಲದು.'

ಆತನ ತೊಂದರೆಯನ್ನು ಅರ್ಥಮಾಡಿಕೊಳ್ಳಲೆತ್ನಿಸಿದ್ದ ಮುರಲೀಧರ. ಆ ಮನುಷ್ಯ ಮತ್ತೂ ಹೇಳಿದ್ದ:

'ಈ ಕೆಲಸ ಬಿಟ್ಬಿಡೋಣಾಂತಿದೀನಿ.'

ಮುರಲೀಧರ ವಿಸ್ಮಯಗೊಂಡು ಕೇಳಿದ್ದ;

'ಬೇರೆ ಯಾವ ಕೆಲಸಕ್ಕೆ ಸೇರ್ಕೊತೀರಾ?'

'ಈಗೇನ್ರಿ? ಯುದ್ಧಕಾಲ. ಯಾವುದಾದರೊಂದು ಕೆಲಸ. ಏನೂ ಸಿಗದೆ ಇದ್ದರೆ ಸೈನ್ಯಕ್ಕೆ ಭರ್ತಿಯಾಗ್ತೀನಿ.'

ಯುವಕರೆಲ್ಲ ಸೈನ್ಯಕ್ಕೆ ಭರ್ತಿಯಾಗುವ ಸನ್ನಿವೇಶ...

ತನ್ನಿಂದ ಅದು ಸಾಧ್ಯವೆ? ಎಷ್ಟೊಂದು ತುಚ್ಛವಾದುದು ಪರಕೀಯ ಸರಕಾರದ ಸೇವೆ! ಯಾರ ಯುದ್ಧ ಇದು? ಯಾತಕ್ಕೋಸ್ಕರ ಆ ನರಮೇಧ? ಯಾವ ರೀತಿಯಲ್ಲೇ ಆಗಲಿ, ಆ ಕಾರ್ಯದಲ್ಲಿ ಸಹಭಾಗಿಯಾಗುವುದು ಎಷ್ಟು ಅಸಹ್ಯ!....

[ಯೋಚಿಸುತಿದ್ದ ಮುರಲೀಧರನ ಕಣ್ಣ ಮುಂದೆ ಅನಿವಾರ್ಯವಾಗಿ ನಾರಣಪ್ಪನ ಮೂರ್ತಿ ಬಂದು ನಿಂತಿತು.]

ಆತ ಧ್ಯೇಯವಾದಿ. ಬದುಕಿಗೊಂದು ಅರ್ಥವಿದೆ ಎಂದು ನಂಬಿದ ಮನುಷ್ಯ. ಪದವೀಧರನಾದಾಗ ನಾರಣಪ್ಪ ಸರಕಾರದ ನೌಕರನಾಗುವನೆಂದು ಊಹಿಸುವುದು ಸಾಧ್ಯವೆ? ಕೊನೆಯ ಕೊಠಡಿಯವನ ವಿಚಾರ ತಿಳಿದರೆ ಆತ ಏನು ಹೇಳುವನೊ?

ಏನು ಹೇಳುವನೆಂಬುದನ್ನು ಕಲ್ಪಿಸಿಕೊಳ್ಳುವುದು ಸುಲಭವಾಗಿತ್ತು.

'ಶತಮಾನಗಳ ಗುಲಾಮಗಿರಿ ನಮಗೆ ಒಗ್ಗಿದೆ ಮುರಲೀಧರ. ನಿರ್ವೀರ್ಯರಾದ ನಾವು ಮಾಡೋದೇ ಹೀಗೆ. ಸರಕಾರದ ಚಾಕರಿಯ ಹೊರತು ನಮ್ಮ ವಿದ್ಯಾವಂತ ರಿಂದ ಇನ್ನೇನೂ ಸಾಧ್ಯವಿಲ್ಲ. ನಮ್ಮ ವಿದ್ಯಾಪದ್ಧತಿಯೇ ಅಂಥಾದ್ದು. ಇದಕ್ಕೆಲ್ಲ ಇರುವ ಪರಿಹಾರ ಒಂದೇ ಒಂದು'

ತಾನು? ತನ್ನ ಬದುಕಿನ ಧ್ಯೇಯ ಯಾವುದು? ಏನನ್ನು ಮಾಡುವ ಸಾಮರ್ಥ್ಯ ಇದೆ ತನ್ನಲ್ಲಿ? ಎಲ್ಲರ ಹಾಗೆಯೇ ತಾನೂ. ಎಲ್ಲರ ಹಾಗೆಯೇ...

ಇಷ್ಟು ಮಾತ್ರ ನಿಜ. ಹೆತ್ತವರಿಗೆ ತಾನೆಂದೂ ಭಾರವಾಗಬಾರದು. ತನ್ನ ಕಾಲ ಮೇಲೆಯೇ ತಾನು ನಿಂತುಕೊಳ್ಳಬೇಕು.

ಗುಲಾಮಗಿರಿಗೆ ತಲೆಬಾಗುವುದು? ಅದನ್ನೂ ತಾನು ಮಾಡಬಾರದು. ಅದು ಪಾಪ...

ಹಾಗಾದರೆ ತಾನು ಅನುಸರಿಸಬೇಕಾದ ಹಾದಿ ಯಾವುದು? ಯಾವುದು?...

[ವಿಚಾರ ಸರಣಿ ಅಲ್ಲಿಗೆ ಕಡಿದು ಹೋಯಿತು. ಮೆದುಳು ಮಾತ್ರ ಧಿಮಿಗುಡುತಿತ್ತು...]

ಕಣ್ಣು ಕೋರೈಸುವಂತಹ ಬೆಳಕು. ಎವೆ ಮುಚ್ಚಿದರೆ ಉರಿ.

ಮ್ಯಾಚ್ ಮುಗಿಯುವ ಹೊತ್ತು....

ನಾರಣಪ್ಪನನ್ನು ಪೋಲೀಸರು ಹಿಂಬಾಲಿಸುತ್ತಿದ್ದರು. ಆತ, ಅವನ ಅಣ್ಣ.... ಹಾಗೆಯೇ ಅಲ್ಲಿ ಇಲ್ಲಿ ಕೆಲವರು. ಪ್ರಜ್ಞಾಹೀನವಾಗಿ ಛಳಿಯಲ್ಲಿ ಹೆಪ್ಪುಗಟ್ಟಿದ್ದ ಭೀಮ ದೇಹವನ್ನು ಅವರ ಪುಟ್ಟ ಕೈಗಳು ತೀಡುತ್ತಿದ್ದುವು. ಆದರೆ ಶಾಖ ಉತ್ಪನ್ನವಾಗುತ್ತಿರಲಿಲ್ಲ. ವಾತಾವರಣವೇ ಹಾಗಿತ್ತು...ಪ್ರವಾಹಕ್ಕಿದಿರು ದೋಣಿ ನಡೆಸುವ ಹುಚ್ಚು...ದೋಣಿಯೇ ಮಗುಚಿದರೆ? ವೀರ ನಾವಿಕರೆಲ್ಲ ನೀರು ಪಾಲಾದರೆ?

ಜನ ಎಚ್ಚರುವ ಕನಸು ಕಾಣುತ್ತಿದ್ದ ನಾರಣಪ್ಪ. ಆದರೆ ದಿನನಿತ್ಯದ ಸಾವಿರ ಘಟನೆಗಳೂ 'ಅದು ಬರಿಯ ಕನಸು, ಕನಸು ಮಾತ್ರ' ಎಂದು ಸಾರಿ ಹೇಳುತ್ತಿದ್ದುವು.

ಉದಾಹರಣೆಗೆ ಆ ದಿನದ ಕ್ರಿಕೆಟ್ ಆಟ. ಜನ ಸಮುದಾಯವನ್ನು ಮೆಟ್ಟಿ ತುಳಿದು ಬಿಳಿಯ ಸುಲಿಗೆಗಾರರು ಅಟ್ಟಹಾಸ ಮಾಡುತ್ತಿದ್ದರೆ, ಜನರು ಮಾತ್ರ ಅದರ ಅರಿವಿಲ್ಲದವರಂತೆ ಆಟ ವಿನೋದಗಳಲ್ಲಿ ಮಗ್ನರಾಗಿದ್ದರು....

ನಾರಣಪ್ಪ ಅಂತಹ ಪಂದ್ಯಾಟದ ಪ್ರೇಕ್ಷಕರಲ್ಲಿ ಒಬ್ಬನಾಗಿರಬಹುದೆಂದು ಭಾವಿಸಿದುದೇ ತಪ್ಪು. ಆತ ಅಲ್ಲಿರುವುದು ಖಂಡಿತ ಸಾಧ್ಯವಿರಲಿಲ್ಲ....

ಒಳ್ಳೆಯವನು ನಾರಣಪ್ಪ, ಶಾಂತ ಮೂರ್ತಿ. ತನ್ನ ವಿಷಯದಲ್ಲಿ ಆತನಿಗೆ ಗೌರವವಿತ್ತು. ಯಾಕೆ? ತಾನು ಬರೆಯುವವನೆಂದು. ಎಂತಹ ಬರೆಹಗಾರನೊ! ಆದರೂ ಬರೆಹಗಾರ ಎನ್ನಿಸಿಕೊಳ್ಳುವುದರಲ್ಲಿ ಒಂದು ಆಕರ್ಷಣೆಯಿತ್ತು. ಆ ಅಂಶವನ್ನು ಅಲ್ಲಗಳೆಯುವಂತಿರಲಿಲ್ಲ. ನಾರಣಪ್ಪ ತಮಾಷೆಗಾಗಿ ಹಾಗೆ ಹೇಳಿದ ಎನ್ನುವಂತಿರಲಿಲ್ಲ. ಆತನ ನಂಬುಗೆ ಸುಳ್ಳಾಗದಂತೆ ತಾನು ನಿಜವಾಗಿಯೂ ಬರೆಯುವುದು ಸಾಧ್ಯವಾದರೆ? ಬರಿಯ ಕಥೆಯನ್ನಲ್ಲ, ಕಟ್ಟು ಕತೆಯನ್ನಲ್ಲ,—ಬದಲು, ಯಾವುದಾದರೂ ಒಳ್ಳೆಯ ಕೆಲಸಕ್ಕೆ ಉಪಯೋಗವಾಗುವಂಥದನ್ನು ತಾನು ಬರೆದರೆ?

ಬರಿಯ ಆಸೆ. ತನ್ನಿಂದ ಅದು ಸಾಧ್ಯವಾಗುವುದೋ ಇಲ್ಲವೋ....

ಯಾಕೆ ಸಾಧ್ಯವಾಗಬಾರದು? ಯಾಕಾಗಬಾರದು?

[ಮುರಲೀಧರನ ತುಟಿಗಳ ಮೇಲೆ ಮುಗುಳುನಗೆ ಮೂಡಿತು. ಶರೀರದ ಸ್ನಾಯುಗಳು ಮೆಲ್ಲಮೆಲ್ಲನೆ ಸಡಿಲವಾದುವು. ಉಸಿರಾಟ ಸರಾಗವಾಯಿತು. ತಲೆ ಭಾರವಾಗಿ ದಿಂಬನ್ನು ಒತ್ತಿತು. ಬಿಸಿಲನಿದ್ದೆ ಆತನ ಮೈ ಮೇಲೆ ಕೈ ಆಡಿಸಿತು.]

...ತಣ್ಣನೆಯ ಗಾಳಿ ಬೀಸಿದಂತಾಗಿ ಮುರಲೀಧರ ಕಣ್ಣೆವೆಗಳನ್ನು ತೆರೆದ. ಬಿಸಿಲೇ ಇರಲಿಲ್ಲ ಹೊರಗೆ. ಸಂಜೆಯಾಗಿ ಬಿಟ್ಟಿತ್ತು.

ಮುರಲೀಧರ ಗಡಬಡಿಸಿ ಎದ್ದ. ಮುಖಕ್ಕಿಷ್ಟು ನೀರು ಹನಿಸಿದ. ನಿದ್ದೆಯ ಮಬ್ಬಿನಲ್ಲಿ ಜಡವಾಗಿದ್ದ ಮೈಗೆ, ನಿಮಿಷದಲ್ಲೇ ಚೈತನ್ಯ ಮರಳಿ ಬಂತು.

ಪುಟ್ಟ ಕನ್ನಡಿಯಲ್ಲಿ ಮುಖ ನೋಡುತ್ತ, ಎರಡು ಮೂರು ಹಲ್ಲುಗಳು ಮುರಿದಿದ್ದ ಹಣಿಗೆಯಿಂದ ತಲೆ ಬಾಚಿಕೊಂಡು, ಮುರಲೀಧರ ಬೀದಿಗಿಳಿದ.

ಸಾಯಂಕಾಲದ ಹೊತ್ತು ಪಾಠ ಹೇಳುವ ಮನೆಯನ್ನು ಸಮೀಪಿಸಿದಾಗ, ಹುಡುಗರ ತಾಯಿ ಕದ ತೆರೆದು ಅಂದರು:

"ಬನ್ನಿ ಮೇಸ್ಟ್ರೆ. ಹುಡುಗರು ಈಗ್ತಾನೇ ಬಂದ್ರು. ಒಳಗೆ ತಿಂಡಿ ತಿನ್ತಾ ಇದಾರೆ. ಕೂತ್ಕೊಳ್ಳಿ."

ಆಗ ತಾನೆ ಬಂದುದು ಆಟದ ಅಂಗಣದಿಂದಲೇ ಎಂಬುದು ಸ್ಪಷ್ಟವಾಗಿತ್ತು.

ಮುರಲೀಧರ, ಎಂದಿನಂತೆ ಜಗಲಿಯ ಮೂಲೆಯನ್ನು ಸೇರಿ ಬೆಂಚಿನ ಮೇಲೆ ಕುಳಿತ.

ಎರಡು ನಿಮಿಷಗಳಲ್ಲೇ ಹುಡುಗರು ಬಂದರು. ಒಬ್ಬನ ಕೈಯಲ್ಲಿ ಉಪ್ಪಿಟ್ಟಿನ ತಟ್ಟೆ ಇತ್ತು. ಇನ್ನೊಬ್ಬನ ಕೈಯಲ್ಲಿ ಲೋಟ ನೀರು.

"ತಗೊಳ್ಳಿ ಸಾರ್."

"ನನ್ನದು ಈಗ್ತಾನೆ ಆಯ್ತಪ್ಪ."

ಹುಡುಗರ ಹಿಂದೆಯೇ ಬಂದ ತಾಯಿ, ಬಾಗಿಲಲ್ಲೇ ನಿಂತು, ಹೇಳಿದರು:

"ತಗೊಳ್ಳಿ. ಅಷ್ಟೇನೂ ಜಾಸ್ತಿಯಾಗೋದಿಲ್ಲ."

ಮುರಲೀಧರ ಮುಗುಳು ನಕ್ಕ. ಆತ ಆಗ ತಾನೆ ತಿಂದು ಬಂದುದಂತೂ ಸುಳ್ಳೇ. ಬೆಳಗಿನ ಊಟ ಎಂದೋ ಕರಗಿ, ಕರುಳುಗಳು ಕೆಲಸವಿಲ್ಲವೆಂದು ರೇಗಾಡುತ್ತಿದ್ದುವು. ಒಂದು ತಟ್ಟೆ ಉಪ್ಪಿಟ್ಟು ಖಂಡಿತ ಜಾಸ್ತಿಯಾಗುವಂತಿರಲಿಲ್ಲ.

ಮೊದಲ ಸಾರೆ ಆ ಮನೆಯಲ್ಲಿ ತಿಂಡಿಕೊಟ್ಟಾಗ ಆ ತಾಯಿ ಕೇಳಿದ್ದರು:

'ನಮ್ಮಲ್ಲಿ ನೀವು ತಿನ್ತೀರೋ ಇಲ್ಲವೋ?'

ತನ್ನ ವಿಷಯದಲ್ಲಿ ಅವರು ತಪ್ಪು ಭಾವಿಸಿದರೆಂದು ಸ್ವಲ್ಪ ನೊಂದು ಮುರಲೀಧರ ಹೇಳಿದ್ದ:

'ನನಗೆ ಅಂಥ ಭೇದ ಭಾವ ಇಲ್ಲವಮ್ಮ....'

ಮುರಲೀಧರ ಈ ಸಂಜೆ ಉಪ್ಪಿಟ್ಟು ತಿನ್ನುತ್ತಿದ್ದಂತೆ ಆಕೆ ಕೇಳಿದರು:

"ಕಾಫಿ ಇಲ್ಲ ಮೇಸ್ಟ್ರೆ. ನಿಂಬೆ ಹಣ್ಣಿದೆ. ಪಾನಕ ಮಾಡಿ ಕೊಡ್ಲಾ?"

"ಏನೂ ಬೇಡೀಮ್ಮಾ. ಈಗೇನೂ ಬೇಡಿ," ಎಂದ ಉಪಾಧ್ಯಾಯ ಮುರಲೀಧರ, ಪಾಠ ಹೇಳಿಸಿಕೊಳ್ಳಲು ಸಿದ್ಧರಾಗಿ ಬಂದ ವಿದ್ಯಾರ್ಥಿಯರನ್ನು ನೋಡುತ್ತ.

ಅಷ್ಟರಲ್ಲೆ ನೆರೆಮನೆಯ ಹುಡುಗನೂ ಅವರನ್ನು ಸೇರಿಕೊಂಡ.

ಬಿಸಿಲಿಗೆ ಆ ಎಳೆಯ ಮುಖಗಳೆಲ್ಲ ಬಾಡಿ ಕಪ್ಪಿಟ್ಟಿದ್ದುವು. ಆದರೆ ಆ ಕಣ್ಣುಗಳಲ್ಲಿ ಕೋಡಿ ಕಟ್ಟಿ, ಹರಿಯುತ್ತಿತ್ತು ಸಂತಸ.

ಹುಡುಗರು ಪರಸ್ಪರರನ್ನು ನೋಡಿದರು. ಆ ಮನೆಯ ಹುಡುಗರಲ್ಲಿ ಹಿರಿಯವನು ಕೇಳಿದ:

"ಸಾರ್, ನೀವು ಮ್ಯಾಚಿಗೆ ಬಂದಿದ್ರಾ?"

ಬಂತು ಗಂಡಾಂತರ ಎಂದು ನಸುನಕ್ಕ ಮುರಲೀಧರ.

ತನಗೆ ಬೇಕಾದ ಉತ್ತರ ದೊರೆಯಿತೆಂದು ಮನೆಯವನು ನೆರೆಯ ಹುಡುಗನನ್ನು ನೋಡಿ, ಗೆದ್ದವನ ಧ್ವನಿಯಲ್ಲಿ ಅಂದ.

"ನಾನು ಆಗ್ಲೇ ಹೇಳ್ಲಿಲ್ವೇನೋ–ಮೇಸ್ಟ್ರಿಗೆ ಕ್ರಿಕೆಟ್‌ನಲ್ಲಿ ಆಸಕ್ತಿ ಇಲ್ಲಾಂತ?"

ಮುರಲೀಧರ ಹುಡುಗರನ್ನೆಲ್ಲ ನೋಡಿ ನುಡಿದ:

"ಆಸಕ್ತಿ ಇದೆಯಪ್ಪ. ಮ್ಯಾಚಿಗೆ ಬಂದಿದ್ದೆ. ಆದರೆ ಕಡೇವರೆಗೂ ಇರೋದಕ್ಕಾಗಲಿಲ್ಲ. ಅಗತ್ಯ ಕೆಲಸ ಇತ್ತೂಂತ ಬೇಗ್ನೆ ವಾಪ್ಸು ಬಂದ್ಬಿಟ್ಟೆ."

ಆ ಮಾತು ಕೇಳಿ ಸೋತ ಹುಡುಗನಿಗೇನೂ ಅವಮಾನವೆನಿಸಲಿಲ್ಲ. ಅಂತಹ ಭಾವನೆಗಳಿಗೆಲ್ಲ ಆತನಿಗೆ ಪುರಸೊತ್ತೇ ಇರಲಿಲ್ಲ. ಆಡಬೇಕಾದ ವಿಷಯಗಳು ನೂರೊಂದು ಇದ್ದುವು.

ಆ ದಿನದ ಆಟದ ಗುಣವಿಮರ್ಶೆ.

ಸಂಸ್ಥಾನದ ತಂಡವೇ ಗೆದ್ದಿತ್ತು. ಆದರೂ ಹುಡುಗರಿಗೆ ಸಾಕಷ್ಟು ತೃಪ್ತಿಯಾಗಲಿಲ್ಲ.

"ನಾಳೇದು ಮುಖ್ಯ ಸಾರ್. ನಾಳೆ ನೋಡ್ಬೇಕು."

"ನಾಳೇನೂ ಹೋಗ್ತೀರಾ ನೀವು?" ಎಂದು ಕೇಳಿದ ಮುರಲೀಧರ.

"ಹೂಂ. ಹೋಗ್ದೇ ಇರೋಕಾಗುತ್ತಾ? ನಮ್ಮ ಸ್ಕೂಲಿಗಂತೂ ರಜಾ ಕೊಟ್ಟಿದಾರೆ. ಕೊಡದೇ ಇದ್ದರೆ ಮುಷ್ಕರ ಹೂಡ್ತಿದ್ವಿ...."

ನೆರೆಮನೆಯ ಹುಡುಗನೆಂದ:

"ಇವತ್ತು ಪಾಠ ಬೇಡಿ ಸಾರ್. ಶಾಲೇಲಿ ಕ್ಲಾಸೇ ತಗೊಂಡಿಲ್ಲ."

ಕಿರಿಯವನೆಂದ:

"ಒಂದು ಕಥೆ ಹೇಳಿ ಸಾರ್."

"ಕಥೆ?"

"ಹೂಂ. ಯಾವುದಾದರೊಂದು."

ದೊಡ್ಡ ಹುಡುಗರೂ ಆ ಹೇಳಿಕೆಯನ್ನು ಪುಷ್ಟೀಕರಿಸಿದರು.

ಮುರಲೀಧರ ಒಂದು ನಿಮಿಷ ನೆಲವನ್ನೆ ನೋಡುತ್ತಿದ್ದು, ತಲೆಯೆತ್ತಿ ಮುಗುಳುನಕ್ಕು, ಹುಡುಗರನ್ನು ದಿಟ್ಟಿಸಿ ಅಂದ:

"ಆಗಲಿ, ಕಥೆ ಹೇಳ್ತೀನಿ. ಕಥೆಯ ಹೆಸರು 'ನರವೀರ' ಅಂತ."

"ಪತ್ತೇದಾರಿನ ಸಾರ್?"

"ಕೇಳಿ, ಹೇಳ್ತೀನಿ...."

ಪತ್ತೇದಾರರು ಆ ಕಥೆಯಲ್ಲಿದ್ದರು–ಸರಕಾರದ ಪತ್ತೇದಾರರು. ನಾಯಕ ಕಳ್ಳನಲ್ಲ. ರಾಷ್ಟ್ರದ ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿದ ವೀರ ಯುವಕ. ಹೆಸರು

ಭಗತ್‌ಸಿಂಗ್. ಆತನ ಹಾಗೂ ಸಂಗಡಿಗರ ಸಾಹಸ ಕೃತ್ಯಗಳು. ಅವರು ಹೋರಾಡಿದ ಬಗೆ. ಕೊನೆಯಲ್ಲಿ ಬಂಧನ. ಕಾರಾಗಾರದಲ್ಲಿ ಆ ವೀರರು ನಡೆದುಕೊಂಡ ರೀತಿ. "ಸಂಕೋಲೆಯಿಂದ ಸಿಂಹವನ್ನ ಕಟ್ಟಿಹಾಕಿದರೆ ಹ್ಯಾಗಿರುತ್ತೆ?—ಹೇಳಿ." ಅವರ ಮೇಲೆ ಸರಕಾರದ ಆರೋಪ. ವಿಚಾರಣೆಯ ನಾಟಕ. ಶಿಕ್ಷೆ-ಗಲ್ಲಿನ ಶಿಕ್ಷೆ...

"ಉರುಳು ಕತ್ತನ್ನು ಬಿಗೀತಾ ಇದ್ದ ಹಾಗೆ ಭಗತ್‌ಸಿಂಗ್ ಘೋಷಣೆ ಮಾಡ್ದ: ಭಾರತ ಸ್ವತಂತ್ರವಾಗಿಯೇ ಆಗುತ್ತೆ. ಕ್ರಾಂತಿಗೆ ಜಯವಾಗಲಿ! ಇಂಕ್ವಿಲಾಬ್ ಜಿಂದಾ ಬಾದ್!"

ಹುಡುಗರು ಉಸಿರು ಬಿಗಿ ಹಿಡಿದು ಕತೆಗೆ ಕಿವಿಗೊಟ್ಟರು.

ಅದು ಮುಗಿದಾಗ ಹಿರಿಯವನು ಕೇಳಿದ:

"ಇದು ನಡೆದ ಕತೇನಾ ಸಾರ್?"

"ಹೂಂ. ನಡೆದ ಕಥೆ..."

ಕ್ಷಣಕಾಲದ ಮೌನದ ಬಳಿಕ ನೆರೆಯ ಹುಡುಗನೆಂದ:

"ನಾನು ಹೋಗ್ತೀನಿ. ನಾಳೆ ಮ್ಯಾಚಿಗೆ ಜತೇಲೆ ಹೋಗೋಣ."

"ಹೂಂ." ಎಂದು ಉತ್ತರವಿತ್ತ ಹುಡುಗ ಉಪಾಧ್ಯಾಯರನ್ನೂ ಕರೆದ:

"ನಾಳೆ ನೀವೂ ನಮ್ಮ ಜತೇಲೆ ಬನ್ನಿ ಸಾರ್"

ಮುರಲೀಧರ ಉಗುಳುನುಂಗಿ ಹೇಳಿದ:

"ತುಂಬಾ ಕೆಲಸವಿದೆ. ಸಾಧ್ಯವಾದರೆ ಬರ್‍ತೀನಪ್ಪಾ."

೫

ನಾರಣಪ್ಪನನ್ನು ಕಾಣಲು ತವಕಿಸುತಿದ್ದ ಮುರಲೀಧರ ಎರಡು ಮೂರು ದಿನ ಕಾಯಬೇಕಾಯಿತು. ಸ್ನೇಹಿತ ಕಾಹಿಲೆ ಮಲಗಿರಬಹುದೆಂಬ ಶಂಕೆ. ಮನೆಯ ವಿಳಾಸ ತಿಳಿಯದೆಂಬ ಅಸಮಾಧಾನ. ನಾರಣಪ್ಪನ ಸಾಲಿನಲ್ಲೆ ಕುಳಿತುಕೊಳ್ಳುತ್ತಿದ್ದ ಒಬ್ಬಿಬ್ಬರನ್ನು ಮುರಲೀಧರ ಕೇಳಿ ನೋಡಿದ. ನಿರ್ದಿಷ್ಟ ಉತ್ತರ ದೊರೆಯಲಿಲ್ಲ. 'ಎಲ್ಲೋ ಮಲ್ಲೇಶ್ವರದಲ್ಲಿ ಇರಬೇಕು.' ಅಷ್ಟೇ ಮಾಹಿತಿಯ ಆಧಾರದ ಮೇಲೆ, ಹಲವು ಸಹಸ್ರ ಮನೆಗಳಿದ್ದ ಮಲ್ಲೇಶ್ವರದ ಪ್ರದೇಶದಲ್ಲಿ ನಾರಣಪ್ಪನ ನಿವಾಸವನ್ನು ಹುಡುಕಿ ಹಿಡಿಯುವುದಾದರೂ ಹೇಗೆ? ಅಸಹಾಯ ಪರಿಸ್ಥಿತಿ. ಹೀಗಾಗಬಾರದಿತ್ತು ಎಂದು ಮುರಲೀಧರನ ಮನಸ್ಸು ಹಲುಬಿತು.

ಆತನ ಮುಖ ಅರಳಿದುದು ಮತ್ತೆ ನಾರಣಪ್ಪ ಕಾಣಿಸಿಕೊಂಡ ದಿನ.

ಪ್ರವಚನಗಳಿಗೆ ಮುನ್ನ ಬರಿಯ ಮುಗುಳುನಗೆ. ಪಾಠಗಳು ನಡೆಯುತ್ತಿದ್ದಾಗ ಒಬ್ಬರನ್ನೊಬ್ಬರು ಕದ್ದು ನೋಡಿದ ಕಣ್ಣನೋಟ. ವಿರಾಮದ ವೇಳೆಯಲ್ಲಿ ಸಂಭಾಷಣೆ.

ಮುರಲೀಧರನೇ ಆರಂಭಿಸಿದ:

"ನಿಮ್ಮನ್ನು ನೋಡಿ ಒಂದು ಯುಗವಾಯ್ತು ಅನಿಸುತ್ತೆ. ಮೈಗೆ ಹುಷಾರಿರ್ಲಿಲ್ವೆ?"

ಪ್ರಶ್ನೆಗಳನ್ನು ಕೇಳುತ್ತಿದ್ದಂತೆ, ಗೆಳೆಯನ ಮುಖಲಕ್ಷಣಗಳನ್ನು ಸೂಕ್ಷ್ಮವಾಗಿ ದಿಟ್ಟಿಸಿ ನೋಡುತ್ತ ಉತ್ತರವನ್ನೂ ಮುರಲೀಧರ ಹುಡುಕಿದ.

ಎಂದಿನಂತೆಯೇ ಇತ್ತು ನಾರಣಪ್ಪನ ಆರೋಗ್ಯ.

"ನಾನು ಚೆನ್ನಾಗಿದೀನಿ ಮುರಲೀಧರ್. ನಮ್ಮ ಅಣ್ಣನನ್ನ ಅರೆಸ್ಟ್ ಮಾಡಿದ್ರು. ಹೀಗಾಗಿ—..."

ಅದೇ ಮೆಲುದನಿ, ಮಿತವಾದ ಮಾತು. ಬಂಧನವೆಂದು ಉದ್ವೇಗವಿರಲಿಲ್ಲ. 'ಊಟ ತಡವಾಯ್ತು. ಹೀಗಾಗಿ—' ಎಂದ ಹಾಗೆ.

ಆದರೆ ಮುರಲೀಧರನ ಪಾಲಿಗೆ ಆ ಸುದ್ದಿ ಕಠೋರವೆನಿಸಿತು. ಧ್ವನಿ ಕಾತರ ಪೂರ್ಣವಾಯಿತು.

"ಹೌದೆ? ನನಗೆ ಗೊತ್ತೇ ಇರ್ಲಿಲ್ಲ. ಯಾವತ್ತು ಅರೆಸ್ಟಾಯ್ತು? ಪತ್ರಿಕೇಲಿ ಏನೂ ಬಂದೇ ಇಲ್ವಲ್ಲಾ...!"

"ಮೊನ್ನೆನೇ ಆಯ್ತು. ಪತ್ರಿಕೇಲಿ ಯಾಕೆ ಬರುತ್ತೆ ಹೇಳಿ? ನಮ್ಮಣ್ಣನೇನು ಪುಢಾರಿಯೆ?"

ನಮ್ಮಣ್ಣ ಎಂದಾಗಲೆಲ್ಲ ನಾರಾಣಪ್ಪನ ಸ್ವರ ತುಂಬಿಬರುತ್ತಿತ್ತು. ಒಡಹುಟ್ಟಿದವನ ವಿಷಯದಲ್ಲಿ ಎಷ್ಟೊಂದು ಗೌರವವಿತ್ತು ಆತನಿಗೆ...

ದಸ್ತಗಿರಿ ಎಂಬ ಪದ, ಮುರಲೀಧರನಿಗೆ ರಾಮಚಂದ್ರಯ್ಯನ ನೆನಪು ಮಾಡಿ ಕೊಟ್ಟಿತು. ಪೋಲೀಸರು. ಕರಿಯ ಮೋಟಾರು ಬಂಡಿ. ಬಂದೂಕು, ಕೈಕೋಳ. ನಾರಣಪ್ಪನ ಅಣ್ಣ ಆ ಆವರಣದಲ್ಲಿ, ನೋಡಲು ಹೇಗಿರುವನೊ ಆತ? ನಾರಣಪ್ಪನಂತೆಯೇ....

"ನೀವು ನಿಮ್ಮಣ್ಣನ ಹೆಸರು ಹೇಳೇ ಇಲ್ಲ..."

"ಮಲ್ಲೇಶಪ್ಪ ಅಂತ. ಆತನ ಹೆಸರು ಯಾರೂ ಕೇಳಿರೋದಿಲ್ಲ—ನನಗೆ ಗೊತ್ತು."

ಮನಸಿನೊಳಗೆ ರೂಪಗೊಂಡ ಪ್ರಶ್ನೆ ಸರಿಯೆ, ತಪ್ಪೆ, ಎಂಬ ಸಂದೇಹವಿದ್ದರೂ ಮಾತು ಮುರಲೀಧರನಿಂದ ಹೊರಬಿತ್ತು;

"ಯಾಕೆ ಅರೆಸ್ಟಾಯ್ತು?"

ನಾರಣಪ್ಪ ಮುಗುಳುನಕ್ಕ.

"ಚಳವಳಿ ಜನ ಅಂತ. ಬೊಂಬಾಯಿಂದ ಬಂದಿದ್ದ ಒಂದೆರಡು ಕಾಗದ ಪೋಲೀಸರ ಕೈಗೆ ಬಿತ್ತು...."

"ವಿಚಾರಣೆ ಮಾಡ್ತಾರಾ?"

"ವಿಚಾರಣೆ? ಯಾಕ್ಮಾಡ್ತಾರೆ? ಹಾಗೇನೇ ಸ್ಥಾನಬದ್ಧತೆಯಲ್ಲಿಡ್ಬಹುದೂಂತ ಕಾನೂನಿದೆ."

"ಏನಿದ್ದರೂ ಪತ್ರಿಕೇಲಿ ಬರದೇ ಇರೋದು ಆಶ್ಚರ್ಯ."

"ಇಂಥ ವಿಷಯ ಜನರಿಗೆಲ್ಲ ಗೊತ್ತಾಗೋದು ಪೋಲೀಸರಿಗೆ ಇಷ್ಟವಿಲ್ವೋ ಏನೋ? ಅಥವಾ, ಅವರು ತಾವಾಗಿಯೇ ಪತ್ರಿಕೆಯೋರಿಗೆ ಸುದ್ದಿ ಕೊಟ್ಟಿರಲಾರರು. ಇನ್ನೇನು, ನಾನೇ ಹೋಗಿ ಕೇಳ್ಲೆ, ನಮ್ಮಣ್ಣನ ವಿಷಯ ಅಚ್ಚು ಹಾಕಿಸೀಂತ!"

ಪರಿಸ್ಥಿತಿ ಗಭೀರವಾಗಿದ್ದರೂ, ನಾರಣಪ್ಪ ಅದನ್ನು ತೀರಾ ಲಘುವಾಗಿಯೆ ಪರಿಗಣಿಸಿದ್ದನೇನೊ ಎನ್ನುವಂತಿತ್ತು ಆ ಮಾತಿನ ಸರಣಿ.

"ಪೋಲೀಸರು ಮನೆಗೇ ಬಂದಿದ್ರೆ? ಏನೇನಾಯ್ತು?"

ತಿಳಿಯುವ ಆತುರ ಮುರಲೀಧರನಿಗೆ. ಆದರೆ, ನಾರಣಪ್ಪನ ತುಂಬಿಕೊಂಡಿದ್ದ ತಾಳ್ಮೆಯ ಕೊಡ ತುಳುಕುವಂತಿರಲಿಲ್ಲ.

ನಡೆಯುತ್ತಿದ್ದ ಅವರಿಬ್ಬರೂ ಇಗರ್ಜಿಯನ್ನು ಸಮೀಪಿಸಿದ್ದರು. ನಾಲ್ಕು ಹೆಜ್ಜೆಗಳಾಚೆಗಿತ್ತು, ನೀರಿಲ್ಲದ ಸಂಪಂಗಿ ಕೆರೆ. ಎಡಕ್ಕೆ ಎದುರುಗಡೆ ತಗ್ಗು ಛಾವಣಿಯ ಹೆಂಚಿನ ಕಟ್ಟಡಗಳಿದ್ದುವು. ಬೀದಿಯ ಬದಿ ಬೋರ್ಡು ತಗಲಿಸಿದ್ದರು: 'ಮ್ಯಾಜಿಸ್ಟ್ರೇಟರ ಕೋರ್ಟುಗಳು' ಎಂದು.

ಅತ್ತ ನೋಡುತ್ತ ನಾರಣಪ್ಪನೆಂದ:

"ಈ ಕಟ್ಟಡದಲ್ಲಿ ನ್ಯಾಯ ಮಾರಾಟಕ್ಕಿದೆ. ಆದರೆ ಅದನ್ನು ಕೊಳ್ಳೋ ಅವಕಾಶ ನಮ್ಮಣ್ಣನಿಗೆ ಇರ್‍ಲಿಲ್ಲ!"

ತಾನು ಕೇಳಿದ ಪ್ರಶ್ನೆಗಳಿಗೆ ನೇರವಾದ ಉತ್ತರ ಬಂದಿರಲಿಲ್ಲ. ತನ್ನಷ್ಟಕ್ಕೆ ಗಟ್ಟಿಯಾಗಿ ಮಾತನಾಡುತ್ತಿದ್ದ ನಾರಣಪ್ಪ.

ಬೀದಿಯ ಬದಿಗಿದ್ದ ಕಾಲುಹಾದಿಯ ಮೇಲೆ ಅವರು ನಿಂತರು. ಕಾರು-ಮೋಟಾರುಗಳು ಒಂದರಮೇಲೊಂದಾಗಿ ಅತ್ತಿತ್ತ ಹೋಗುತ್ತಲೇ ಇದ್ದುವು.

ನಾರಣಪ್ಪ ಮುರಲೀಧರನ ಕಡೆ ತಿರುಗಿ ಕೇಳಿದ:

"ಎಲ್ಲಿಗೆ ಹೋಗೋಣ ಇವರೆ?"

"ನನಗೆ ಗೊತ್ತಿಲ್ಲ!"

ಮತ್ತೆ ಮಾತು ಮುಂದುವರಿಸದೆ ನಾರಣಪ್ಪ ಯೋಚಿಸುತಿದ್ದುದನ್ನು ಕಂಡು ಮುರಲೀಧರ ಕೇಳಿದ:

"ಮನಸ್ನಲ್ಲೇನಿದೆಯೋ ಹೇಳಿಬಿಡಿ!"

"ಏನೋ ಇದೇಂತ ಊಹಿಸಿದಿರಲ್ಲ, ಭೇಷ್!"

ಅಷ್ಟು ಹೇಳಿ, ಸಣ್ಣನೆ ನಕ್ಕು, ನಾರಣಪ್ಪನೇ ಮತ್ತೂ ಅಂದ:

"ಪುನಃ ತರಗತಿಗೆ ಹೋಗ್ಲೇ ಬೇಕೆ?"

ಸ್ನೇಹಿತನ ಮನಸ್ಸಿನ ಇಂಗಿತವನ್ನು ಗ್ರಹಿಸಿಕೊಂಡು ಮುರಲೀಧರನೆಂದ:

"ಹೋಗ್ಲೇಬೇಕು ಅನ್ನೋ ಹಟವಿಲ್ಲ. ಹೋಗದಿದ್ದರೆ ಆಗೋ ನಷ್ಟ ಅಷ್ಟರಲ್ಲೇ ಇದೆ!"

"ನಡೀರಿ ಹಾಗಾದರೆ. ಕಬ್ಬನ್ ಪಾರ್ಕ್ ಕಡೆಗೆ. ಯಾರ ಜತೆಲಾದರೂ ನಾನಿವತ್ತು ಮಾತಾಡಲೇಬೇಕು. ಇಲ್ಲದಿದ್ದರೆ ನನಗೆ ತಲೆ ಕೆಡೋದು ಖಂಡಿತ! ನಿಮ್ಮನ್ನು ಬಿಟ್ಟು ಬೇರೆ ಯಾರ ಹತ್ತಿರ ಮಾತಾಡ್ಲಿ ಹೇಳಿ?"

ಸೋಜಿಗ ಹುಟ್ಟಿಸುವ ಹಾಗಿತ್ತು ನಾರಣಪ್ಪನ ಆ ಮಾತು. ಶಾಂತಸಾಗರವೆಂದು ಹೊರನೋಟಕ್ಕೆ ತೋರುತ್ತಿದ್ದರೂ ಘೋರ ಬಿರುಗಾಳಿ ಎದ್ದಿತ್ತು ಒಳಗೆ. ಬಿರಿಯುವ ಬೆದರಿಕೆ ಹಾಕುತ್ತಿತ್ತು, ನಾರಣಪ್ಪನ ತುಂಬಿದ ಕೊಡ.

ಆತ್ಮೀಯತೆಯ ಆ ಮಾತುಗಳಿಗಾಗಿ ಕೃತಜ್ಞತೆ ಸೂಚಿಸುತ್ತ ತುಸು ಕಂಪಿಸಿದ ಧ್ವನಿಯಲ್ಲಿ ಮುರಲೀಧರನೆಂದ:

"ಬನ್ನಿ. ಬೀದಿ ದಾಟೋಣ."

...ಬೀದಿಯನ್ನು ದಾಟಿದ ಬಳಿಕ ಮತ್ತೆ ಹಾದಿ. ಎಡಕ್ಕೆ ನೋಡಿದಾಗ ಕಾಣಲು ದೊರೆಯಿತು ಹಸುರುಗರಿಕೆಯ ಹುಲ್ಲುಗಾವಲು. ಆ ನಿಸರ್ಗ ರಮಣೀಯತೆಯನ್ನು ಅವಮಾನಿಸುವ ಹಾಗೆ ನಿಂತಿತ್ತು, ಸಾರ್ವಜನಿಕ ಪುಸ್ತಕ ಭಂಡಾರದ ಕೆಂಪು ಕಟ್ಟಡ. ಅದರಾಚೆಗೆ ಪಾರ್ಕ್ ಎಂಬ ಹೆಸರು ಹೊತ್ತಿದ್ದ ಜಾಗ. ಮರಗಳು, ಮರಗಳ ಕೆಳಗೆ ಕಲ್ಲು ಬೆಂಚುಗಳು.

ಕಾಲುಗಳು ಮುಂದುವರಿದುವು. ಮೌನದ ನಡಿಗೆಯನ್ನು ಭೇದಿಸಿದುವು ಮಾತುಗಳು, ಆಗೊಮ್ಮೆ ಈಗೊಮ್ಮೆ.

"ನಿಮ್ಮ ರಾಮಚಂದ್ರಯ್ಯನೂ ಬಂದಿದ್ದ, ಆವತ್ತು ರಾತ್ರೆ."

"ಓ! ಆತನೇ? ಆಹಾ! ಏನೆಂದ?"

"ಈ ಸಲ ನಿಮ್ಮಣ್ಣನ್ನ ಕರಕೊಂಡು ಹೋಗ್ತೀವಿ. ಇನ್ನೊಂದ್ಸಲ....ಅಂತ ರಾಗ ಎಳೆದ. ನಮ್ಮ ಅಣ್ಣನಿಗೆ ರೇಗಿತು. ಈಗ ನಿಮ್ಮ ಕೆಲಸ ಎಷ್ಟಿದೆಯೋ ಅಷ್ಟು ಮಾಡಿ—ಅಂದ. ದುರದುರನೆ ನೋಡಿದ ಅಷ್ಟೆ—ಆ ರಾಮಚಂದ್ರಯ್ಯ. ಅಲ್ಲಿಗೆ ಮಾತು ನಿಂತ್ಹೋಯ್ತು."

"ನಿಮಗೂ ಅಪಾಯ ಇದ್ದೇ ಇರುತ್ತೆ."

"ಅಪಾಯ? ಅದರ ಯೋಚನೆಯೇ ನನಗಿಲ್ಲ. ಆದರೂ ಒಂದು ಚಿಂತೆ ಮಾತ್ರ ಇದೆ. ನಮ್ಮ ತಾಯೀದು. ಈಗ್ಲೇ ಅವರು ಹ್ಯಾಗೆ ಆಗಿದಾರೇಂತ..."

"ಹೌದು, ಪಾಪ..."

"ನಮ್ಮ ಸಂಸಾರದ ಕಥೆ ನಿಮಗೆ ಗೊತ್ತಿಲ್ಲ, ಅಲ್ವೆ?"

"ನಮ್ಮ ಪರಿಚಯ ತೀರಾ ಇತ್ತೀಚಿಂದು. ಮರೀಬೇಡಿ!"

"ಹೌದಲ್ಲ! ಹಾಗಾದರೆ ಮೊದಲಿಂದಲೇ ಶುರು ಮಾಡ್ಬೇಕು ನಾನು. ಬನ್ನಿ. ಒಂದು ಗುಟುಕು ಕಾಫಿ ಹಾಕಿಕೊಳ್ಳೋಣ ಎಲ್ಲದಕ್ಕೂ ಮುಂಚೆ...."

ಮಧ್ಯಾಹ್ನದ ಹೊತ್ತು ಬರಿದಾಗಿಯೆ ಇತ್ತು ಕಬ್ಬನ್ ಪಾರ್ಕ್ ರೆಸ್ಟುರಾ. ಆಂಗ್ಲೋ ಇಂಡಿಯನ್ ಹುಡುಗಿಯೊಬ್ಬಳೊಡನೆ ಇಬ್ಬರು ಬಿಳಿಯ ಸೈನಿಕರು ಒಂದೆಡೆ ಕುಳಿತಿದ್ದರು. ಅಲ್ಲಿ ಸಿಗರೇಟುಗಳು ಹೊಗೆಯಾಡುತ್ತಿದ್ದುವು. ಇನ್ನೊಂದೆರಡು ಕಡೆಗಳಲ್ಲಿ ಇಬ್ಬರು ಮೂವರು ವಿದ್ಯಾರ್ಥಿಗಳಿದ್ದರು. ಅವರ ಹಾದಿ ನೋಡುತ್ತ ಸೈಕಲ್ಲುಗಳು ಹೊರಗಿದ್ದುವು.

ತೆರವಾಗಿದ್ದ ದುಂಡು ಮೇಜನ್ನು ಆರಿಸಿಕೊಂಡು ಗೆಳೆಯರು ಕುಳಿತರು.

ಸೈನಿಕರಿದ್ದ ಕಡೆಯಿಂದ ಖೋ ಖೋ ಎಂದು ನಗು ಕೇಳಿಸಿತು. ಕೊಬ್ಬಿದ ಮಾಂಸಖಂಡಗಳ, ಈ ಕ್ಷಣವೋ ಮತ್ತೆಯೋ ಪೋಷಾಕು ಬಿರಿಯುವಂತೆ ಬೀಗಿ ಕೊಂಡಿದ್ದ ಉಬ್ಬಿದೆದೆಗಳ, ರಂಗು ಮೆತ್ತಿದ ತುಟಿಗಳ, ಗುಂಗುರು ಕೂದಲಿನ ಆ ಹೆಣ್ಣು ಮಾದಕವಾಗಿ ತಾನೂ ನಕ್ಕಳು.

ನಾರಣಪ್ಪ ಹೇಳಿದ:

"ಲೋಕಶಾಂತಿಯ ರಕ್ಷಕರು! ನೋಡಿದಿರಾ ಮುರಲೀಧರ್?"

"ಹೊಲಸು ಮಕ್ಕಳು!"

"ದಿನದಿಂದ ದಿನಕ್ಕೆ ಈ ಊರಲ್ಲಿನ್ನು ಉಸಿರಾಡೋದೇ ಹೆಚ್ಚು ಹೆಚ್ಚು ಅಸಹ್ಯ ವಾಗುತ್ತೆ. ನೋಡ್ತಿರಿ. ನೀವು ದಂಡಿನ ಕಡೆಗೆ ಇತ್ತೀಚೆಗೆ ಹೋಗಿದೀರಾ? ಅದನ್ನ ಬೆಂಗಳೂರು ಅಂತ ಹೇಳೋ ಹಾಗೇ ಇಲ್ಲ...."

ಆ ಮಾತು ನಿಜ ಎನ್ನುವಂತೆ ಮುರಲೀಧರ ತಲೆಯಾಡಿಸಿದ. ಚಕ್ರ ನೇಮಿ ಕ್ರಮದಂತೆ ನಿಯಮ ಬದ್ಧವಾಗಿ ಚಲಿಸುತಿದ್ದ ಬದುಕು ಆತನದು. ದಂಡಿನ ಕಡೆಗೆ ಅಂತಹ ಓಡಾಟ ಸಾಧ್ಯವಿರಲಿಲ್ಲ. [ಸುತ್ತುಮುತ್ತಲಿನ ಎಷ್ಟೊಂದು ವಿಷಯಗಳು ಆತನ ಸೂಕ್ಷ್ಮ ನಿರೀಕ್ಷಣೆಯಿಂದ ತಪ್ಪಿಸಿಕೊಂಡಿದ್ದುವು!] ಆದರೂ ಯುದ್ಧ ಠಾಣ್ಯ ವಾದ ಬೆಂಗಳೂರು ಹೊಲಸಾಗಿತ್ತೆಂಬುದನ್ನು ಊಹಿಸುವುದು ಕಷ್ಟವಾಗಿರಲಿಲ್ಲ.

ರೆಸ್ಟುರಾದ ಹುಡುಗ ಹತ್ತಿರ ಬಂದಾಗ ನಾರಣಪ್ಪ ಕೇಳಿದ:

"ಏನಾದರೂ ತಿಂಡಿ ತಗೋಳೊಣ್ವೆ?"

"ಬೇಡಿ! ಏನೂ ಬೇಡಿ!"

[ಆತನ ಜೇಬಿನಲ್ಲಿದ್ದುದು ಒಂದು ಕಪ್ ಕಾಫಿಗೆ ಬೇಕಾದ ಹಣ ಮಾತ್ರ. ಕಾಫಿಯ ಪ್ರಸ್ತಾಪವನ್ನು ನಾರಣಪ್ಪನೇ ಮೊದಲು ಎತ್ತಿದ್ದನೆಂಬುದು ಒಳ ಬಂದಾಗ ಆತನಿಗಿದ್ದ ಧೈರ್ಯಕ್ಕೆ ಕಾರಣ. ಆದರೆ ಕಾಫಿಯ ಜತೆಗೆ ತಿಂಡಿಯನ್ನೂ ತರಿಸುವ ಯೋಚನೆ ಮಾತ್ರ–]

ನಿರಾಕರಣೆಯ ಹಿನ್ನಲೆಯನ್ನು ಬಲ್ಲವನಂತೆ ನಾರಣಪ್ಪ ಮುಗುಳು ನಕ್ಕು

ನುಡಿದ:

"ಹಣ ಇದೆ ನನ್ನ ಹತ್ತಿರ. ಏನಾದರೂ ತಗೊಳ್ಳೋಣ. ಪ್ಲೀಸ್..."

ಮುರಲೀಧರನ ಮುಖ ಕೆಂಪೇರಿತು. ಪ್ರತಿಭಟನೆಯಿಂದ ಪ್ರಯೋಜನವಿರಲಿಲ್ಲ. ಮೆಲ್ಲನೆ ಆತನೆಂದ:

"ಆಗಲಿ."

ಚಿಲ್ಲರೆ ತಿಂಡಿ ಮತ್ತು ಕಾಫಿ.. ಚಿಲ್ಲರೆ ಬಿಲ್ಲು...

ಒಬ್ಬ ವಿದ್ಯಾರ್ಥಿ ಹೊರಟು ಹೋಗಿದ್ದ. ಕರಿಯಂಗಿ ತೊಟ್ಟಿದ್ದ ಒಬ್ಬ ವಕೀಲರು ಕಕ್ಷಿದಾರರಂತಿದ್ದ ಇಬ್ಬರೊಡನೆ ಬಂದರು. ಸೈನಿಕರು ನಿರ್ದೇಶಗಳನ್ನು ಕೊಡುತ್ತಲೇ ಇದ್ದರು:

"ಬಾಯ್! ವೇಯ್‌ಟರ್!"

ಹುಡುಗಿ ಅತ್ತಿತ್ತ ನೋಡುತ್ತ ನಗುತ್ತಲೇ ಇದ್ದಳು.

ಮುರಲೀಧರ ಕೇಳಿದ:

"ಎದ್ದು ಬಿಡೋಣ, ಆಗದೆ?"

"ಏಳಿ. ಇಲ್ಲಿ ಉಸಿರುಕಟ್ಟುತ್ತೆ."

ನೆಳಲು ನೀಡುತಿದ್ದ ಮರಗಳು ಅವರನ್ನು ಕರೆದುವು. ಅಲ್ಲಿ ಇಲ್ಲಿ ಮಲಗಿದ್ದ ಕುಳಿತಿದ್ದ ಚಲಿಸುತಿದ್ದ ಕೆಲವರ ಹೊರತಾಗಿ ಆ ಪ್ರದೇಶ ನಿರ್ಜನವಾಗಿತ್ತು.

ಅಲೆಯುತ್ತ ಬೇಸರ ಕಳೆಯಲು ಎಷ್ಟು ಒಳ್ಳೆಯ ಜಾಗ! ಆಗಾಗ್ಗೆ ತಾನು ಅಲ್ಲಿಗೆ ಬರುತ್ತಿದ್ದರೆ ಎಷ್ಟು ಚೆನ್ನು—ಎನಿಸಿತು ಮುರಲೀಧರನಿಗೆ. ಆದರೆ, ಸಾಕಷ್ಟು ಬಿಡುವೇ ಇಲ್ಲದ ಆತ, ಅಂತಹ ಯೋಚನೆಯನ್ನು ಕೃತಿಗಿಳಿಸುವುದು ಕಷ್ಟಸಾಧ್ಯವಾಗಿತ್ತು. ಸಾರ್ವಜನಿಕ ಪುಸ್ತಕ ಭಂಡಾರದ ಸದಸ್ಯನಾದರೆ ಆ ನಿಮಿತ್ತದಿಂದಲಾದರೂ ಆಗಾಗ್ಗೆ ಅತ್ತ ಬರಬಹುದಿತ್ತು. ಆದರೆ, ಸದಸ್ಯತ್ವದ ವಂತಿಗೆಯನ್ನು ಕೊಡುವವರು ಯಾರು?

ಬಳಿಯಲ್ಲಿದ್ದ ನಾರಣಪ್ಪನತ್ತ ಗಮನ ಹರಿಯುತ್ತಲೆ, ವೈಯಕ್ತಿಕ ಯೋಚನೆಗಳ ಸ್ವಾರ್ಥಿ ತಾನು–ಎಂದು ಮುರಲೀಧರನಿಗೆ ಕೆಡುಕೆನಿಸಿತು. ಗೆಳೆಯನಿಗೆ ಒದಗಿದ್ದ ಆಪತ್ತಿನೆದುರು, ಆತ ತೋರುತಿದ್ದ ಧೈರ್ಯ ಸ್ಥೈರ್ಯಗಳೆದುರು, ತನ್ನ ಬದುಕಿನ ಹೋರಾಟ ಕಿರಿದಾಗಿ ಕಂಡಿತು.

ಮರದ ಬುಡದಲ್ಲಿ ಎಳೆ ಚಿಗುರಿನ ಮೇಲೆ ಆಸೀನನಾಗುತ್ತ ನಾರಣಪ್ಪ ಗೆಳೆಯುನನ್ನು ಕರೆದ:

"ಬನ್ನಿ, ಕೂತ್ಕೊಳ್ಳಿ."

ಮುರಲೀಧರ ಬಳಿಯಲ್ಲೆ ಕುಳಿತುಕೊಳ್ಳುತ್ತಿದ್ದಂತೆ ನಾರಣಪ್ಪ ಮುಂದುವರಿಸಿದ:

"ನನಗೆ ಎಷ್ಟೊಂದು ಆಯಾಸವಾಗಿದೆ, ಗೊತ್ತೆ? ಕಳೆದ ಎರಡು ರಾತ್ರಿಗಳಲ್ಲೂ ಸಾಕಷ್ಟು ನಿದ್ದೆಯಿಲ್ಲ. ನಿನ್ನೆಯೆಲ್ಲ ಓಡಾಟವೇ ಆಯ್ತು. ಅಮ್ಮ, ಇವತ್ತೂ

ಹೋಗೋದು ಬೇಡ–ಅಂದ್ರು. ಆದರೂ ಬುದ್ಬಿಟ್ಟೆ. ನಿಮ್ಮನ್ನು ನೋಡ್ಬೇಕು, ನಡೆದದ್ದೆಲ್ಲ ತಿಳಿಸ್ಬೇಕು–ಅನಿಸ್ತು."

ಮುರಲೀಧರನಿಗೆ ದೊರೆತಿತ್ತು, ಒಬ್ಬ ಗೆಳೆಯ ಇನ್ನೊಬ್ಬನಿಗೆ ನೀಡಬಹುದಾದ ಅತಿ ದೊಡ್ಡ ಗೌರವ.

"ನೀವು ನನಗೆ ಒಡಹುಟ್ಟಿದವರಿದ್ದ ಹಾಗೆ ನಾರಣಪ್ಪ."

ಮಿಲಿಟರಿಯವನು ಕುಳಿತಿದ್ದೊಂದು ಮೋಟಾರು ಕಾರು ದಂಡಿನ ಕಡೆಯಿಂದ ನಗರಕ್ಕೆ ವಿದ್ಯುತ್‌ವೇಗದಿಂದ ಧಾವಿಸಿತು. ಕುಳಿತಿದ್ದಲ್ಲಿಂದಲೆ ನಾರಣಪ್ಪನ ದೃಷ್ಟಿ ಆ ವಾಹನವನ್ನು ಹಿಂಬಾಲಿಸಿತು. ಬಳಿಕ ನೋಟ ಸಮೀಪಕ್ಕೆ ಹಿಂತಿರುಗಿ, ಮೂರು ಮಾರುಗಳಾಚೆ ಚಪ್ಪಡಿ ಕಲ್ಲಿನೊಂದು ತುಣುಕಿನ ಮೇಲೆ ತಲೆಯೆತ್ತಿ ಸೆಟೆದು ನಿಂತಿದ್ದೊಂದು ಕೆಂಪು ಓತಿಯನ್ನು ದಿಟ್ಟಿಸಿತು.

ಮೌನವಾಗಿ ಕುಳಿತಿದ್ದ ನಾರಣಪ್ಪನ ದೃಷ್ಟಿಯನ್ನು ಮುರಲೀಧರನೂ ಅನುಸರಿಸಿ ಆ ಓತಿಯನ್ನು ಕಂಡ.

ಒಮ್ಮಿಂದೊಮ್ಮೆಲೇ ನಾರಣಪ್ಪನ ಧ್ವನಿ ಕೇಳಿಸಿತು:

"ನಮ್ಮ ತಾಯೀನ ನಿನ್ನೆ ಸಮಾಧಾನ ಪಡಿಸೋದು ಎಷ್ಟು ಕಷ್ಟ ವಾಯ್ತೂಂತ...."

ಗೊಗ್ಗರ ಸ್ವರದಲ್ಲಿ ಆರಂಭವಾದ ಮಾತು. ಕ್ರಮೇಣ ಅದರಲ್ಲಿ ಮೊದಲಿನ ಮಾರ್ದವತೆ ತುಂಬಿತು.

ಅವರಣ್ಣನೆ ಹಿರಿಯವನಾಗಿದ್ದ ಸಂಸಾರ. ತಂದೆ ಬಾಲ್ಯದಲ್ಲಿಯೇ ತೀರಿಕೊಂಡಿದ್ದರು. ಇದ್ದು ಬದ್ದುದನ್ನೆಲ್ಲ ಮಾರಿ ಹಣ ದೊರಕಿಸಿ ಮಕ್ಕಳ ವಿದ್ಯಾಭ್ಯಾಸವನ್ನು ಸಾಧ್ಯಗೊಳಿಸಿದವರು ಅವರ ತಾಯಿ. ಆ ಇಬ್ಬರು ಸೋದರರ ನಡುವಿನಾಕೆಯೊಬ್ಬಳಿದ್ದಳು, ಒಡಹುಟ್ಟಿದವಳು. ಮದುವೆಯಾದ ಮರುವರುಷವೆ ಪತಿವಿಹೀನೆಯಾಗಿ ತವರಿಗೆ ಮರಳಿದ ಅಭಾಗಿನಿ ಆಕೆ...

ಕೆಮಿಕಲ್ ಎಂಜಿನಿಯರಿಂಗ್ ಓದಬೇಕು ಎಂದಿದ್ದ ಮಲ್ಲೇಶಪ್ಪ. ಆದರೆ ಅನುಕೂಲವಾಗಲಿಲ್ಲ. ಅದಷ್ಟು ಬೇಗನೆ ಸಂಸಾರ ಭಾರವನ್ನು ಹೊರುವ ಅಗತ್ಯವಿತ್ತು. ಬಿ.ಎಸ್‌ಸಿ. ಮುಗಿಸಿದವನೆ ಕೆಲಸಕ್ಕೋಸ್ಕರ ಅಲೆದ. ಹೊರನಾಡಿನಲ್ಲಿ ಹೆಚ್ಚು ಸಂಪಾದನೆಯ ಸಾಧ್ಯತೆಗಳಿದ್ದುವು. ಆದರೆ, ಮಗನನ್ನು ಬಿಟ್ಟಿರಲು ತಾಯಿ ಸಿದ್ಧಳಿರಲಿಲ್ಲ. ಆತ ದೂರ ಹೋಗುವುದು ಮನೆಯಲ್ಲಿ ಯಾರಿಗೂ ಇಷ್ಟವಿರಲಿಲ್ಲ.

ಕೊನೆಗೆ ಮಲ್ಲೇಶಪ್ಪನಿಗೆ ದೊರೆತುದು ಕೆಮಿಸ್ಟರ ಅಂಗಡಿಯಲ್ಲಿ ಸಹಾಯಕನ ಕೆಲಸ.

ಆತನ ಹೃದಯದ ಮೂಲೆಯಲ್ಲೆಲ್ಲೋ ನಿದ್ದೆ ಹೋಗಿದ್ದ ರಾಷ್ಟ್ರ ಪ್ರೇಮದ ಬೀಜ ನೆನೆಗೊಂಡು ಮೊಳೆತುದು ಆಗಲೇ. ಸಹೋದ್ಯೋಗಿಯೊಬ್ಬ ಅದಕ್ಕೆ ಕಾರಣನಾಗಿದ್ದ. ಆ ವ್ಯಕ್ತಿ, ಹೊರಗೆ ನಗುನಗುತ್ತಲೇ ಇದ್ದರೂ ಒಳಗಿಂದೊಳಗೇ ಅಶಾಂತಿ

ಯಿಂದ ಕುದಿಯುತ್ತಿದ್ದ ಮನುಷ್ಯ. ಬೀಸುತ್ತಿದ್ದ ಗಾಳಿಯನ್ನಿದಿರಿಸಿ ಸಾವಿರ ಹಣತೆಗಳಿಗೆ ದೀಪ ಅಂಟಿಸಿದ ಮೇಲೂ ಮೊದಲ ಪ್ರಭೆಯಿಂದಲೆ ಉರಿಯುವ ನಂದಾದೀಪವಾಗಿತ್ತು ಅವನ ಅಂತರಂಗ.

ದುಡಿಮೆಯ ಆ ಜೀವನ ಆತನ ಪಾಲಿಗೆ ಅಸಹನೀಯವಾಗುತ್ತ ಬಂದಿತ್ತು. ಗೆಳೆಯನೊಡನೆ ಆತನೆನ್ನುತಿದ್ದ:

'ಮಲ್ಲೇಶಪ್ಪ, ನನ್ಕೈಲಿ ಆಗೋದಿಲ್ರೀ ಇಲ್ಲಿರೋದು. ಎಲ್ಲಿಗಾದರೂ ಹೊರಟ್ಹೋಗ್ತೀನಿ.'

ಅಂಗಡಿಯ ಒಡೆಯರಿಂದಲೂ ಅವನನ್ನು ಉದ್ದೇಶಿಸಿ ಮಾತು ಬರುತಿತ್ತು:

'ನಿಮಗೆ ಕೆಲಸದಲ್ಲಿ ಆಸಕ್ತಿ ಇಲ್ಲ ಕಣ್ರೀ...'

ಹೆಚ್ಚು ಬೆಲೆಗೆ ಮಾರಬೇಕೆಂದು ಗೊತ್ತಾಗಿದ್ದ ಒಂದು ಔಷಧಿಯನ್ನು ಹಿಂದಿನಂತೆ ಕಡಮೆಗೇ ಆತ ಮಾರುತ್ತಿದ್ದುದನ್ನು ಒಮ್ಮೆ ಗಮನಿಸಿದ ಮಾಲಿಕರು, ತುಚ್ಛೀಕಾರವನ್ನು ಸೂಚಿಸುವ ಧ್ವನಿಯಲ್ಲಿ ಅಂದರು:

'ಕುಡಿದು ಬಂದಿದೀಯೇನಪ್ಪ? ಕೆಲಸ ಮಾಡೋದು ಇಷ್ಟವಿಲ್ದಿದ್ರೆ ಇಲ್ಲಿಂದ ತೊಲಗು!'

ಆ ಕ್ಷಣವೇ ಆತ ಅಂಗಡಿ ಬಿಟ್ಟುಹೋಗಿದ್ದ, ಬರಬೇಕಾಗಿದ್ದ ಹಣವನ್ನೂ ಪಡೆಯದೆ. ಅಂಗಡಿಯನ್ನು ಮಾತ್ರವಲ್ಲ, ಆ ಊರನ್ನೆ ಬಿಟ್ಟು ಹೋದ, ಬೊಂಬಾಯಿಗೆಂದು.

ಅಲ್ಲಿ ಉದ್ಯೋಗದ ಜತೆಯಲ್ಲೆ, ಚಳವಳಿಯ ವಿಸ್ತೃತ ಕಾರ್ಯ ಕ್ಷೇತ್ರವೂ ಆತನದಾಯಿತು.

ಆದರೆ ಮಲ್ಲೇಶಪ್ಪನೊಡನೆ ಆತನ ಸಂಪರ್ಕ ಅನಂತರವೂ ಉಳಿಯಿತು....

[ಆಸಕ್ತಿಯಿಂದ ತನ್ನ ಮಾತುಗಳಿಗೆ ಕಿವಿಗೊಡುತ್ತಿದ್ದ ಮುರಲೀಧರನನ್ನು ದಿಟ್ಟಿಸಿ ನಾರಣಪ್ಪನೆಂದ:

"ನೋಡಿ. ಪೋಲೀಸರ ಕೈಗೆ ಬಿದ್ದದ್ದು ನಮ್ಮಣ್ಣನಿಗೆ ಆತ ಬರೆದಿದ್ದ ಕಾಗದಗಳೇ."

"ಆಗ್ಲೇ ಊಹಿಸ್ಕೊಂಡೆ."]

ಅನಂತರ ಬಂತು, ಆ ಸೋದರರ ಚಟುವಟಿಕೆಯ ವಿವರ.

"ಸ್ವಾತಂತ್ರ್ಯ ಗಳಿಸೋಕೆ ಇದೇ ಸುಸಮಯ ಅಂತ ನಮ್ಮಣ್ಣನ ಸ್ನೇಹಿತರ ವಾದ. ಹಿಂದೆ ಒಮ್ಮೆ ಲೋಕಯುದ್ಧವಾಗಿತ್ತಂತಲ್ಲ, ಆಗ ಗಾಂಧೀಜಿ ಇಂಗ್ಲಿಷರ ಪಕ್ಷ ವಹಿಸಿದ್ರು. ಈ ಸಲವೂ ಹಾಗೇ ಆದೀತೂಂತ ಅವರ ಭಯ. ಅಹಿಂಸೆ ಅಹಿಂಸೆ ಅಂತ ಬಡಕೊಂಡು ಸುಮ್ಮನಿದ್ದರೆ ಏನು ಪ್ರಯೋಜನ ಹೇಳಿ? ಸುಭಾಷಬೋಸರು ಸೆರೆಮನೆಯಿಂದ ತಪ್ಪಿಸಿಕೊಂಡೇ ಹೋದರು. ಅದೀಗ ಧೀರತನ. ಜಯಪ್ರಕಾಶರೂ ಗಾಂಧೀಜಿಯ ಧೋರಣೇನ ಒಪ್ಪೋದಿಲ್ಲ. ನೆಹರೂಗೆ ಕೂಡ ಅದು ಇಷ್ಟವಿಲ್ಲ..."

ಆ ಸೂಕ್ಷ್ಮವನ್ನು ಅರ್ಥಮಾಡಿಕೊಳ್ಳುವುದು ಮುರಲೀಧರನಿಗೆ ಹೆಚ್ಚು ಕಷ್ಟವೆನಿಸಲಿಲ್ಲ. ಆತ ಮೆಲ್ಲನೆ ತಲೆದೂಗಿ 'ಹೂಂ' ಎಂದ.

ಏಕಪ್ರಕಾರವಾಗಿ ನಾರಣಪ್ಪನ ಮಾತು ಮುಂದುವರಿಯಿತು:

"ಅದಕ್ಕೇ ನಮ್ಮಣ್ಣನಂಥವರನ್ನು ಕಂಡರೆ ಈ ಪರದೇಶೀ ಸರಕಾರಕ್ಕೆ ಇಷ್ಟೊಂದು ಭಯ...."

ಒಮ್ಮೆಲೆ ಸ್ವರ ಬದಲಾಯಿತು:

"ಆದರೆ ನಮ್ಮ ತಾಯಿಗೆ ಇದೊಂದೂ ಅರ್ಥವಾಗೋದಿಲ್ಲ."

ಅವರ ತಾಯಿ. ರಾಷ್ಟ್ರದ ಕಥೆಯಿಂದ ಮನೆಗೆ ಮತ್ತೆ...

...ಬಹಳ ಹೊತ್ತು ಹಾಗೆ ಅವರು ಕುಳಿತಿದ್ದರು.

ಕೊನೆಯಲ್ಲಿ ನಾರಣಪ್ಪ ಕೇಳಿದ:

"ಈ ವಿದ್ಯಾಭ್ಯಾಸದಿಂದ ಏನು ಪ್ರಯೋಜನ ಹೇಳಿ?"

ಒಳ್ಳೆಯ ಪ್ರಶ್ನೆ!—ಎಂದುಕೊಂಡ ಮುರಲೀಧರ.

"ಏನು ಪ್ರಯೋಜನ ಅಂತ ನಿಮ್ಮನ್ನೇ ನಾನು ಕೇಳಬೇಕೂಂತಿದ್ದೆ."

"ನಾನೇನೋ ಓದ್ತೀನಿ. ಆದರೆ ಗುಲಾಮ ಚಾಕರಿ ಮಾಡೋದು ನನ್ನಿಂದ ಖಂಡಿತ ಸಾಧ್ಯವಿಲ್ಲ."

ಬಹಳ ದಿನಗಳಿಂದ ಮುರಲೀಧರನ ಮನಸ್ಸಿನಲ್ಲೂ ಮೂಡಿ ಬಲಿತಿದ್ದ ವಿಚಾರ ಅದು.

"ನನ್ನಿಂದಲೂ ಅಷ್ಟೇ ನಾರಣಪ್ಪ. ವಿದ್ಯೆ, ವಿದ್ಯೆ, ಅಂತ ಹಂಬಲಿಸುತ್ತ ನಮ್ಮೂರಿನಿಂದ ಬಂದೆ. ಬಂದ ದಿವಸದಿಂದ ಈವರೆಗಿನ ಅನುಭವ ಬಹಳ ದೊಡ್ಡ ಕಥೆ. ಇವತ್ತು ಬೇಡಿ. ಇನ್ನೊಂದು ದಿವಸ ಯಾವತ್ತಾದರೂ ಹೇಳುವೆನಂತೆ... ಈಗೀಗ ನನ್ನ ತಿಳಿವಳಿಕೆ ಹೆಚ್ತಿದೆ. ವಿದ್ಯೆ ತರಗತಿಯ ನಾಲ್ಕು ಗೋಡೆಗಳ ಹೊರಗೂ ಬೆಟ್ಟದಷ್ಟಿದೆ ಅನ್ನೋದು ಸ್ಪಷ್ಟವಾಗ್ತಿದೆ. ಮುಂದೆ ನಾನು ಏನಾಗ್ತೀನೋ ಗೊತ್ತಿಲ್ಲ. ಗುಲಾಮ ಚಾಕರಿ ಮಾತ್ರ ಖಂಡಿತ ನಾನು ಮಾಡಲಾರೆ ಅನ್ನಿಸುತ್ತೆ. ಏನಿದ್ದರೂ ನನ್ನ ಕಾಲಮೇಲೆಯೇ ನಾನು ನಿಲ್ಲಬೇಕು..."

ತನ್ನದೇ ಪ್ರತಿಧ್ವನಿಯನ್ನು ಕೇಳುತ್ತ ಕೇಳುತ್ತ ನಾರಣಪ್ಪನ ಕಣ್ಣುಗಳು ಪ್ರಕಾಶಮಾನವಾದುವು. ಆತನೆಂದ:

"ನಿಮ್ಮಂಥ ಪ್ರತಿಭಾಶಾಲಿಗೇನ್ರಿ? ನಿಮ್ಮ ಬದುಕನ್ನ ಹ್ಯಾಗೆ ಬೇಕೋ ಹಾಗೆ ರೂಪಿಸ್ಕೋತೀರಾ..."

"ಪ್ರತಿಭಾಶಾಲಿ? ನಾನು? ಒಳ್ಳೇದು ಹೇಳಿದಿರಿ!"

"ಯಾಕೆ, ಅಷ್ಟನ್ನು ತಿಳಕೊಳ್ಳೋ ಸಾಮರ್ಥ್ಯವೂ ನನಗಿಲ್ಲ, ಅಂತಲ?"

"ಸರಿಹೋಯ್ತು!"

"ಹೋಗಲಿ ಬಿಡಿ. ಈಗ ಯಾಕೆ ಆ ಮಾತು?"

ಬಿಸಿಲು ಇಳಿಮುಖವಾಗುತ್ತಿದ್ದಂತೆ ಗೆಳೆಯರು ಅಲ್ಲಿಂದೆದ್ದರು.

ಜತೆಯಾಗಿ ಹಾದಿ ನಡೆಯುತ್ತ, ಮುರಲೀಧರನನ್ನು ಕುರಿತು ನಾರಣಪ್ಪನೆಂದ:

"ನೀವೊಂದು ಸಾರೆ ನಮ್ಮನೆಗೆ ಬರಬೇಕು."

"ಬರ್ತೀನಿ."

"ನಮ್ಮಮ್ಮ ನಿಮ್ಮನ್ನು ಕಂಡರೆ ಇಷ್ಟಪಡ್ತಾರೆ. ನನಗೆ ಗೊತ್ತು."

ನಸುಗೆಂಪಿನ ಛಾಯೆ ಮುಖವನ್ನು ಆವರಿಸುವಂತಾಯಿತು ಮುರಲೀಧರನಿಗೆ. ನಾರಣಪ್ಪನ ತಾಯಿ ನೋಡಲು ಹೇಗಿರಬಹುದೆಂಬುದನ್ನು ಬಗೆಗಣ್ಣೆದುರು ಚಿತ್ರಿಸಿಕೊಳ್ಳಲು ಆತ ಯತ್ನಿಸಿದ.

ಹೋಗುತ್ತಿದ್ದ ಬರುತ್ತಿದ್ದ ಜನರನ್ನೆಲ್ಲ ನಾರಣಪ್ಪ ದಿಟ್ಟಿಸುತ್ತಿದ್ದ. ಆತನ ಮನಸ್ಸಿನಲ್ಲಿ ಏನಿರಬಹುದೆಂದು ಊಹಿಸುತ್ತ ಮುರಲೀಧರನೆಂದ:

"ಈಗ ರಾಮಚಂದ್ರಯ್ಯ ಬಂದು ನಮ್ಮಿಬ್ಬರನ್ನೂ ನೋಡಿದರೆ ಚೆನ್ನಾಗಿರುತ್ತೆ, ಅಲ್ವೆ?"

"ಓಹೋ! ಆ ಮೇಲೆ ನೀವೂ ಗುಮಾನಿ ಮನುಷ್ಯನಾಗ್ತೀರಿ."

"ಹಾಗೆ ಆಗೋದು ಹೆಮ್ಮೆಯ ವಿಷಯ!"

"ನೋಡೋದಕ್ಕೆ ನಮ್ಮಣ್ಣ ಸಾತ್ವಿಕ ಮನುಷ್ಯ. ಅಲ್ಲದೆ, ಈ ಪೋಲೀಸರು, ಜೈಲು, ಇದೆಲ್ಲ ಆತನಿಗೆ ಹೊಸತು ನೋಡಿ. ಏನಾಗುತ್ತೊ ಅಂತ ಅಳುಕಿದ್ದೆ. ಆದರೆ ಅಣ್ಣ ಎಷ್ಟೊಂದು ಧೈರ್ಯವಾಗಿದ್ದ! ಅಮ್ಮನೂ ಅಷ್ಟೆ. ನನ್ನ ಮಗ ಏನ್ರೀ ಮಾಡಿದಾನೆ?—ಅಂತ ಕೇಳಿದಳೇ ಹೊರತು, ಕ್ಷಮೆ ಯಾಚಿಸು ಅಂತ ಅಣ್ಣನಿಗೆ ಹೇಳಲಿಲ್ಲ. ಪ್ರತಿಯೊಂದನ್ನೂ ನಾನು ವಿವರಿಸಿ ಹೇಳಿದಾಗ ಸುಮ್ಮನಾದ್ಲು. ಸ್ವಲ್ಪ ಹೊತ್ತು ಅತ್ತಳೂಂತಿಟ್ಕೊಳ್ಳಿ. ಹಾಗೆ ನೋಡಿದರೆ, ಯಾವ ತಾಯಿ ತಾನೆ ಅಳೋದಿಲ್ಲ? ಮಕ್ಕಳಿಗೋಸ್ಕರ ಕಣ್ಣೀರಿನ ಅಕ್ಷಯ ಪಾತ್ರೆಯೇ ಅವರಲ್ಲಿರುತ್ತೆ...!"

"ನಮ್ಮಮ್ಮನಿಗೆ ಮಾತ್ರ ಇಂಥದು ಏನೇನೂ ಅರ್ಥವಾಗದು. ಈ ವಿಷಯದಲ್ಲಿ ನೀವೇ ಭಾಗ್ಯಶಾಲಿ..."

....ವೃತ್ತಿ ಶಿಕ್ಷಣ ಶಾಲೆಯ ವೃತ್ತ ಕಳೆದು, ಮಹಾರಾಣಿ ಕಾಲೇಜು ಬಂತು. ಎಡಬದಿಯಲ್ಲಿ ಸೆರೆಮನೆಯ ಎತ್ತರದ ಪ್ರಾಕಾರಗಳು ಕಾಣಿಸಿದುವು.

ಆ ಗೋಡೆಗಳೊಳಗಿನ ಕರಿಯ ಜಗತ್ತಿನಲ್ಲಿ ಎಲ್ಲೋ ಒಂದೆಡೆ ಇದ್ದ ಮಲ್ಲೇಶ.

"ಆ ಮೇಲೆ ನಿಮ್ಮಣ್ಣನನ್ನ ನೋಡಿದ್ರಾ?"

"ಹಿಡಕೊಂಡು ಹೋದ ರಾತ್ರೆ ಲಾಕಪ್ನಲ್ಲಿ ಇಟ್ಟಿದ್ರು. ಬಟ್ಟೆಬರೆ ಅಲ್ಲಿಗೇ ತಗೊಂಡು ಹೋಗಿ ಕೊಟ್ಟೆ. ತಾಯಿೂನ ಕರಕೊಂಡು ನಾಳೆ ಭೇಟಿಗೆ ಇಲ್ಲಿಗೆ ಬರೋಣಾಂತಿದೀನಿ."

"ಬಿಡುಗಡೆ ಯಾವತ್ತು ಏನೂಂತ ಗೊತ್ತಾಗಲಾರದು, ಅಲ್ವೆ?"

"ಬಿಡುಗಡೆ? ಹ್ಯಾಗೆ ಹೇಳೋಣ ಆ ವಿಷಯ? ಯಾರಿಗೆ ಗೊತ್ತು? ಬೇಗನೆ ಬಿಟ್ಟುಬಿಡ್ತಾರೇಂತ ಅಮ್ಮ ತಿಳಿಕೊಂಡಿದಾಳೆ. ನನಗೆ ಹಾಗೆ ಅನಿಸೋಲ್ಲ."

ಸತ್ಯವಾಗಿದ್ದ ಮಾತು. ಆದರೂ ಸಮಾಧಾನಗೊಳಿಸುವಂಥದೇನನ್ನಾದರೂ ಹೇಳಬೇಕೆನಿಸಿತು ಮುರಲೀಧರನಿಗೆ. ಜತೆಗೆ ಸಿದ್ಧವಾಗಿಯೆ ನಿಂತಿತ್ತು ಪ್ರಶ್ನೆ ಕೂಡ. 'ಏನನ್ನು? ಹೇಳುವುದೇನನ್ನು?'

ಗೋಡೆಯ ಆ ಬದಿ ಕೆಲವು ಮಾರುಗಳಾಚೆ ಇದ್ದ ಅಣ್ಣನ ನೆನಪು ಬಾಧಿಸುತಿದ್ದರೂ ತಣ್ಣನೆ ಬೀಸಿದೊಂದು ಗಾಳಿಗೆ ನಾರಣಪ್ಪ ಎದೆಯೊಡ್ಡಿದ.

"ಇಷ್ಟೆಲ್ಲ ಈ ಹೊತ್ತು ನಿಮ್ಮ ಜತೆ ಮಾತನಾಡಿದೆ ಅಂತ ನನ್ನ ಹೃದಯ ಹಗುರವಾಗಿದೆ. ಮನಸ್ಸಿಗೆ ಸಮಾಧಾನವಾಗಿದೆ. ಕ್ಲಾಸಿಗೆ ಹೋಗದೆ ಜತೆಯಲ್ಲಿ ಬಂದಿರಲ್ಲ–ಅದಕ್ಕಾಗಿ ಕೃತಜ್ಞ."

"ಬೇಡಿ. ಹಾಗೆ ಹೇಳಬಾರದು ನೀವು...."

ಮುರಲೀಧರನ ಮನಸ್ಸು ಅಸ್ಪಷ್ಟವಾಗಿ ತನ್ನೊಳಗೇ ತೊದಲಿತು: 'ನನ್ನ ಬದುಕು ವಿಶಾಲವಾಗೋ ಹಾಗೆ ಇವತ್ತು ಮಾಡಿದೀಯ. ಅದಕ್ಕಾಗಿ ನಿನಗೆ ಧನ್ಯವಾದ ಸಲ್ಲಿಸಬೇಕಾದವನು ನಾನು. ಇದು, ನನ್ನ ಮೇಲೆಯೆ ಉಳಿದಿರುವ ದೊಡ್ಡ ಋಣ...'

ಉಚ್ಚಾರ ದೊರೆಯದೆ ಕರಗಿ ಮಾಯವಾದ ಆ ಪದಗಳು ನಾರಣಪ್ಪನ ಕಿವಿಗೆ ಬೀಳಲಿಲ್ಲ.

ಬೀಳ್ಕೊಡುವ ಕಡೆ ಮುರಲೀಧರನೆಂದ:

"ನಾಳೆ ನೀವು ಬರೋದಿಲ್ಲ ಹಾಗಾದರೆ."

"ಇಲ್ಲ. ಪುನಃ ನಾಡದು ಭೇಟಿ."

"ನಮಸ್ಕಾರ. ನಡಕೊಂಡೇ ಹೋಗ್ತೀರಾ?"

"ಹೂಂ. ನಮಸ್ಕಾರ."

ಬೇರೆ ಹಾದಿ ಹಿಡಿದು ತುಸು ದೂರ ನಡೆದ ಬಳಿಕ ಒಮ್ಮೆ ಮುರಲೀಧರ ತಿರುಗಿ ನೋಡಿದ. ಬಿಳಿಯ ಪಾಯಜಾಮ ಜುಬ್ಬ ಧರಿಸಿದ್ದ ವ್ಯಕ್ತಿ ಕರಗಿ ಕಿರಿದಾಗಿ ತೋರುತ್ತಿತ್ತು. ಮತ್ತೊಮ್ಮೆ ದಿಟ್ಟಿಸಿದಾಗ ಆತನೂ ಒಮ್ಮೆ ತಿರುಗಿ ನೋಡಿದಂತೆ ಅನಿಸಿತು.

ಮುರಲೀಧರ ಒಬ್ಬನೇ ಉಳಿದಾಗ, ತಾವು ಬಳಲಿರುವೆವೆಂದು ಪಾದಗಳು ದೂರುಕೊಟ್ಟುವು. ನಿಧಾನವಾಯಿತು ನಡಿಗೆ. ಆ ದಿನದ ಘಟನೆಗಳನ್ನೆಲ್ಲ ಮನಸ್ಸು ಮೆಲುಕು ಹಾಕಿತು. ಬೇಗನೆ ಕಳೆದಿದ್ದರೂ ಬಲು ದೀರ್ಘವಾಗಿ ಈಗ ತೋರಿದ ಹಗಲು. ಒಂದೇ ಹೊತ್ತಿನಲ್ಲಿ ಎಷ್ಟೊಂದು ವಿಷಯಗಳನ್ನು ತಿಳಿದಿದ್ದ ಆತ! ಎಷ್ಟೊಂದು ವಿಸ್ತಾರ ಜಾಗದಲ್ಲಿ ಸಂಚಾರ ಮಾಡಿದ್ದ!.

'ನಮ್ಮ ಅಣ್ಣನನ್ನ ಅರೆಸ್ಟ್ ಮಾಡಿದ್ರು. ಹೀಗಾಗಿ—'

ತಾನು ಕೊಟ್ಟಿದ್ದ ಉತ್ತರ:

'ಯಾವತ್ತು ಅರೆಸ್ಟಾಯ್ತು? ಪತ್ರಿಕೇಲಿ ಏನೂ ಬಂದೇ ಇಲ್ವಲ್ಲಾ....'

ಪತ್ರಿಕೆಯವರು ಏನನ್ನೂ ಪ್ರಕಟಿಸಿರಲಿಲ್ಲ. ಆದರೂ ಗಮನಾರ್ಹವಾದೊಂದು ಘಟನೆ ನಗರದಲ್ಲಿ ನಡೆದು ಹೋಗಿದ್ದುದು ನಿಜವಾಗಿತ್ತು.

ಈ ವಿಷಯ ಪತ್ರಿಕೆಯವರೊಡನೆ ತಾನು ಪ್ರಸ್ತಾಪಿಸಬೇಕು ಎಂದು ತೋರಿತು ಮುರಲೀಧರನಿಗೆ.

ನಿಯೋ ಮೈಸೂರು ಕೆಫೆಯತ್ತ ಸಾಗಿ ಆತ ಕೇಳಿದ:

"ಒಮ್ಮೆ ಫೋನ್ ಮಾಡ್ಲೆ ಸಾರ್?"

ಗಲ್ಲದ ಬಳಿ ಕುಳಿತಿದ್ದ ಮ್ಯಾನೇಜರು, ಎದುರಿಗಿದ್ದವನ ಬಡ ಸ್ವರೂಪ ವನ್ನೊಮ್ಮೆ ದಿಟ್ಟಿಸಿ ಕೇಳಿದರು:

"ಎಲ್ಲಿಗೆ?"

"ರಾಷ್ಟ್ರವಾಣಿ ಕಾರ್ಯಾಲಯಕ್ಕೆ."

ಆ ಉತ್ತರ ಕೇಳಿದ ಬಳಿಕ ಆಕ್ಷೇಪವೆತ್ತಲಿಲ್ಲ ಮ್ಯಾನೇಜರು.

"ಮಾಡಿ."

ಟ್ರಿಣ್ ಟ್ರಿಣ್ ನಂಬರುಗಳು. ಹಲೋ....ಯಾರು ಮಾತಾಡ್ತಿರೋದು?.... ಸಂಪಾದಕರು ಬೇಕಾಗಿತ್ತು....ಸಂಪಾದಕರಿಲ್ಲ; ಏನು ಸಮಾಚಾರ ಹೇಳಿ?...

"ಮೊನ್ನೆ ರಾತ್ರಿ ಮಲ್ಲೇಶಪ್ಪನವರ ಅರೆಸ್ಟಾಯ್ತು ಸಾರ್. ಆ ಸುದ್ದಿ ನಿಮ್ಮ ಪತ್ರಿಕೇಲಿ—"

"ಮಲೇಶಪ್ಪನೋರು? ಯಾರಪ್ಪ ಆತ—?"

"ವಿಚಾರಣೆ ಇಲ್ದೆ ಸ್ಥಾನ ಬದ್ಧತೇಲಿಟ್ಟದಾರೆ."

"ಹಾಗೇನು? ನೀವು ಯಾರು? ಎಲ್ಲಿಂದ ಮಾತಾಡ್ತಿದೀರ? ಇಲ್ಲಿಗೆ ಬಂದು ಸುದ್ದಿ ಬರ್ಕೊಡಿ..."

"ಹೆಚ್ಚಿನ ವಿವರ ಗೊತ್ತಿಲ್ಲ. ದಯವಿಟ್ಟು ನೀವು ವಿಚಾರಿಸಿ ತಿಳ್ಕೋಬಾರದೆ?"

"ಸರಿ, ಸರಿ!"

"ಅಷ್ಟೇ ಥ್ಯಾಂಕ್ಸ್."

ಮುರಲೀಧರ ರಿಸೀವರ್ ಕೆಳಗಿಡುವುದಕ್ಕೆ ಮುಂಚೆಯೆ ಆಚೆಯ ಕಡೆಯಿಂದ ಕೇಳಿ ಬಂತು: ಟಕ್ ಸದ್ದು.

ಸಂವಾದದ ಹೆಚ್ಚಿನಂಶವನ್ನು ಕೇಳಿದ್ದ ಕೆಫೆಯ ಮ್ಯಾನೇಜರು ಕುತೂಹಲದಿಂದ ಮುರಲೀಧರನನ್ನು ನೋಡಿದರು. ಆತನಿಗೂ ಕೃತಜ್ಞತೆಯನ್ನರ್ಪಿಸಿ ಮುರಲೀಧರ ಹೊರಕ್ಕೆಳಿದ. ಎದೆ ಡವಡವನೆ ಹೊಡೆದುಕೊಂಡಿತು-ಏನೋ ಮಹಾ ಕೆಲಸ ಮಾಡಿ ದವರಂತೆ.

ತನ್ನ ಈ ಪ್ರಯತ್ನದ ಫಲವಾಗಿ ಸುದ್ದಿ ಪ್ರಕಟವಾದರೆ ಚೆನ್ನಾಗಿರುತ್ತದೆನ್ನಿಸಿತು. ಆಗ ನಾರಾಣಪ್ಪನಿಗೆ ಆ ವಿಷಯ ತಾನು ಹೇಳಬಹುದು....

ಸಂಜೆಯಾಗಿತ್ತು....

ಕೊಠಡಿ ತಲಪಿ, ತುಸು ವಿರಮಿಸಿದ ಬಳಿಕ, ಪಾಠ ಹೇಳುವ ಮನೆಯ ಕಡೆಗೆ ಮುರಲೀಧರ ಸಾಗಿದ.

ಮರಳಿ, ಊಟ ಮುಗಿಸಿ, ಪುಸ್ತಕಗಳತ್ತ ದೃಷ್ಟಿ ಬೀರಲು ಮುರಲೀಧರ ಯತ್ನಿಸಿದ. ಆಯಾಸವೆನಿಸಿತು.

ತೆರೆದ ಪುಸ್ತಕದೆದುರು ಹಾಗೆಯೇ ಕಣ್ಣು ಮುಚ್ಚಿ ಗೋಡೆಗೊರಗಿದ. ಆ ದಿನ ನಡೆದುದರ ಚಿತ್ರಮಾಲೆ ಮತ್ತೆ ಕಣ್ಣೆದುರು ಸುಳಿಯಲಾರಂಭಿಸಿತು.

ಪತ್ರಿಕೆಯ ಕಾರ್ಯಾಲಯದೊಡನೆ ತಾನು ನಡೆಸಿದ್ದ ಫೋನ್ ಸಂಭಾಷಣೆ....

ಮಾರನೆಯ ಬೆಳಗಿನ ಸಂಚಿಕೆಯಲ್ಲಿ ಆ ವಾರ್ತೆ ಪ್ರಕಟವಾಗುವುದು ಅಸಂಭವವಾಗಿರಲಿಲ್ಲ.

ಮಲ್ಲೇಶಪ್ಪನವರ ದಸ್ತಗಿರಿ....ದೊಡ್ಡ ಅಕ್ಷರಗಳಲ್ಲಿ ಪುಟದಗಲಕ್ಕೂ ಆ ಸುದ್ದಿ. ವಿವರಗಳು ಕೆಳಗೆ. ನಾರಣಪ್ಪನ ಹೆಸರು ಕೂಡ...

ಪತ್ರಿಕೆ ಮಾರುವ ಹುಡುಗರು ಕೂಗಿಕೊಳ್ಳುತ್ತ ಓಡಾಡಬಹುದು ಬೆಳಗ್ಗೆ:

"ಮಲ್ಲೇಶಪ್ಪನವರ ದಸ್ತಗಿರಿ! ರಾಷ್ಟ್ರವಾಣಿ-ಒಂದಾಣೆ!"

...ಚಿತ್ರಮಾಲೆ ಮುಗಿದರೂ ಕಣ್ಣುಗಳು ಮುಚ್ಚಿಯೇ ಇದ್ದುವು.

....ಬೂಟುಗಾಲುಗಳು ಸದ್ದು ಮಾಡಿದುವು. ಕೊನೆಯ ಕೊಠಡಿಯವನ ಸ್ವರ ಕೇಳಿಸಿತು:

"ರೀ ಮುರಲೀಧರ್! ದೀಪ ಉರಿಸ್ಕೊಂಡೇ ನಿದ್ದೆ ಹೋಗಿದೀರಲ್ರೀ...!"

* * * *

ಬೆಳಗ್ಗೆ ಎದ್ದವನೇ ಮುರಲೀಧರ ಮುಖ ತೊಳೆದುಕೊಂಡು ಬೀದಿಯ ಬಳಿ ಹೋಗಿ ನಿಂತ. ಪತ್ರಿಕೆ ಮಾರುವ ಹುಡುಗರು ನಿಂತುಕೊಳ್ಳುತ್ತಿದ್ದ ಜಾಗ ಒಂದಿತ್ತು ಅಲ್ಲಿ.

'ರಾಷ್ಟ್ರವಾಣಿ' ಬಂತು, ಎಂದಿನಂತೆ. ಕೊಳ್ಳುವ ಗೊಡವೆಗೆ ಹೋಗದೆ ಮುರಲೀಧರ, ಒಬ್ಬರು ಕೊಂಡು ಓದುತ್ತಿದ್ದ ಪತ್ರಿಕೆಯತ್ತ ತಾನೂ ಇಣಿಕಿ ನೋಡಿದ. ಎಲ್ಲಿಯೂ ಏನೂ ಕಾಣಿಸಲಿಲ್ಲ.

ತನಗೆ ಅಂಟಿಕೊಂಡ ಎಳೆಯನನ್ನು ನೋಡಿ ವಯಸ್ಸಾದ ಆ ಮನುಷ್ಯ ಅಂದರು.

"ಸ್ಕೋರ್ ನೋಡ್ತಿದೀಯೇನಪ್ಪಾ?"

"ಇಲ್ಲ ಸಾರ್. ಒಂದ್ನಿಮಿಷ ಪತ್ರಿಕೆ ಕೊಡ್ತೀರಾ?"

ಹುಬ್ಬು ಗಂಟಿಕ್ಕಿ ಅವರು ಪತ್ರಿಕೆ ಕೊಟ್ಟರು.

ಕಾಣಿಸಲೇ ಇಲ್ಲ ಆ ವಾರ್ತೆ....

...ಕಡೆಯ ಪುಟದಲ್ಲಿ ಒಂದು ಮೂಲೆಯಲ್ಲಿತ್ತು: 'ಪೋಲೀಸ್ ಸುದ್ದಿಗಳು' ಎಂಬ ತಲೆಕಟ್ಟು.

–ಸುಪ್ರಸಿದ್ಧ ಕೇಡಿ ಮುನಿಸ್ವಾಮಿ ಉರುಫ್ ವೆಂಕಟರೆಡ್ಡಿಯನ್ನು ಹಿಡಿದಿದ್ದರು. ಅದರ ಕೆಳಗಿತ್ತು.

ಯುದ್ಧ ವಿರೋಧಿ ಗುಪ್ತ ಚಳವಳಿಯಲ್ಲಿ ಭಾಗಿಯಾಗಿರುವರೆಂಬ ಆರೋಪದ ಮೇಲೆ ಗಿರಿಧರಲಾಲ್ ಅಂಡ್ ಸನ್ಸ್ ಕೆಮಿಸ್ಟರ ಅಂಗಡಿಯ ಸಹಾಯಕ ಮಲ್ಲೇಶಪ್ಪ ಎಂಬಾತನನ್ನು ನಗರದ ಸ್ಪೆಶಲ್ ಬ್ರಾಂಚಿನವರು ಬಂಧಿಸಿ ಸ್ಥಾನಬದ್ಧತೆಯಲ್ಲಿರಿಸಿದ್ದಾರೆ.

ಒಂದೇ ವಾಕ್ಯ. ಶಿರೋನಾಮೆ ಇರಲಿಲ್ಲ.

ಪತ್ರಿಕೆಯನ್ನು ಅದರ ಒಡೆಯರಿಗೆ ಹಿಂತಿರುಗಿಸಿ ಉಗುಳು ನುಂಗುತ್ತ ಮುರಲೀಧರನೆಂದ:

"ಉಪಕಾರವಾಯ್ತು ಸಾರ್."

೬

ಮುರಲೀಧರ ಬರೆದ ಕಾಗದಗಳಿಗೆ ಉತ್ತರ ಬಂದೇ ಇರಲಿಲ್ಲ. ದಿನವೂ ಅದರ ಹಾದಿ ನೋಡಿ ಆತ ಬೇಸರಗೊಂಡ. ಆ ಬೇಸರಕ್ಕೆ, ವ್ಯಾಕುಲಕ್ಕೆ, ಕಾರಣವಿತ್ತು. ಆತನಿಗೆ ಹಣ ಬೇಕಾಗಿತ್ತು ಪರೀಕ್ಷೆಯ ಫೀಸು ಕಟ್ಟಲು. ಅದೇನು ಹತ್ತು ರೂಪಾಯಿಯೇ? ಇಪ್ಪತ್ತೆ? ಅಷ್ಟೊಂದು ಹಣವನ್ನು ಎಲ್ಲಿಂದ ತರಬೇಕು ಆತ? ಮನೆಯಿಂದ ಆ ಸಹಾಯ ಬಂದೇ ಬರುವುದೆಂಬ ನಂಬಿಕೆ ಇತ್ತು ಮುರಲೀಧರನಿಗೆ. ಈ ನಡುವೆ ಪ್ರತಿ ತಿಂಗಳೂ ಊರಿನಿಂದ ಹಣ ಬರುತ್ತಿರಲಿಲ್ಲ. ಅಂತೂ ಇಂತೂ ಕಾಲ ಯಾಪನೆಯೇನೊ ಸಾಧ್ಯವಾಗಿತ್ತು. ಆದರೆ ಫೀಸು ಕಟ್ಟುವಂತಹ ದೊಡ್ಡ ವೆಚ್ಚದ ನಿರ್ವಹಣೆಗೆ ಎಲ್ಲಿತ್ತು ಹಾದಿ?

ನಾರಣಪ್ಪ ಕೇಳಿದ:

"ಏನ್ಮಾಡ್ಬೇಕೊಂತಿದೀರಾ?"

"ಏನೂ ತೋಚ್ತಾ ಇಲ್ಲ ಕಣ್ರೀ. ಊರಿಗೆ ಹೋಗಿ ಬರೋಣಾಂತಿದೀನಿ."

"ತಡಮಾಡ್ಬೇಡಿ ಹಾಗಾದರೆ."

"ಇಲ್ಲ."

ಮುರಲೀಧರ ಊರಿಗೆ ಪ್ರಯಾಣ ಬೆಳೆಸಿದ.

ನಿರುತ್ಸಾಹ ಹುಟ್ಟಿಸುವಂತಿತ್ತು ಆತ ಮನೆಯಲ್ಲಿ ಕಂಡ ದೃಶ್ಯ. ಅದೊಂದು ಪುಟ್ಟ ಕುರುಕ್ಷೇತ್ರ. ಸಂಸಾರ ಒಡೆಯುವ ಸ್ಥಿತಿಯಲ್ಲಿತ್ತು. ಆತನ ಅಣ್ಣಂದಿರು ಪರಸ್ಪರ ಮುಖ ನೋಡಿ ಮಾತನಾಡುತ್ತಿರಲಿಲ್ಲ. ಜಗಳಕ್ಕೆ ಮೂಲ ಕಾರಣ ಮನೆಯ ಸೊಸೆಯಂದಿರೆ ಎಂಬುದು ಹೆಂಗಸರ ಸಿಡುಕು ಮೋರೆಗಳಿಂದ ಸ್ಪಷ್ಟವಾಗು

ತ್ತಿತ್ತು. ಆ ಬೇಗೆಯಲ್ಲಿ ಬೆಂದು ತಾಯಿ ಅರೆ ಜೀವವಾಗಿದ್ದಳು. ಮಾತು ಮಾತಿಗೂ ಕೆರಳಿ ಸಿಟ್ಟಾಗುವ ಅಸಹನೆಯ ಮೂರ್ತಿಯಾಗಿದ್ದರು ತಂದೆ.

ಮುರಲೀಧರನೊಡನೆ ಒಲವು ತುಂಬಿದ ಧ್ವನಿಯಿಂದ ಒಬ್ಬರೂ ಅಲ್ಲಿ ಮಾತನಾಡಲಿಲ್ಲ. ಆರೋಗ್ಯವಾಗಿದೀಯೇನೋ?–ಎಂದು ತಾಯಿಯೊಮ್ಮೆ ಕೇಳಿದರು. ಅಷ್ಟೆ. ಊಟವಾಯ್ತೆ? ತಿಂಡಿಯಾಯ್ತೆ? ಸ್ನಾನವಾಯ್ತೆ? ಎಂದು ಒಮ್ಮೆಯೂ ಕೇಳಲಿಲ್ಲ ಅತ್ತಿಗೆಯರು.

ಮಗ ದೃಷ್ಟಿಗೆ ಬಿದ್ದೊಡನೆ ತಂದೆ ಕೇಳಿದರು:

"ಪರೀಕ್ಷೆಗೆ ಎಷ್ಟು ದಿನ ಇದೆ ಇನ್ನು?"

ಮಗನೆಂದ:

"ಮಾರ್ಚ್ ಮೊದಲ್ನೆ ವಾರ ಅಪ್ಪಾ."

ಮುಂದೇನೂ ಪ್ರಶ್ನೆ ಬರಲಿಲ್ಲವೆಂದು ಮುರಲೀಧರ ಯೋಚನೆಗೆ ಒಳಗಾದ. ತನ್ನ ಪತ್ರಗಳು ತಂದೆಗೆ ತಲಪಿಯೇ ಇಲ್ಲವೇನೋ ಎಂಬ ಸಂದೇಹ ಆತನಲ್ಲಿ ಮೂಡಿತು.

ಆದರೆ ಆ ರಾತ್ರೆಯೆ ಆಯಿತು ಸಂದೇಹ ನಿವಾರಣೆ.

ತಂದೆ ಕೇಳಿದರು:

"ಎಷ್ಟು ದಿನ ಇರ್ತೀಯಾ?"

ಮುರಲೀಧರನೆಂದ:

"ನಾಳೆಯೇ ಹೋಗ್ಬೇಕು. ಫೀಸು ಕಟ್ಟೋಕೆ ಸೋಮವಾರವೇ ಕೊನೆಯ ದಿವಸ."

"ನಿನ್ನ ಅಣ್ಣಂದಿರನ್ನು ಕೇಳಿದಿಯಾ?"

"ಇಲ್ಲ."

"ಕೇಳು. ನನ್ನಲ್ಲೇನಿದೆ? ಈಗೆಲ್ಲಾ ಅವರದೇ ರಾಜ್ಯ..."

ಹತಾಶನಾದ ಮನುಷ್ಯನ ಉತ್ತರ. ಆದರೆ ಧ್ವನಿ ಮಾತ್ರ ಕಟುವಾಗಿಯೆ ಇತ್ತು.

ಹಿಂದೆ ಮುರಲೀಧರನ ವಿಷಯದಲ್ಲಿ ಹೆಚ್ಚಿನ ಆಸಕ್ತಿ ತೋರುತಿದ್ದ ಹಿರಿಯಣ್ಣ ಈ ಸಲ ಮೌನವಾಗಿದ್ದ. ತಮ್ಮನ ನಾಲ್ಕು ಮಾತುಗಳಿಗೆ ಆತ ಉತ್ತರವಾಗಿ ಕೊಟ್ಟುದು ಒಂದೇ ಮಾತು.

"ಈವರೆಗೂ ನಾನು ಓದ್ತಾ ಬಂದಿರೋದು ನಿನ್ನ ಪ್ರೋತ್ಸಾಹದಿಂದಲೆ ಅಣ್ಣ."

"ಈಗ ನನ್ನಲ್ಲಿ ದುಡ್ಡಿಲ್ಲ."

"ಈ ವರ್ಷ ಓದಿದ್ದೆಲ್ಲ ವ್ಯರ್ಥವಾಗುತ್ತಲ್ಲಣ್ಣ. ನನ್ನ ಸ್ವಂತದ ಖರ್ಚಿಗೆ ನಾನು ದುಡ್ಡು ಕೇಳಿದ್ನೆ? ಪರೀಕ್ಷೆಗೆ—"

"ನನ್ನ ಹತ್ತಿರ ದುಡ್ಡಿಲ್ಲ ಅಂದೆ!"

"ಹಾಗಾದರೆ ಏನು ಮಾಡು ಅಂತೀಯಾ?"

"ಏನು ಬೇಕಾದರೂ ಮಾಡ್ಕೊ."

ಆ ಮಾತು ಕೇಳಿದ ಬಳಿಕ ಹೆಚ್ಚಿನ ಆಸೆಯೇ ಮುರಲೀಧರನಲ್ಲಿ ಉಳಿಯಲಿಲ್ಲ. ಕಿರಿಯ ಅಣ್ಣನೊಡನೆ ಕೇಳುವುದರಿಂದಂತೂ ಯಾವ ಪ್ರಯೋಜನವೂ ಇರಲಿಲ್ಲ.

ಹಿರಿಯವನು ಮುರಲೀಧರನಿಗೆ ಕೊಟ್ಟ ಉತ್ತರ ತಿಳಿದಾಗ ತಂದೆ ರೇಗಾಡಿದರು:

"ಆವತ್ತೆ ಹೇಳ್ಲಿಲ್ವೆ ನಾನು, ಕಾಲೇಜಿಗೆ ನೀನು ಹೋಗೋದು ಅಗತ್ಯವಿಲ್ಲ ಅಂತ?"

ಅಸಹಾಯತೆಯ ಆ ಪರಿಸ್ಥಿತಿಯಲ್ಲಿ ಮುರಲೀಧರ ರೋದಿಸುವಂತಾಯಿತು.

"ಇದು ಕಡೆಯ ಪರೀಕ್ಷೆ ಅಪ್ಪ. ಇನ್ನು ಯಾವತ್ತೂ ದುಡ್ಡು ಕೇಳೊಲ್ಲ."

"ನಾನೇನು ಗಂಟು ಕಟ್ಟಿ ಇರಿಸಿದೀನಿ ಅಂತ ತಿಳಕೊಂಡ್ಯಾ?"

"ಇನ್ನೇನಪ್ಪ ಮಾಡ್ಲಿ ನಾನು?"

"ನನಗೇನು ಗೊತ್ತು?"

ಬೆಂಗಳೂರಿನಲ್ಲಿ ಎಂದೂ ಕಂಬನಿ ಸುರಿಸಿರಲಿಲ್ಲ ಮುರಲೀಧರ. ಆ ಊರಲ್ಲಿ ತಲೆಯ ಮೇಲೊಂದು ಸೂರು ಇಲ್ಲದೆ ಓಡಾಡುತ್ತಿದ್ದಾಗಲೂ, ಕಣ್ಣೀರು ಮಿಡಿಯುವುದು ಒಮ್ಮೆಯೂ ಅಗತ್ಯವೆನಿಸಿರಲಿಲ್ಲ. ಈಗ, ಹುಟ್ಟಿ ಬೆಳೆದ ಮನೆಯ ಆವರಣವೆ ಆತನನ್ನು ಅಣಕಿಸುತ್ತಿತ್ತು. ತಾನು ತಾಯ್ತಂದೆಯರಿದ್ದೂ ಒಡಹುಟ್ಟಿದವರಿದ್ದೂ ಅನಾಥ–ನಿರ್ಗತಿಕ–ಎಂಬ ಭಾವನೆ ಅವನಲ್ಲಿ ಬೇರೂರಿ ಬಲಿಯಿತು. ಕಂಬನಿ ಒತ್ತರಿಸಿ ಬಂತು. ತಂದೆಯೊಡನೆ ಆತ ಮಾತು ಮುಂದುವರಿಸಲಿಲ್ಲ. ಆಗಲೇ ಕತ್ತಲಾಗಿತ್ತು. ಮನೆಯಲ್ಲಿದ್ದಾಗ ಹಿಂದೆ ಪ್ರತಿ ಸಂಜೆಯೂ ಮಾಡುತ್ತಿದ್ದಂತೆ ಮುರಲೀಧರ ಕೈಕಾಲು ತೊಳೆದು ಬಂದ. ತನಗೆ ಪ್ರಿಯವಾಗಿದ್ದ ಒಳ ಹಜಾರದೊಂದು ಮೂಲೆಯಲ್ಲಿ ಚಾಪೆ ಬಿಡಿಸಿ ಮಲಗಿದ.

ಹಜಾರದ ನಡುವಿನಲ್ಲಿ ಛಾವಣಿಯಿಂದ ಕೆಳಕ್ಕೆ ತೂಗಾಡುತ್ತಿತ್ತು ಸೀಮೆ ಎಣ್ಣೆಯ ಕಂದೀಲು. ಕೆಳಗೆ ಕತ್ತಲು. ಸುತ್ತಲೂ ಒಂದಿಷ್ಟು ಬೆಳಕು. ದೀಪದ ತೊಂದರೆ ಇಲ್ಲದೆಯೆ ಮಲಗಿದಲ್ಲೆ ನಿದ್ದೆಹೋಗುವುದು ಸಾಧ್ಯವಿತ್ತು.

ಆದರೆ, ಮುರಲೀಧರನ ಸಮೀಪದಲ್ಲೆಲ್ಲೂ ಇರಲಿಲ್ಲ ನಿದ್ದೆ. ಮೊಣಕೈಯ ಮೇಲೆ ತಲೆ ಇರಿಸಿ ಮಲಗಿದ ಆತನನ್ನು ಕರಿಯ ಯೋಚನೆಗಳು ಕಾಡಿದುವು. ಕಂಬನಿ ಅಳುಕುತ್ತ ನಾಚುತ್ತ ಮೆಲ್ಲನೆ ಹೊರಹರಿಯಿತು.

ಅಣ್ಣಂದಿರು ಮನೆಗೆ ಮರಳಿದರು. ಅವರ ಚಿಕ್ಕ ಮಕ್ಕಳು ಅತ್ತಿತ್ತ ಓಡಾಡಿದುವು. ಹೆಂಗಸರ ಕಾಲಂದುಗೆಯ ಸಪ್ಪಳವೂ ಕೇಳಿಸಿತು ಆಗೊಮ್ಮೆ ಈಗೊಮ್ಮೆ. ಮನೆಯವರೆಲ್ಲ ಒಬ್ಬಿಬ್ಬರಾಗಿ ಒಳಗೆ ಊಟಕ್ಕೆ ಕುಳಿತುಕೊಳ್ಳುತ್ತಿದ್ದ ಸದ್ದಾಯಿತು.

ಹಿರಿಯಣ್ಣನ ಎರಡನೆಯ ಮಗಳು ಬಂದು ಮುರಲೀಧರನ ಮೈ ಮುಟ್ಟಿ

ಹೇಳಿದಳು:

"ಚಿಕ್ಕಪ್ಪ, ಊಟಕ್ಕೆ ಬರಬೇಕಂತೆ."

"ನನ್ನ ಊಟವಾಯ್ತು."

ಮಗು ಒಯ್ದು ಸುದ್ದಿಯನ್ನು ಒಳಗೆ ಯಾರೂ ಅಲ್ಲಗಳೆದಂತೆಯೇ ತೋರಲಿಲ್ಲ!

ಆದರೂ ಸ್ವಲ್ಪ ಹೊತ್ತಿನ ಬಳಿಕ ತಾಯಿ ನಿಧಾನವಾಗಿ ನಡೆಯುತ್ತ ಬಂದು ಕೇಳಿದರು:

"ಆಯ್ತೇನೋ ಊಟ?"

"ಆಯ್ತು," ಎಂದ ಮುರಲೀಧರ ಮೆಲ್ಲನೆ.

ಆ ದಿನ ಮನೆಯಲ್ಲಿ ಹಿರಿಯ ಸೊಸೆಯ ಅಡುಗೆ. ಕಣ್ಣಲ್ಲಿ ಎಣ್ಣೆ ಇಟ್ಟು ಪ್ರತಿಯೊಂದನ್ನೂ ಗಮನಿಸುತ್ತಿದ್ದ ಕಿರಿಯ ಸೊಸೆ ಹೇಳಿದಳು:

"ಇಲ್ಲ ಅತ್ತೆ. ಸುಮ್ನೆ ಹೇಳ್ತಿದಾರೆ. ಅವರು ಊಟ ಮಾಡಿಲ್ಲ."

ಕನಿಕರದಿಂದಲೂ ಅಲ್ಲ, ಸಹಾನುಭೂತಿಯಿಂದಲೂ ಅಲ್ಲ, ಆ ಮಾತು ಬಂದುದು. ಬರಿಯ ಮತ್ಸರ ಭಾವದಿಂದ. ಅದು ಗೊತ್ತಿತ್ತು ಮುರಲೀಧರನಿಗೆ. ಆ ತಿಳಿವಳಿಕೆ ಆತನ ಮನೋವೇದನೆಯನ್ನು ಹೆಚ್ಚಿಸಿತು.

ಆದರೆ ಸತ್ಯಾಂಶವನ್ನು ತಿಳಿದ ತಾಯಿ ಸಿಟ್ಟಾದರು.

"ಯಾಕೆ ಹೀಗ್ಮಾಡ್ತೀಯೋ, ಏಳು. ಮುರಲಿ, ಏಳು!" ಎಂದರು ಆಕೆ.

"ಇಲ್ಲಮ್ಮ, ನನಗೆ ಹಸಿವಿಲ್ಲ."

ಹೆತ್ತ ಕರುಳಿಗೆ ಅರಿವಾಗದುದು ಯಾವುದಿತ್ತು? ಧ್ವನಿಯಿಂದಲೆ ಮಗನ ಮನೋಸ್ಥಿತಿಯನ್ನು ಅವರು ಊಹಿಸಿಕೊಂಡರು.

"ಹಾಗೆ ಮಾಡಬಾರದಪ್ಪಾ, ಏಳು. ಒಂದು ತುತ್ತು ಊಟ ಮಾಡುವಿಯಂತೆ. ನೋಡೋಕಾಗಲ್ಲಪ್ಪ ನಿನ್ನ. ಎಷ್ಟು ಸೊರಗಿದೀಯಾ! ಅದೇನು ಬೆಂಗಳೂರೋ, ಏನು ಕಾಲೇಜೋ..."

ಹಿಂದಿನ ಮಾತೃ ವಾತ್ಸಲ್ಯದ ನಾದ ಮಾಧುರ್ಯವಿನ್ನೂ ಉಳಿದಿದ್ದ ಸ್ವರ. ಗತ ಜನ್ಮದಲ್ಲಷ್ಟೆ ಇದನ್ನು ತಾನು ಕೇಳಿದ್ದೆನೇನೋ ಎಂದು ಭ್ರಮೆ ಹುಟ್ಟಿಸುವ ಹಾಗೆ.

ಎದ್ದು ಒಂದಿಷ್ಟು ಉಣ್ಣುವುದೇ ವಾಸಿ ಎಂದು ಮುರಲೀಧರ ಯೋಚಿಸುತಿದ್ದಂತೆಯೆ, ಒಳಬಾಗಿಲಿನಿಂದ ತಂದೆಯ ಗಡಸು ಸ್ವರವೂ ಕೇಳಿಸಿತು:

"ಮುರಲೀಧರ! ಬಾ ಊಟಕ್ಕೆ!"

ಮುರಲೀಧರ ವಿಧೇಯನಾಗಿ ಎದ್ದ. ಯಾರಿಗೂ ಕಾಣಿಸದಂತೆ ಅಂಗವಸ್ತ್ರದಿಂದ ಕಂಬನಿಯೊರೆಸಿಕೊಂಡ.

ತಂದೆ ಮತ್ತು ಮಗ. ತಾತನ ಜತೆಯಲ್ಲಿ ಚಿಳ್ಳೆಪಿಳ್ಳೆಗಳೆರಡು. ಹಿರಿ ಮಗನದೊಂದು, ಎರಡನೆಯವನದೊಂದು. ಅವುಗಳೂ ಪರಸ್ಪರ ದ್ವೇಷಿಸಲೆಂದು ಮಕ್ಕಳ

ತಾಯಂದಿರು ಯತ್ನಿಸಿದುದಿತ್ತು. ಆದರೂ ಅಭೇದ್ಯವೆನಿಸಿತ್ತು ಎಳೆಯರ ಬಾಂಧವ್ಯ. ಪುಟ್ಟ ಬೆರಳುಗಳಿಂದ ಅನ್ನದ ಅಗುಳನ್ನೆತ್ತಿ ಮುದ್ದು ಮುಖಕ್ಕೆಲ್ಲ ಮೆತ್ತುತ್ತಿದ್ದ ಅವುಗಳ ಆಟ ಮೋಹಕವಾಗಿತ್ತು. ಆ ಮಕ್ಕಳನ್ನು ನೋಡುತ್ತ, ತನ್ನ ಸಂಕಟವನ್ನು ಮರೆಯುತ್ತ, ಒಂದು ತುತ್ತು ಹೆಚ್ಚು ಉಣ್ಣಲು ಮುರಲೀಧರ ಯತ್ನಿಸಿದ.

ಊಟ ಸಾಗಿದ್ದಂತೆ, ಎದುರುಗಡೆ ಗೋಡೆಗೊರಗಿ ಕುಳಿತಿದ್ದ ತಾಯಿ ಕೇಳಿದರು:

"ರಜಾದ ಮೇಲೆ ಬಂದಿದೀಯೇನೊ ಮುರಲಿ?"

ಬೇಸರದ ಧ್ವನಿಯಲ್ಲಿ ಮುರಲೀಧರನೆಂದ:

"ನನಗೇನಮ್ಮ, ಯಾವಾಗಲೂ ರಜವೇ."

"ಅದೇನೋ ಹಾಗಂದರೆ?"

"ಇನ್ನೇನು ಮತ್ತೆ?"

"ಯಾವತ್ತು ಹೋಗ್ತೀಯಾ ಬೆಂಗಳೂರಿಗೆ."

"ಗೊತ್ತಿಲ್ಲ."

"ಪರೀಕ್ಷೆ ಆಯ್ತೇನು?"

"ಆದ ಹಾಗೆ."

ತಾಯಿಗೆ ತುಸು ರೇಗಿತು. ಆಕೆ ಗಂಡನೆಡೆಗೆ ತಿರುಗಿ ದೂರುಕೊಟ್ಟಳು:

"ಇದೇನ್ರಿ ಹೀಗೆ ಮಾತಾಡ್ತಿದಾನೆ ಈತ?"

ತಂದೆ ಆ ಪ್ರಶ್ನೆಗೆ ಉತ್ತರವೀಯಲಿಲ್ಲ. ಹೂಂಕರಿಸಿ ತಟ್ಟೆಯೊಳಗೆ ಕೈ ಆಡಿಸುತ್ತ ಮಜ್ಜಿಗೆ ಅನ್ನವನ್ನು ಕಲಸಿದರು.

...ರಾತ್ರಿ ಕಳೆದು ಬೆಳಗಾದಾಗ ಮುರಲೀಧರನ ತಂದೆ ಮೂವತ್ತು ರೂಪಾಯಿಗಳನ್ನು ಮಗನ ಕೈಗಿತ್ತರು.

"ಬಸ್ ಚಾರ್ಜಿಗೆ ಇದೆಯೇನು?" ಎಂದು ಅವರು ಕೇಳಿದರು.

"ಇಲ್ಲ."

ಆ ಎರಡು ರೂಪಾಯಿಗಳೂ ಬಂದುವು.

ಅನಿರೀಕ್ಷಿತವಾಗಿ ಹಾಗಾದುದನ್ನು ಕಂಡು ಮುರಲೀಧರ ಮೂಕನಾದ.

ತಂದೆಯೇ ಮಾತನಾಡಿದರು. ಹಣ ಮಾತ್ರ ಮಗನನ್ನು ಇದಿರಿಸಲಿಲ್ಲ. ಎದುರಿಗಿದ್ದ ಅಂಗಳವನ್ನು ದಿಟ್ಟಿಸಿತು.

"ಈ ಮನೆಯಿಂದ ನೀನು ದುಡ್ಡು ತಗೊಂಡು ಹೋಗ್ತಿರೋದು ಇದೇ ಕೊನೇ ಸಲ ಮುರಲಿ. ಇನ್ನು ದುಡ್ಡಿಗೇಂತ ಬರಲೇಬೇಡ. ಏನಾದರೂ ಕೆಲಸ ಸಿಗೋಹಾಗಿದ್ದರೆ ಬೇಗನೆ ನೋಡು, ಸಂಪಾದಿಸು. ನಿನ್ನ ಅಣ್ಣಂದಿರ ಜಗಳದ ವಿಷಯ ಕೇಳಿದೆಯೋ ಇಲ್ಲವೋ. ಆಸ್ತಿ ಪಾಲಾಗ್ಬೇಕಂತೆ. ಪಾಲಾದ್ಮೇಲೆ ಮೂರು ಕಾಸಿಗೆ ಮಾರ್ತಾರೆ. ನನಗೆ ಗೊತ್ತಿಲ್ವೇನು? ನಾನು ಸಾಯೋವರೆಗೂ ಈ ಮನೆ ಹೊಲ ಭದ್ರವಾಗಿರೋ ಹಾಗೆ ನೋಡ್ಕೊತೀನಿ. ಆಮೇಲೆ ಏನು ಬೇಕಾದರೂ ಆಗಲಿ.

ನಿಮ್ಮ ಹಣೇಲೆಲ್ಲ ಬ್ರಹ್ಮ ಏನು ಬರೆದಿದಾನೋ ಯಾರಿಗೆ ಗೊತ್ತು?"

ಉತ್ತರವಾಗಿ ಏನನ್ನಾದರೂ ಹೇಳಬೇಕೆಂಬ ಇಚ್ಛೆಯಾಯಿತು ಮುರಲೀಧರನಿಗೆ. ಆದರೆ ಗಂಟಲು ಒಣಗಿತ್ತು. ಮಾತು ಹೊರಬೀಳಲಿಲ್ಲ.

ಅಂಗಳಕ್ಕಿಳಿದು ತೋಟದತ್ತ ಹೊರಡುತ್ತ ತಂದೆ ಅಂದರು:

"ಇವತ್ತೇ ಫೀಸು ಕಟ್ಬಿಡು. ಖರ್ಚಾಗಿ ಹೋದೀತು. ಎಲ್ಲೂ ಪೋಲಿ ಅಲೀ ಬೇಡ."

ಹೂಂ ಎನ್ನಲು ಹೊರಟಿದ್ದ ಮುರಲೀಧರ, 'ಪೋಲಿ ಅಲೆಯಬೇಡ' ಎಂಬ ಹಿತವಚನ ಕೇಳಿ ಸುಮ್ಮನಾದ. ತಲೆಯೆತ್ತಿ ತಂದೆಯನ್ನಾತ ನೋಡಿದ. ವಿಶಾಲವಾದ ಭುಜಗಳು. ಆದರೆ ಸುಕ್ಕುಗಟ್ಟಿದ್ದ ಸೊರಗಿದ್ದ ಮೈ. ದರ್ಪದಿಂದ ನೇರವಾಗಿ ಇರುತ್ತಿದ್ದ ಕತ್ತು ಈಗ ತುಸು ಬಾಗಿತ್ತು. ಮುಖ ಆಕಾಶವನ್ನು ಈಕ್ಷಿಸುತ್ತಿರಲಿಲ್ಲ, ನೆಲವನ್ನು ನೋಡುತ್ತಿತ್ತು.

ಮೂರು ಫರ್ಲಾಂಗುಗಳ ದೂರವಿತ್ತು ಮೋಟಾರು ಹಾದಿಗೆ. ತಕ್ಷಣವೆ ಹೊರಡದಿದ್ದರೆ ಬೆಳಗಿನ ಬಸ್ಸು ಸಿಗದೇ ಹೋಗುವ ಸಂಭವ. ಆದರೆ ಮುರಲೀಧರ ಬರಿ ಹೊಟ್ಟೆಯಲ್ಲಿದ್ದ. ಬೆಳಗ್ಗಿನ ಅಲ್ಪೋಪಹಾರ ಆಗಿರಲಿಲ್ಲ. ಮಗ ಹೊರಟು ನಿಂತುದನ್ನು ಕಂಡು ತಾಯಿ ಒಳಹೋಗಿ ಬಂದರು. ಅಡುಗೆಮನೆ ತಣ್ಣಗಿತ್ತು. ಆಕೆ ಗೊಣಗಿದುದೆಷ್ಟೋ ಅಷ್ಟೇ ಬಂತು. ಹಿರಿಯ ಸೊಸೆ ಮನೆಯ ಹಿಂಬದಿಯಲ್ಲಿ ಸೀಬೆ ಕಾಯಿ ಕೀಳುತ್ತ ನಿಂತಿದ್ದಳು. ಆ ದಿನದ ಅಡುಗೆಯ ಜವಾಬುದಾರಿ ಕಿರಿಯ ಸೊಸೆಯದು. ಮಾಡಿ ಇರಿಸಿದ್ದ ತಿಂಡಿಯಂತೂ ಮನೆಯಲ್ಲಿ ಏನೂ ಇರಲಿಲ್ಲ.

"ನನ್ನ ಪ್ರಾರಬ್ಧ ಕರ್ಮ!" ಎಂದು ತಾಯಿ ಹಣೆಯನ್ನು ಅಂಗೈಯಿಂದ ತಟ್ಟಿಕೊಂಡರು.

ತಿಂಡಿ ಕಟ್ಟಿಕೊಡುವ ಮಾತಿರಲಿಲ್ಲ. ಒಂದು ತುತ್ತು ಕೊಟ್ಟು ಕಳುಹುವುದಕ್ಕಾದರೂ ಅಲ್ಲಿ ಏನಿತ್ತು?

ಈ ತಪ್ಪು ಕಿರಿಯ ಸೊಸೆಯದೇ ಎಂದು ಕುಲುಕುಲು ನಗುತ್ತ ಹಿತ್ತಿಲಲ್ಲಿ ನಿಂತಿದ್ದ ಹಿರಿಯವಳನ್ನು ಮುರಲೀಧರನ ತಾಯಿ ದುರದುರನೆ ನೋಡಿದರು. ಆಕೆ ಕಿತ್ತಿದ್ದ ಸೀಬೆಕಾಯಿಗಳಿಂದ ತುಸು ಮಾಗಿದ್ದ ಕೆಲವನ್ನು ಅವಸರವಾಗಿ ಆರಿಸಿ ತಂದರು. ಒಂದು ಲೋಟ ನೀರು ಕುಡಿದು ಸಿದ್ಧನಾಗಿದ್ದ ಮುರಲೀಧರ, ನಾಲ್ಕು ಕಾಯಿಗಳನ್ನಷ್ಟೆ ಪಾಯಜಾಮುದೊಳಕ್ಕೆ ತುರುಕಿದ.

"ಇಲ್ಲೇ ತಿನ್ನು," ಎಂದರು ತಾಯಿ.

"ತಡವಾಯ್ತಮ್ಮ. ಹೋಗ್ತಾ ಹಾದೀಲಿ ತಿನ್ತೀನಿ."

"ನಿನ್ನಿಷ್ಟ. ಬೆಂಗಳೂರು ಸೇರಿದ ತಕ್ಷಣ ಕಾಗದ ಬರಿ."

ಆ ಆದೇಶವಂತೂ ಪ್ರತಿ ಸಾರೆಯೂ ಮಗನಿಗೆ ದೊರೆತೇ ದೊರೆಯುತ್ತಿತ್ತು.

"ಹೂಂ," ಎಂದ ಮುರಲೀಧರ.

"ಆರೋಗ್ಯ ಜೋಪಾನ. ಹಾಳು ಮೂಳು ತಿನ್ನಬೇಡ. ರಜಾ ಸಿಕ್ಕಿದ ತಕ್ಷಣ ಮನೆಗೆ ಬಂದ್ಬಿಡು."

ಅಜ್ಜಿಯ ಕೈಹಿಡಿದು ಚಿಕ್ಕಪ್ಪನನ್ನೆ ನೋಡಿದುವು ಮೊಮ್ಮಕ್ಕಳೆರಡು.

ಆಗಲೆ ಹತ್ತಾರು ಹೆಜ್ಜೆ ನಡೆದಿದ್ದ ಮುರಲೀಧರನೊಮ್ಮೆ ತಿರುಗಿ ನೋಡಿ, ಎಂದಿನ ಕಾತರವನ್ನೆ ವ್ಯಕ್ತಪಡಿಸುತ್ತ ನಿಂತಿದ್ದ ತಾಯಿಯ ವಯಸ್ಸಾದ ಮುಖ ವನ್ನೊಮ್ಮೆ ದಿಟ್ಟಿಸಿ "ಹೂಂ" ಎಂದ...

....ನಾಲ್ವತ್ತು ಜನರ ಬದಲು ಅರವತ್ತು ಜನರನ್ನು ಹೊತ್ತು ತಂದಿತ್ತು ಮೋಟಾರು ಬೆಂಗಳೂರಿಗೆ. ನಗರ ಸಮೀಪಿಸುತಿದ್ದಂತೆ ಕೇಳಿಬರುತಿತ್ತು ಚಿರಪರಿಚಿತ ವಾದ ಕಲರವ. ಪ್ರತಿ ಸಾರೆಯೂ ಅಷ್ಟೆ. ಲಕ್ಷಗಟ್ಟಲೆ ಜನ ಜೀವಿಸುವ ಮಹಾನಗರ. ಮನೆಯ ಮಾಡಗಳು, ಹೊಗೆ ಕೊಳವೆಗಳು, ಗುಡಿಸಲು–ಸೌಧಗಳು...

ಆಶ್ಚರ್ಯವೆನಿಸುತ್ತಿತ್ತು ಮುರಲೀಧರನಿಗೆ. ಮೊದಮೊದಲು ಒಂದೆರಡು ಸಾರೆ ಬೆಂಗಳೂರಿನಿಂದ ಊರಿಗೆ ಹೋಗಲು ಆತ ಉತ್ಸುಕತೆ ತೋರಿದುದಿತ್ತು. ಒಂದೆ ರಡು ಸಾರೆ ಮಾತ್ರ. ಕ್ರಮೇಣ, ಈ ನಗರದ ಅನಿವಾರ್ಯವಾದ ಒಂದಂಗ ತಾನು ಎಂಬ ಭ್ರಮೆ ತಲೆದೋರಿತ್ತು. ಆ ಭ್ರಮೆ ನಂಬುಗೆಯಾಗಿ ಮಾರ್ಪಟ್ಟಿತ್ತು ಬೇಗನೆ. ಈಗ ಪ್ರತಿ ಸಾರೆಯೂ ಬೇಸರ ಕಳೆದು ಮುಖದ ಮೇಲೆ ಲವಲವಿಕೆ ಮೂಡುತ್ತಿದ್ದುದು ಆತ ಬೆಂಗಳೂರನ್ನು ಸಮೀಪಿಸುತ್ತಿದ್ದಾಗ ...

ತಡವಾಗಿದ್ದರೂ ಮುರಲೀಧರ ಕಾಲೇಜಿಗೆ ಹೋದ. ಫೀಸು ಕಟ್ಟಿದ ಬಳಿಕ ತರಗತಿ ಸೇರಿದ.

ಆತನ ದೃಷ್ಟಿ ಮೊದಲು ಹುಡುಕಿದುದು ನಾರಣಪ್ಪನನ್ನು. ಆ ಮುಖದ ಮೇಲೆ, ಗೆಳೆಯ ಊರಿಗೆ ಮರಳಿ ಬಂದನೆಂಬ ತಿಳಿವಳಿಕೆಯಿಂದ ಹುಟ್ಟಿದ ಸಮಾಧಾನ ವಿತ್ತು. ಹೋದ ಕೆಲಸ ಆಯಿತೆ ಇಲ್ಲವೆ ಎಂದು ತಿಳಿಯುವ ಕಾತರವಿತ್ತು. ಆಗಿರ ಬಹುದೆಂಬ ಆತ್ಮವಿಶ್ವಾಸದ ಹೊಳಪಿತ್ತು.

ಸಂಭಾಷಣೆ ಸಾಧ್ಯವಾದಾಗ, ನಾರಣಪ್ಪ ಕೇಳಿ ಪಡೆದುದು ತನ್ನ ನಂಬುಗೆಗೆ ಸಮರ್ಥನೆಯನ್ನೇ.

ದಿನದ ತರಗತಿಗಳು ಮುಗಿದಾಗ ನಾರಣಪ್ಪ ಕೇಳಿದ:

"ಟ್ಯೂಶನ್ ಕೊಡೋಕೆ ಇವತ್ತು ಸಾಯಂಕಾಲವೂ ಹೋಗ್ಬೇಕೇನು?"

"ಹಾಗೇನಿಲ್ಲ. ನಾನು ವಾಪಸು ಬಂದಿರೋದು ಹುಡುಗರಿಗೆ ಗೊತ್ತಿಲ್ಲ," ಎಂದ ಮುರಲೀಧರ.

"ಹಾಗಾದರೆ ನಮ್ಮ ಮನೆಗೆ ಹೋಗೋಣ, ಬನ್ನಿ."

"ನಡೀರಿ."

...ನಾರಣಪ್ಪನ ತಾಯಿಗೂ ಅಕ್ಕನಿಗೂ ಮುರಲೀಧರ ಅಪರಿಚಿತನಾಗಿರಲಿಲ್ಲ. ಆ ತಾಯಿ ಅಂದರು:

"ನಾಣಿ ನಿಮ್ಮ ವಿಷಯ ಆಗಾಗ್ಗೆ ಹೇಳ್ತಾನೇ ಇರ್ತಾನೆ. ಬನ್ನಿ."

ವಿನಯದಿಂದ ಮುರಲೀಧರ, ಸಂಬೋಧನೆಯ ರೀತಿಗೆ ಆಕ್ಷೇಪ ಸೂಚಿಸಿದ:

"ನಾರಣಪ್ಪನ ಹಾಗೇ ನಾನೂ. ಹೋಗು–ಬಾ–ಅಂತನ್ನಿ."

ಆ ತಾಯಿ ನಕ್ಕು ನುಡಿದರು:

"ಆಗಲಪ್ಪ. ನಿನ್ನಿಷ್ಟ."

ಗೌರವರ್ಣದ ಎತ್ತರದ ಸ್ತ್ರೀ ನಾರಣಪ್ಪನ ತಾಯಿ. ತಲೆಯಮೇಲೆ ಬೆಳ್ಳಿ ಸರಿಗೆಗಳು ಧಾರಾಳವಾಗಿದ್ದರೂ ದೇಹ ಗಟ್ಟಿಮುಟ್ಟಾಗಿತ್ತು. ಬದುಕಿನ ನೇಗಿಲು ಮುಖದ ಮೇಲೆ ಗೆರೆಗಳನ್ನೆಳೆದಿದ್ದರೂ ಗತವೈಭವವನ್ನು ತೋರಿಸುತ್ತಿತ್ತು ಮುಖದ ತೇಜಸ್ಸು. ಹಣೆ ಬರಿದಾಗಿದ್ದ ಮಗಳು ತಾಯಿಯಂತೆಯೇ ಇದ್ದಳು–ನಾರಣಪ್ಪನ ಅಕ್ಕ. ಮೈ ಬಣ್ಣದಲ್ಲಿ ನಸುಗಪ್ಪಿಗೆ ಮೇಲುಗೈಯಾಗಿದ್ದುದು ನಾರಣಪ್ಪನಲ್ಲಿ ಮಾತ್ರ. ಪ್ರಾಯಶಃ ಆತನ ಅಣ್ಣನೂ ಹಾಗೆಯೇ ಇರಬಹುದೆನ್ನಿಸಿತು, ಮುರಲೀಧರನಿಗೆ. ಅವರ ತಂದೆಯ ಪ್ರತಿಬಿಂಬಗಳಿರಬಹುದೆಂಬ ಅಭಿಪ್ರಾಯ ರೂಪುಗೊಂಡಿತು.

ತಿಂಡಿ–ಕಾಫಿ....

ತನ್ನ ತಾಯಿ, ಮತ್ತು ನಾರಣಪ್ಪನ ತಾಯಿ.

ತಾನು ಹುಟ್ಟಿ ಬೆಳೆದ ಮನೆ, ಕಲಹದ ಕಣ. ಹೆಮ್ಮರವಾದ ತಂದೆಗೆ ಆತುಗೊಂಡ ಬಳ್ಳಿ, ತಾಯಿ. ಮಕ್ಕಳ, ಸೊಸೆಯರ, ಜಗಳ ಕಂಡು ಹಣೆ ಚಚ್ಚಿಕೊಳ್ಳುವುದೇ ಆಕೆಯ ದಿನನಿತ್ಯದ ಸುಖಸೌಭಾಗ್ಯ. ಈ ತಾಯಿ ಹಾಗಲ್ಲ. ಬದುಕಿನ ಆಹ್ವಾನವನ್ನು ನಿರಾಕರಿಸದೆ ಧೈರ್ಯದಿಂದಿದ್ದು ಮಕ್ಕಳನ್ನು ಬೆಳೆಸಿ ದೊಡ್ಡವರಾಗಿ ಮಾಡಿದ ಧೀರೆ. ಮಗಳು ವಿಧವೆಯಾದ ನೋವನ್ನು ನುಂಗಿದ ಸಮರ್ಥೆ. ಹಿರಿಯ ಮಗನನ್ನು ಸರಕಾರ ಬಂಧಿಸಿದರೂ ಅಳುಕದ ವೀರವನಿತೆ.

ತನ್ನ ತಾಯಿಯನ್ನು ಆಕೆಯೊಡನೆ ಹೋಲಿಸುವುದರಲ್ಲಿ ಅರ್ಥವಿರಲಿಲ್ಲ. ಆದರೂ ಹೋಲಿಸಿ ನೋಡಲು ಬಯಸುತ್ತಿತ್ತು ಮುರಲೀಧರನ ಮನಸ್ಸು.

ಇಡಿಯ ಸಂಸಾರದೊಂದು ಭಾವಚಿತ್ರ ಗೋಡೆಯ ಮೇಲಿತ್ತು. ನಾರಣಪ್ಪ ಅದನ್ನು ತೆಗೆದು ಮುರಲೀಧರನ ಕೈಲಿರಿಸಿದ.

"ನಮ್ಮಕ್ಕನ ಮದುವೆ ಸಮಯದಲ್ಲಿ ತೆಗೆಸಿದ್ದು. ಇವರು ನಮ್ಮ ತಂದೆ, ನಮ್ಮಣ್ಣ ಈತ, ಇವರೇ ನಮ್ಮ ಭಾವ. ನನ್ನ ಗುರುತು ಸಿಗುತ್ತೆ ತಾನೆ?"

ಮುರಲೀಧರನ ಊಹೆ ಸರಿಯಾಗಿತ್ತು. ನಾರಣಪ್ಪನಂತೆಯೇ ಕಾಣಿಸುತ್ತಿದ್ದವನು ಆತನ ಅಣ್ಣ. ತಮ್ಮನಿಗಿಂತ ಸ್ವಲ್ಪ ಎತ್ತರವಾಗಿದ್ದ, ಅಷ್ಟೆ. ಆ ಸೋದರರ ರೂಪುರೇಖೆಗಳನ್ನು ಒಳಗೊಂಡಿದ್ದ ಮುಖ ಅವರ ತಂದೆಯದು. ಸೂಟು ಧರಿಸಿದ ತೆಳ್ಳಗಿನ ಹಸನ್ಮುಖಿಯೇ ನಾರಣಪ್ಪನ ಭಾವ. ಅಕಾಲ ಮೃತ್ಯುವಿಗೆ ಗುರಿಯಾದ ಮನುಷ್ಯ. ಸಂತೃಪ್ತಿಯ ಮುಗುಳುನಗೆ ಇತ್ತು ತಾಯಿಯ ತುಟಿಗಳ ಮೇಲೆ. ತಾಯಿಯ ಬಲಬದಿಗೆ, ಗಂಡನ ಮುಂಭಾಗದಲ್ಲಿ ಕುಳಿತಿದ್ದಳು ನಾರಣಪ್ಪನ ಅಕ್ಕ.

ರೂಪು ರಾಶಿಯ ಮೇಲೆ ಮುಗ್ಧಭಾವದ ಮುದ್ರೆ.

"ರಾತ್ರೆ ಊಟಕ್ಕೆ ಇಲ್ಲೇ ಇದ್ದು ಹೋಗಪ್ಪ," ಎಂದರು ನಾರಣಪ್ಪನ ತಾಯಿ.

ಆಹ್ವಾನದ ಜತೆಯಲ್ಲೆ ಸಂದೇಹವೂ ಒಂದು ಮೊಳೆತು, ಅವರೇ ಅಂದರು:

"ಆದರೆ ನಮ್ಮನೇಲಿ ನೀನು ಊಟ ಮಾಡ್ತೀಯೋ ಇಲ್ಲವೋ...."

ಏನು ಉತ್ತರ ಕೊಡಬೇಕೆಂದು ತಿಳಿಯದೆ ತಬ್ಬಿಬ್ಬಾದ ಮುರಲೀಧರನ ನೆರವಿಗೆ ನಾರಣಪ್ಪ ಬಂದ:

"ಮುರಲಿಗೆ ಅಂಥ ಭಾವನೆಗಳೆಲ್ಲ ಇಲ್ಲವಮ್ಮ."

ಮುರಲಿ ಎಂಬ ಚುಟುಕು ಹೆಸರಿನಿಂದ ಸ್ನೇಹಿತ ಆತನನ್ನು ಕರೆದುದು ಅದೇ ಮೊದಲು. ಗೆಳೆಯನ ಆ ಉತ್ತರ ಮುರಲೀಧರನಿಗೆ ಪ್ರಿಯವೆನಿಸಿತು.

ನಾರಣಪ್ಪನ ತಾಯಿ ಅಂದರು:

"ಹಾಗಾದರೆ ಸರಿ."

ಮಾತು ಊಟಕ್ಕೆ ಸಂಬಂಧಿಸಿತ್ತೆಂದು ತಿಳಿದ ಮುರಲೀಧರನೆಂದ:

"ಇವತ್ತು ಬೇಡೀಮ್ಮಾ. ಇನ್ನೊಂದು ದಿವಸ ಯಾವಾಗಲಾದರೂ ಬರ್ತೀನಿ. ಯಾವತ್ತಾದರೂ ಭಾನುವಾರ. ಮಧ್ಯಾಹ್ನ."

"ಅದೇ ಸರಿ," ಎಂದ ನಾರಣಪ್ಪ.

ಆತನ ತಾಯಿಯೆಂದರು:

"ಹಾಗೇ ಆಗಲಿ. ಖಂಡಿತವಾಗಿ ಬರಬೇಕು. ಏನೂ ಸಂಕೋಚಪಟ್ಕೋ ಬಾರದು. ಪುರುಸೊತ್ತಿದ್ದಾಗಲೆಲ್ಲ ಬಂದು ಹೋಗು."

"ಹೂಂ" ಎಂದ ಮುರಲೀಧರ, ಆ ಆಹ್ವಾನಕ್ಕೆ ಕೃತಜ್ಞನಾಗಿ.

ಸ್ವಲ್ಪಹೊತ್ತು ಅಲ್ಲಿದ್ದ ಬಳಿಕ ಮುರಲೀಧರ ಕೇಳಿದ:

"ನಾಣಿ, ನಾನು ಹೋಗಲಾ?"

ಆ ಆತ್ಮೀಯ ಸಂಬೋಧನೆಯೂ ಅನಿರೀಕ್ಷಿತವಾಗಿಯೆ ಬಂದಿತ್ತು.

"ಹೋಗೋಣ, ನಾನೂ ಬರ್ತೀನಿ ಸ್ವಲ್ಪ ದೂರ," ಎಂದ ನಾರಣಪ್ಪ. ಯಾವ ಬದಲಾವಣೆಯೂ ಇರಲಿಲ್ಲ ಆತನ ಧ್ವನಿಯಲ್ಲಿ. ಆಶ್ಚರ್ಯದ ಯಾವ ಸೂಚನೆಯೂ ಇರಲಿಲ್ಲ.

ಹುಡುಗರು ಹೊರಟುದನ್ನು ಕಂಡು ನಾರಣಪ್ಪನ ತಾಯಿ ಎಂದರು:

"ನಮ್ಮ ನಾಣೀನ ಸ್ವಲ್ಪ ನೋಡ್ಕೊ ಮುರಲಿ. ಅವನ ಅಣ್ಣನಿಗಂತೂ ಜೈಲೇ ಇಷ್ಟವಂತೆ. ಸದ್ಯಃ ಇವನಾದರೂ ಮನೇಲಿ ಇರಲಿ. ಇಬ್ಬರೂ ಚೆನ್ನಾಗಿ ಓದಿ."

ಉತ್ತರವೀಯುವ ಗೊಡವೆಗೆ ಹೋಗದೆ ಮುರಲೀಧರ ಸಣ್ಣನೆ ನಕ್ಕ.

ಹೊರಗೆ ನಾರಣಪ್ಪನೆಂದ:

"ಮುರಲಿ, ಆಗೊಲ್ಲ ಅನ್ನಬಾರದು. ನೀವು ಬಸ್ನಲ್ಲೇ ಹೋಗ್ಬೇಕು. ಟಿಕೆಟು ನಾನು ತಕ್ಕೊಡ್ತೀನಿ."

"ಛೆ! ಛೆ! ನಡಕೊಂಡೇ ಹೋಗ್ತೀನಿ ನಾನು."

"ದಯವಿಟ್ಟು ಇದೊಂದು ಸಲ ನನ್ನ ಮಾತು ಕೇಳಿ."

"ಇದೆಂಥಾ ಒತ್ತಾಯ ನಾಣಿ?"

"ದುಡ್ಡಿದ್ದರೆ ನೀವು ಬಸ್ನಲ್ಲಿ ಹೋಗ್ತಿದ್ದಿರೊ ಇಲ್ವೊ?"

"ಅದು ಬೇರೆ ವಿಷಯ."

"ಇಲ್ಲಿ ಕೇಳಿ. ನಿಮಗೆ ಆಯಾಸವಾಗಿದೆ. ಬಸ್ನಲ್ಲಿ ಹೋಗಿ ಮಲಕೊಳ್ಳಿ."

ಹೆಚ್ಚು ಹಟ ಹಿಡಿಯದೆ ಮುರಲೀಧರ ಒಪ್ಪಿದ. ಆತನೆಂದ:

"ಬಸ್ ಪ್ರಯಾಣ ಎಂದಾದರೆ ಅವಸರವೇನಿಲ್ಲವಲ್ಲ. ಸ್ವಲ್ಪ ಹೊತ್ತು ಮಾತಾಡ್ತಿರೋಣ."

"ನಾನೂ ಅದನ್ನೇ ಸೂಚಿಸೋಣಾಂತಿದ್ದೆ!"

"ಹಾಗಾದರೆ ಹರಟೆಗೋಸ್ಕರ ಅನ್ನಿ ಟಿಕೆಟಿನ ಲಂಚ!"

"ಇಲ್ಲವಪ್ಪ! ಮೊದಲು ಪರೋಪಕಾರ, ಆಮೇಲೆ ಸ್ವಾರ್ಥ. ಆದರೆ ಎರಡನ್ನೂ ಜತೇಲಿ ಬೇಕಾದರೂ ಸಾಧಿಸಬಹುದು. ಹಾಗೆ ಮಾಡೋದು ತಪ್ಪೂಂತ ಎಲ್ಲಿ ಬರೆದಿದೆ?"

ಮೆಲ್ಲಮೆಲ್ಲನೆ ಹಾದಿ ನಡೆಯುತ್ತ, ಒಂದು ವಿಷಯದಿಂದ ಇನ್ನೊಂದು ವಿಷಯಕ್ಕೆ ಕುಪ್ಪಳಿಸುತ್ತ, ಗೆಳೆಯರು ಬಹಳ ಹೊತ್ತು ಮಾತನಾಡಿದರು.

ಮುರಲೀಧರ ಪತ್ರಿಕಾ ಕಛೇರಿಗೆ ಫೋನ್ ಮಾಡಿ, ಮಲ್ಲೇಶಪ್ಪನ ದಸ್ತಗಿರಿಯ ಸುದ್ದಿ ಅಷ್ಟಾದರೂ ಪ್ರಕಟವಾಗುವಂತೆ ಮಾಡಿದ 'ಸಾಹಸ ಕೃತ್ಯದ' ವಿವರ ತಿಳಿದಾಗ ನಾರಣಪ್ಪನ ತಾಯಿ, 'ತಮಾಷೆ ಹುಡುಗ' ಎಂದು ಹೇಳಿ ನಕ್ಕಿದ್ದರಂತೆ.

"ನಿಮ್ಮನ್ನೊಮ್ಮೆ ಕರಕೊಂಡು ಬರಬೇಕೂಂತ ಆಗ಼್ಲೆ ಅಮ್ಮ ಹೇಳಿದ್ದು."

"ನಿಮ್ಮಮ್ಮ ತುಂಬಾ ಒಳ್ಳೆಯವರು."

"ನೀವು ಬೆಂಗಳೂರಿಗೆ ವಾಪಸಾಗೋದನ್ನೆ ಕಾಯ್ತಾ ಇದ್ದೆ. ಒಂದು ವೇಳೆ ನಿಮ್ಮ ಮನೆಯಿಂದೇನಾದರೂ ಸಿಗದೇ ಇದ್ದರೆ, ನಮ್ಮ ತಾಯಿ ಹತ್ತಿರ ಪ್ರಸ್ತಾಪ ಮಾಡೋಣಾಂತಿದ್ದೆ."

ಅದು ಕನಸಿನಲ್ಲೂ ಮುರಲೀಧರ ಎಣಿಸಿರದ ವಿಷಯ.

"ಸದ್ಯಃ ಗಂಡಾಂತರ ಕಳೆಯಿತಲ್ಲ..."

"ನಾನು ಫೀಸು ಕೊಡೋದು ಕೂಡ ಸ್ವಲ್ಪ ಕಷ್ಟವೇ ಆಯ್ತು ಮುರಲಿ."

[ಆ ಕಷ್ಟವಿದ್ದರೂ ಗೆಳೆಯನ ವಿಷಯವಾಗಿ ಯೋಚಿಸಿದ್ದ ನಾರಣಪ್ಪ.]

ಅದು ಬಡ ಸಂಸಾರವೆಂಬುದು ಸ್ಪಷ್ಟವಾಗಿತ್ತು. ಅವರು ವಾಸವಾಗಿದ್ದ ಮನೆಯೇ ಸಾರುತಿತ್ತು ಅದನ್ನು. ಒಂದಕ್ಕೊಂದು ಹೊಂದಿಕೊಂಡಿದ್ದ ಮೂರು ನಾಲ್ಕು ಮನೆಗಳ ಪುಟ್ಟ ವಠಾರ ಅದು.

"ನಿಮ್ಮಣ್ಣನ ದಸ್ತಗಿರಿಯಾದ್ಮೇಲೆ ತುಂಬಾ ತೊಂದರೆಯಾಗಿರ್ಬೇಕು, ಅಲ್ವೆ?"

"ಹೌದು. ಸಣ್ಣ ಪುಟ್ಟ ಒಡವೆಗಳೆಲ್ಲ ಚಿನಿವಾರ ಕಟ್ಟೆಗೆ ಹೋಗಿವೆ. ಆದರೆ ಎಷ್ಟು ಕಾಲ ಹೀಗೆ ದಿನ ತಳ್ಳೋದು ಸಾಧ್ಯ? ಪರೀಕ್ಷೆಯಾದ ತಕ್ಷಣ ನಾನು ಎಲ್ಲಾದರೂ ಕೆಲಸಕ್ಕೆ ಸೇರ್‍ಕೋಬೇಕು. ಅಕ್ಕನಿಗೆ ಎಸ್ ಎಸ್ ಎಲ್ ಸಿ ಆಗಿದೆ. ನನಗೂ ಎಲ್ಲಾದರೂ ಕೆಲಸ ಕೊಡಿಸು-ಅಂತಿರ್‍ತಾಳೆ. ಆದರೆ ಅಕ್ಕ ದುಡಿಯೋದು ಅಮ್ಮನಿಗೆ ಇಷ್ಟವಿಲ್ಲ."

"ಹೆತ್ತ ಕರುಳು......ಇಂಟರ್ ಮುಗಿಸಿದ್ಮೇಲೆ ನೀವು ವಿದ್ಯಾಭ್ಯಾಸ ಮುಂದುವರಿಸೋ ಹಾಗೆ ಕಾಣ್ಲಿಲ್ಲ ಹಾಗಾದರೆ."

"ಹ್ಯಾಗೆ ಮುಂದುವರಿಸ್ಲಿ? ಕಾಲೇಜಿಗೆ ಹೋದರೂ ಮಲ್ಲೇಶಪ್ಪನ ತಮ್ಮನನ್ನು ಸುಮ್ನೆ ಬಿಡ್ತಾರೆ ಅನ್ನೋ ಭರವಸೆ ಏನು? ಈ ಸಲದ ಪರೀಕ್ಷೆಯಾದರೂ ಯಾವ ಸುಖಕ್ಕೋಸ್ಕರ ಅಂತ ಅನಿಸುತ್ತೆ ಒಮ್ಮೊಮ್ಮೆ. ಅಣ್ಣ ಇದ್ದಾಗ ಚುರುಕಾಗಿ ಅತ್ತಿತ್ತ ಓಡಾಡ್ತಿದ್ದೆ. ಒಂದಿಷ್ಟು ಕೆಲಸ ಮಾಡ್ತಿದ್ದೆ. ಈಗ? ಸುಮ್ನಿರೋದು ಹ್ಯಾಗೆ ಸಾಧ್ಯ ಹೇಳಿ?"

ಆ ಮಾತನ್ನೆಲ್ಲ ನಿಧಾನವಾಗಿ ತೂಗಿ ನೋಡುತ್ತ ಮುರಲೀಧರನೆಂದ:

"ರಾಷ್ಟ್ರದ ಕೆಲಸ ಮತ್ತು ಸಂಸಾರದ ಜವಾಬುದಾರಿ. ಒಂದಕ್ಕೋಸ್ಕರ ಇನ್ನೊಂದನ್ನು ಮರೆಯೋದಕ್ಕಾಗುತ್ತಾ?"

"ಒಂದನ್ನು ಬಿಟ್ಟು ಇನ್ನೊಂದಿಲ್ಲ ಅಂತ ನನ್ನ ಅಭಿಪ್ರಾಯ. ಮನೇದು ಚಿಕ್ಕ ಸಂಸಾರ. ರಾಷ್ಟ್ರದ್ದು ದೊಡ್ಡ ಸಂಸಾರ. ಚಿಕ್ಕದು ದೊಡ್ಡದರ ಒಂದಂಗ. ಹೌದೋ, ಅಲ್ಲವೋ?"

ಮುರಲೀಧರ ಮುಗುಳುನಕ್ಕ.

"ಈ ಮಾತಿಗೆ ನನ್ನ ಪ್ರತ್ಯುತ್ತರವಿಲ್ಲ!"

ವಿಷಯ ತಿಳಿಯಲು ಅಪೇಕ್ಷಿಸುವ ದೃಷ್ಟಿಯಿಂದ ನಾರಣಪ್ಪ ಕೇಳಿದ:

"ನಿಮ್ಮೂರ ಕಡೆ ಹ್ಯಾಗಿದೆ? ಜನ ರಾಜಕೀಯದ ಪ್ರಸ್ತಾಪ ಮಾಡೋದು ಉಂಟೆ?"

"ಏನು ಉತ್ತರ ಕೊಡಲಿ ಆ ಪ್ರಶ್ನೆಗೆ? ಪತ್ರಿಕೆಗಳು ಮೊದಲಿಗಿಂತ ಹೆಚ್ಚು ಖರ್ಚಾಗ್ತವೆ. ಯುದ್ಧ ಸುದ್ದಿ ತಿಳಿಯೋ ಕುತೂಹಲ ಎಲ್ಲರಲ್ಲೂ ಇದೆ. ನಮ್ಮೂರಿನಿಂದಲೂ ಒಬ್ಬಿಬ್ಬರು ಸೈನ್ಯಕ್ಕೆ ಭರ್ತಿಯಾಗಿದ್ದಾರೆ...."

"ಸ್ವಾತಂತ್ರ್ಯ ಚಳವಳಿ ಮಾತೆಲ್ಲಾ—"

"ಇಲ್ಲ, ಅಂಥದೊಂದೂ ಇಲ್ಲ. ಉದಾಹರಣೆಗೆ ನಮ್ಮನೆಯನ್ನೆ ತಗೊಳ್ಳಿ. ನನ್ನ ತಂದೆ ಓದುಬರಹ ಬಲ್ಲವರು. ನನ್ನ ಇಬ್ಬರು ಅಣ್ಣಂದಿರೂ ತಕ್ಕಮಟ್ಟಿಗೆ ವಿದ್ಯಾವಂತರು. ಆದರೆ ವೃತ್ತ ಪತ್ರಿಕೆಗೂ ಅವರಿಗೂ ಎಣ್ಣೆ ಸೀಗೆ..."

ಊರಿನ ಕುರಿತು ಹೇಳಲು ತೊಡಗಿದ್ದ ಮುರಲೀಧರ ತನ್ನ ಕುಟುಂಬದ ಮನೆಗೆ ಬಂದು ತಲಪಿದ್ದ. ಈ ಸಂಜೆ ಮಲ್ಲೇಶ್ವರದಲ್ಲಿ, ಸ್ನೇಹಿತನ ಸಹವಾಸದಲ್ಲಿ, ಬದುಕು

ಸಹ್ಯವಾಗಿ ತೋರಿತ್ತು ಆತನಿಗೆ. ಆದರೆ ಹಿಂದಿನ ದಿನ ಊರಿನಲ್ಲಿ ಅಷ್ಟೇ ಹೊತ್ತಿನಲ್ಲಿ ಆತನಿಗಾಗಿದ್ದ ಅನುಭವ? ಸಂಜೆಯಾದೊಡನೆಯೆ ಆತ ಚಾಪೆಯ ಮೇಲೆ ಒರಗಿ ಕೊಂಡುದು? ಆ ಚಿತ್ರ ಮುರಲೀಧರನ ಕಣ್ಣಿಗೆ ಕಟ್ಟಿತು. ಆ ನೆನಪು ಒಂದು ಕ್ಷಣ ಆತನನ್ನು ಕಾಡಿತು.

ಮನೆಯ ಮಾತು ಹೇಳುತ್ತ ಅಂತರ್ಮುಖಿಯಾಗಿ ಒಮ್ಮೆಲೆ ಮೌನ ತಳೆದ ಗೆಳೆಯನನ್ನು ನೋಡುತ್ತ ನಾರಣಪ್ಪ ಕೇಳಿದ:

"ಸುಮ್ಮನಾದಿರಲ್ಲ?"

ಮುರಲೀಧರ ನಸುನಕ್ಕು ನುಡಿದ:

"ಯಾವುದನ್ನೋ ಅನುಭವಿಸಿ ತನಗುಂಟಾದ ಭಾವನೆಗಳು ಇನ್ನೊಬ್ಬನಿಗೂ ಆಗಲೀಂತ ಮನುಷ್ಯ ಬಯಸ್ತಾನೆ, ಅಲ್ವೆ?"

"ಹೌದು."

"ಹಾಗೆ ಬಯಸೋದು ಸ್ವಾಭಾವಿಕ ತಾನೆ? ಕೇಳಿ ಹಾಗಾದರೆ–"

ಸ್ನೇಹಿತನ ಮಾತಿಗೆ ಕಿವಿಗೊಡುತ್ತ ನಾರಣಪ್ಪ ಗಂಭೀರನಾದ. ರಾಷ್ಟ್ರ ಚಿತ್ರ ದೊಳಗಿನ ಸಂಸಾರ ಚಿತ್ರವೇ ಅದೂ. ಎಷ್ಟೊಂದು ರುದ್ರ! ಭಾರತದಲ್ಲಿರುವ ಅಂತಹ ಸಂಸಾರಗಳ ಸಂಖ್ಯೆಯೋ ಕೋಟಿ ಕೋಟಿ....ವೈಯಕ್ತಿಕವಾಗಿಯೂ ಅಷ್ಟೆ. ಸಾಮೂ ಹಿಕವಾಗಿಯೂ ಅಷ್ಟೆ: ನಾಳೆಯ ಚಿತ್ರ ಸ್ಪಷ್ಟವಾಗಿರಲಿಲ್ಲ. ಎಲ್ಲವನ್ನೂ ಬದಲಾಯಿ ಸುವ, ಸರಿಪಡಿಸುವ, ಹೋರಾಟದ ಕಾರಿರುಳು ದೀರ್ಘವಾಗಿತ್ತು.

"ನನ್ನ ಅಧ್ಯಯನದ ಕಥೆ ಮುಗಿದ ಹಾಗೆಯೇ ಅಂತ ಭಾವಿಸಿದ್ದೆ ನಾರಣಪ್ಪ. ಸದ್ಯಃ ಆ ಸ್ಥಿತಿಯಿಲ್ಲ. ಈ ಸಲದ್ದೂ ಒಂದು ಪರೀಕ್ಷೆ ಆಗಿಯೇ ಆಗುತ್ತೆ."

"ಆಮೇಲೆ?"

"ಅದು ದೊಡ್ಡ ಪ್ರಶ್ನೆ. ಉತ್ತರವನ್ನೇನೋ ಇವತ್ತಲ್ಲ ನಾಳೆ ನಾನು ಕೊಟ್ಟೇ ತೀರಬೇಕು. ಆದರೂ ಆ ಕೆಲಸವನ್ನು ನಾಳೆಗೆ ಮುಂದುವರಿಸೂಂತ ಹೇಳುತ್ತೆ ಮನಸ್ಸು."

"ಅಂಥ ಸಮಯದಲ್ಲಿ ಸರಿಯಾದ ಉತ್ತರವನ್ನೇ ನೀವು ಕೊಡ್ತೀರೀಂತ ನನಗೆ ಗೊತ್ತು."

ಬೀದಿಯಲ್ಲೂ ಬೀದಿಯ ಅಂಚಿನ ಮೇಲೂ ಅತ್ತಿತ್ತ ನಡೆಯುತ್ತಿದ್ದ ಜನರ ಆಕೃತಿಗಳು ಅಸ್ಪಷ್ಟವಾದುವು. ಬೀದಿಯ ದೀಪಗಳು ಬೆಳಗಿದುವು. ವಾಹನಗಳು ಕಣ್ಣುಗಳಿಂದ ಪ್ರಭೆ ಕಾರುತ್ತ ಚಲಿಸಿದುವು.

ಚಿಲ್ಲರೆ ಆಣೆಗಳನ್ನು ಗೆಳೆಯನ ಕೈಗೆ ತುರುಕುತ್ತ ನಾರಣಪ್ಪನೆಂದ:

"ಅಗೋ ಬಂತು ನಿಮ್ಮ ಬಸ್ಸು!"

೭

ಆ ವರ್ಷದ 'ಕಾಲೇಜು ಮ್ಯಾಗಜೀನ್'ಗಾಗಿ ಸಿದ್ಧತೆ ನಡೆದಿತ್ತು. ಆ ಕೆಲಸ ಕ್ಕೋಸ್ಕರ ನಿಯೋಜಿತರಾಗಿದ್ದ ರಸಾಯನ ಶಾಸ್ತ್ರದ ಉಪನ್ಯಾಸಕ ಶ್ರೀಕಂಠಯ್ಯನವರು ಲೇಖಕ ಲೇಖಿಕೆಯರನ್ನು ಹುಡುಕುತ್ತ ತರಗತಿಯಿಂದ ತರಗತಿಗೆ ಓಡಾಡಿದರು. ಅವರೇ ಪ್ರಧಾನ ಸಂಪಾದಕರು. ಸೈನ್ಯವಿಲ್ಲದ ಸೇನಾನಿಯ ಹಾಗೆ. ಅವರ ಸಂಪಾದಕ ಮಂಡಲವೇ ಸಿದ್ಧವಾಗಿರಲಿಲ್ಲ!

ಮುರಲೀಧರನ ತರಗತಿಯಲ್ಲೂ ಶ್ರೀಕಂಠಯ್ಯನವರು ಲೇಖನಗಳಿಗಾಗಿ ವಿನಂತಿ ಮಾಡಿದರು. ಆ ಸಂದರ್ಭದಲ್ಲಿ ಅವರು ಎಚ್ಚರಿಕೆಯ ಮಾತನ್ನೂ ಆಡಿದರು:

"ಸ್ವತಃ ನೀವೇ ಬರೀಬೇಕು. ಪತ್ರಿಕೆಗಳಿಂದ ಪ್ರತಿ ಮಾಡ್ಕೊಂಡು ತರ ಕೂಡದು."

"ಪುಸ್ತಕದಿಂದ ಕಾಪಿ ಮಾಡ್ಬಹುದೆ ಸಾರ್?" ಎಂದು ಕೇಳಿ ಒಬ್ಬ ವಿದ್ಯಾರ್ಥಿ, ಎದುರಿಗಿದ್ದವನ ಹಿಂದೆ ತಲೆ ಮರೆಸಿಕೊಂಡ.

ತರಗತಿ ನಕ್ಕಿತು.

ಲೇಖನ ಬರೆದುಕೊಡುವವರಿಗೇ ಬರಗಾಲವೆಂದಾದರೆ ಸಂಪಾದಕರನ್ನು ಆರಿಸು ವುದು ಹೇಗೆ ಸಾಧ್ಯವಿತ್ತು?

ಶ್ರೀಕಂಠಯ್ಯ ವಿದ್ಯಾರ್ಥಿಗಳೆದುರು ತಮ್ಮ ಸಂಕಟವನ್ನು ತೋಡಿಕೊಂಡರು:

"ಸಂಪಾದಕ ಮಂಡಲಕ್ಕೆ ಯಾರನ್ನು ಕೊಡ್ತೀರಪ್ಪಾ?"

ಹೆಸರು ಸೂಚಿಸುವುದಕ್ಕೇನೋ ವಿದ್ಯಾರ್ಥಿಗಳು ಸಿದ್ಧವಾಗಿದ್ದರು. ಯಾರದಾದ ರೊಂದು ಹೆಸರು. ಆದರೂ ಮ್ಯಾಗಜೀನಿಗೆ ಸಂಬಂಧಿಸಿದ ವಿಷಯವೆಂದು, ಹಿಂದು ಮುಂದು ನೋಡುವಂತಾಯಿತು.

ಪೇಚಿನಲ್ಲಿ ಸಿಲುಕಿದ ಶ್ರೀಕಂಠಯ್ಯನವರ ದೃಷ್ಟಿ ಗೊತ್ತುಗುರಿ ಇಲ್ಲದೆ ವಿದ್ಯಾರ್ಥಿ ಗಳ ಮುಖಗಳ ಮೇಲೆ ಅಲೆಯಿತು. ನಾರಣಪ್ಪ ಕುಳಿತಿದ್ದ ಕೊನೆಯಲ್ಲಿ ವಿರಾಮ ಕ್ಕೆಂದು ಅನಿರೀಕ್ಷಿತವಾಗಿ ತಂಗಿತು.

ಅಧ್ಯಾಪಕರು ದಿಟ್ಟಿಸಿ ನೋಡುತ್ತಿದ್ದ ಪ್ರತಿಭಾಶಾಲಿ ಯಾರೆಂದು ತಿಳಿಯಲು, ಹುಡುಗರು ಕತ್ತು ಚಾಚಿ ಆ ಮೂಲೆಯನ್ನು ಕಂಡರು.

"ಓ!" ಎಂದು ಹೊರಟುವು ಒಂದೆರಡು ಉದ್ಗಾರಗಳು.

ಶ್ರೀಕಂಠಯ್ಯ ಕಕ್ಕಾವಿಕ್ಕಿಯಾದರು. ಮತ್ತೆ ಅವರ ದೃಷ್ಟಿ ಅತ್ತಿತ್ತ ಧಾವಿಸಿತು. ಇತರರ ಉದ್ಗಾರಗಳಿಗೆ ಕಾರಣನಾಗಿದ್ದ ವಿದ್ಯಾರ್ಥಿ ಯಾರೆಂದು ನೋಡಲು ನಾರಣಪ್ಪ ನೆಡೆಗೇ ಮರಳಿತು.

"ಲೇಖನ ಬರೆಯೋಕೆ ಬರುತ್ತೇನಯ್ಯ ನಿನಗೆ?" ಎಂದು ಶ್ರೀಕಂಠಯ್ಯ ಆತ ನನ್ನು ಕೇಳಿದರು.

ನಾರಣಪ್ಪ ಏಳುತ್ತಿದ್ದಂತೆ ಗುಸುಗುಸು ಮಾತನಾಡಿಕೊಂಡರು ಹುಡುಗರು. ಅವನಲ್ಲಿ ಅಂತಹ ಸಾಮರ್ಥ್ಯವಿರಬಹುದೆಂದು ಊಹಿಸಿಯೇ ಇರಲಿಲ್ಲ ಯಾರೂ.

"ಇಲ್ಲ ಸಾರ್" ಎಂದ ನಾರಣಪ್ಪ, "ಆದರೆ ಸಂಪಾದಕ ಮಂಡಲಿಗೆ ಬೇರೊಬ್ಬರ ಹೆಸರು ಸೂಚಿಸ್ತೀನಿ."

"ಯಾರು?"

"ಮುರಲೀಧರ್, ಅವರು ಕತೆ ಬರೀತಾರೆ. ಹಿಂದೆ ಕೈಬರೆಹದ ಪತ್ರಿಕೆ ನಡೆಸಿದಾರೆ. ಹೀಗಾಗಿ ಸಂಪಾದಕನ ಕೆಲಸದ ಅನುಭವವೂ ಇದೆ."

ಅಷ್ಟಾದರೂ ಸಲಹೆ ಬಂತಲ್ಲ ಎಂದು ಶ್ರೀಕಂಠಯ್ಯ ಮುರಲೀಧರನನ್ನು ಹುಡುಕಿದರು.

ಹುಡುಗರ ಗುಜುಗುಜು ಧ್ವನಿ ಗಟ್ಟಿಯಾಯಿತು. "ಮುರಲೀಧರ್, ಮುರಲೀಧರ್!" ಎಂದು ಸ್ವರಗಳು ಕೇಳಿಸಿದುವು.

ಅನಿವಾರ್ಯವಾಗಿ ಮುರಲೀಧರ ಎದ್ದು ನಿಂತ. ನಾರಣಪ್ಪ ಹೀಗೂ ಮಾಡಬಹುದೆ? ಎಂದು ಮೊದಲು ಸಿಟ್ಟು ಬಂತು ಆತನಿಗೆ. ಬಳಿಕ, ಸ್ನೇಹಿತ ಹೀಗೆ ಹೇಳದೆ ಇರುತ್ತಿದ್ದರೇ ಚೆನ್ನಾಗಿತ್ತು—ಎಂಬ ಸಂಕೋಚ ಅವನನ್ನು ಆವರಿಸಿತು. ಏನಾದರೂ ಒಂದಿಷ್ಟು ಬರೆಯಲು ಒಳ್ಳೆಯ ಅವಕಾಶ ಒದಗಿತೆಂಬ ಸಮಾಧಾನವೂ ಮೂಡಿತು.

ಅಧ್ಯಾಪಕರು ಕೇಳಿದರು:

"ಏನಯ್ಯಾ, ಸಂಪಾದಕ ಮಂಡಲೀಲಿ ಇರ್ತೀಯಾ?"

ಇದು ತಾನು ಹೊರಲಾರದ ಭಾರವಿದ್ದೀತೆಂದು ಮುರಲೀಧರ ಸ್ವಲ್ಪ ದಿಗಿಲುಗೊಂಡ.

"ನನ್ನ ಕೈಲಾಗುತ್ತೋ ಇಲ್ವೋ ಸಾರ್."

ಈತನನ್ನು ಸೇರಿಸಿಕೊಳ್ಳುವುದೇ ಸರಿ—ಎಂದು ಆಗಲೇ ನಿರ್ಧರಿಸಿದ ಶ್ರೀಕಂಠಯ್ಯನೆಂದರು:

"ಸುಲಭದ ಕೆಲಸ ಮುರಲೀಧರ್. ನಾನಿರ್ತೀನಲ್ಲ ಜತೇಲಿ. ಕೂತ್ಕೊ."

'ಒಲ್ಲೆ' ಎನ್ನಲು ಅವಕಾಶವನ್ನೇ ಅವರು ಕೊಡಲಿಲ್ಲ. ನಾರಣಪ್ಪನ ಮುಖ ಅರಳಿತು. ಮುರಲೀಧರ ಆತನನ್ನೆ ದಿಟ್ಟಿಸಿದ. ದುರದುರನೆ ನೋಡುತ್ತಿದ್ದಂತೆ ಕಂಡರೂ ಆ ನೋಟದಲ್ಲಿ ತುಂಬಿದ್ದುದು ಒಲವು ಮಾತ್ರ.

"ಇನ್ನೂ ಒಬ್ಬರ ಹೆಸರು ಹೇಳೀಪ್ಪಾ, ಈ ತರಗತಿಯಿಂದ ಇಬ್ಬರು ಬೇಕು," ಎಂದರು ಶ್ರೀಕಂಠಯ್ಯ.

ತರಗತಿಯ ಒಂದು ವಿಭಾಗ ಗಟ್ಟಿಯಾಗಿ ಸಲಹೆ ನೀಡಿತು.

"ಮಹದೇವಯ್ಯ ಸಾರ್."

ಮಹದೇವಯ್ಯ ಆಕ್ಷೇಪಿಸಲಿಲ್ಲ.

"ಸರಿ, ಇಬ್ಬರಾದರ್ರು, ಸಾಕು," ಎಂದರು ಶ್ರೀಕಂಠಯ್ಯ, ನಿಟ್ಟುಸಿರು ಬಿಟ್ಟು,

ದೊಡ್ಡದೊಂದು ಕೆಲಸವನ್ನು ಮಾಡಿ ಮುಗಿಸಿದವರಂತೆ.

ಪಾಠದ ಬಳಿಕ ವಿದ್ಯಾರ್ಥಿಗಳು ಹೊರ ಹೋಗುತ್ತಿದ್ದಂತೆ ಕೆಲವರು ಮಹ ದೇವಯ್ಯನ ಕೈ ಕುಲುಕಿದರು. ಬೇರೆ ಕೆಲವರು, ಮುರಲೀಧರನಿಗೆ ಕೇಳಿಸುವಂತೆ ಕೀಟಲೆ ಮಾಡುವ ಧ್ವನಿಯಲ್ಲಿ ಅಂದರು:

"ಸಂಪಾದಕರು! ಸಂಪಾದಕರು!"

ಇಬ್ಬರೇ ಉಳಿದಾಗ ನಾರಣಪ್ಪನೊಡನೆ ಮುರಲೀಧರನೆಂದ:

"ರೀ, ನಿಮ್ಮ ಮೇಲೆ ನನಗೆ ಬಹಳ ಸಿಟ್ಟು ಬಂದಿದೆ."

"ಹೌದೆ? ಯಾಕೆ?" ಎಂದು ನಾರಣಪ್ಪ ನಗುತ್ತ.

"ಇನ್ನೇನು ಮತ್ತೆ?"

"ಸುಮ್ನಿರಿ ಮುರಲಿ. ನಾನು ಸರಿಯಾದ್ದನ್ನೇ ಮಾಡಿದೆ."

"ಏನೋಪ್ಪ..."

ಮನೆಯ ಕಡೆ ಹೊರಟಾಗ ನಾರಣಪ್ಪ ನಕ್ಕು ಹೇಳಿದ:

"ಮ್ಯಾಗಜೀನಿಗೆ ನಾನೊಂದು ಲೇಖನ ಕೊಡ್ತೀನಿ. ತಿರಸ್ಕರಿಸ್ಬೇಡೀಪ್ಪಾ...."

....ಮೊದಲು ವರ್ಷದ ಇಬ್ಬರು ಪ್ರತಿನಿಧಿಗಳು, ದ್ವಿತೀಯ ವರ್ಷದ ಕಲಾ ವಿಭಾಗದಿಂದ ಇನ್ನೊಬ್ಬರು, ಮುರಲೀಧರ ಮತ್ತು ಮಹದೇವಯ್ಯ—ಹೀಗೆ ಐವರ ಸಂಪಾದಕ ಮಂಡಲ ಕೆಲಸ ಆರಂಭಿಸಿತು.

"ಸಂಪಾದಕರಾದರೆ ಸಾಲದು. ಸ್ವತಃ ನೀವೂ ಬರೀಬೇಕು," ಎಂದರು ಶ್ರೀಕಂಠಯ್ಯ.

ಅದು ಕಷ್ಟದ ಕೆಲಸವೆಂಬುದು ಹೆಚ್ಚಿನವರ ಅಭಿಪ್ರಾಯವಾಗಿತ್ತು. ಅದಕ್ಕೆ ಅಪವಾದವಾಗಿದ್ದವನು ಲಕ್ಷ್ಮೀಕಾಂತ. ಆತ ಕೇಳಿದ:

"ಕವಿತೆ ಎಷ್ಟು ಬೇಕಾಗಬಹುದು ಸಾರ್?"

"ಕನ್ನಡ ವಿಭಾಗದಲ್ಲಿ ನಾಲ್ಕೈದು. ಇಂಗ್ಲಿಷ್ ವಿಭಾಗದಲ್ಲಿ ಒಂದೋ ಎರಡೋ," ಎಂದರು ಶ್ರೀಕಂಠಯ್ಯ.

"ಆ ಕೆಲಸ ನನಗೆ ಬಿಟ್ಬಿಡಿ ಸಾರ್."

"ಎಲ್ಲಿಂದ ತರ್ತೀಯಪ್ಪ?"

ಕಣ್ಣೆವೆ ಕೂಡ ಅಲುಗಿಸದೆ ಆತ್ಮ ವಿಶ್ವಾಸದಿಂದ ಲಕ್ಷ್ಮೀಕಾಂತನೆಂದ:

"ನಾನೇ ಬರೀತೀನಿ. ಇಂಗ್ಲಿಷ್ ಕನ್ನಡ ಎರಡರಲ್ಲೂ."

ಶ್ರೀಕಂಠಯ್ಯನವರ ಕಣ್ಣುಗಳಲ್ಲಿ ತುಂಟತನದ ನಗೆ ಮಿನುಗಿದುದನ್ನು ಮುರಲೀ ಧರ ಗಮನಿಸಿದ.

"ನೋಡೋಣ. ಬರೆದು ತಗೊಂಡ್ಬಾ. ಬೇರೆ ಕವಿಗಳೂ ಇದಾರೇನೋ ಹುಡುಕೋಣ."

ಲಕ್ಷ್ಮೀಕಾಂತನ ಮೇಲೆ ಆ ಮಾತಿನಿಂದ ಯಾವ ಪರಿಣಾಮವೂ ಆಗಲಿಲ್ಲ.

ನಿಶ್ಚಲವಾಗಿತ್ತು ಆತನ ಮುಖಮುದ್ರೆ. ಏನನ್ನೋ ಆತ ಯೋಚಿಸುತ್ತಿದ್ದ. ಪ್ರಾಯಶಃ ಕವಿತೆಯ ಸಾಲುಗಳನ್ನಾತ ಆಗಲೆ ಅಲ್ಲಿಯೆ ಮನಸ್ಸಿನೊಳಗೆ ರೂಪಿಸುತ್ತಿರಬೇಕೆಂಬ ಶಂಕೆ ಮುರಲೀಧರನಿಗೆ ಮೂಡಿತು.

ಅಧ್ಯಾಪಕರೆಂದರು:

"ಸಮೀಪದಲ್ಲೆ ಯಾವುದಾದರೂ ಪ್ರೆಸ್ ಗೊತ್ಮಾಡ್ತೀನಿ. ಇನ್ನೆರಡು ವಾರಗಳಲ್ಲಿ ಮುದ್ರಣ ಶುರುವಾಗ್ಬೇಕು. ಪ್ರೆಸ್ಸಿಗೆ ಹೋಗಿ ಮುದ್ರಣದ ಉಸ್ತುವಾರಿ ಯಾರು ವಹಿಸ್ತೀರಾ?"

ವಿನಯಶೀಲನಾದ ಮುರಲೀಧರ ಮಹದೇವಯ್ಯನ ಹೆಸರು ಸೂಚಿಸಿದ.

"ಪ್ರೆಸ್ಸಿನಲ್ಲಿ ಏನು ಕೆಲಸ ಇರುತ್ತೆ ಸಾರ್?" ಎಂದು ಕೇಳಿದ ಮಹದೇವಯ್ಯ.

"ಪ್ರೂಫ್ ತಿದ್ದೋದು, ಮ್ಯಾಟರ್ ಎಷ್ಟು ಬೇಕೂಂತ ಕೇಳೋದು. ಇನ್ನೇನಿರುತ್ತೆ?"

ಅದು ಗುರುತರವಾದ ಜವಾಬ್ದಾರಿ ಎನಿಸಿತು ಮಹದೇವಯ್ಯನಿಗೆ. ಆತನೆಂದ:

"ಮುರಲೀಧರ್ ಕೂಡಾ ಜತೇಲಿದ್ದರೆ ವಾಸಿ."

"ಸರಿ. ಪ್ರೆಸ್ಸಿನ ಕೆಲಸ ನಿಮ್ಮಿಬ್ಬರ ಜವಾಬ್ದಾರಿ. ಒಂದು ವಾರದೊಳಗೆ ಲೇಖನಗಳು ಸಂಪಾದಕರ ಕೈಸೇರಬೇಕೂಂತ ನೋಟೀಸ್ ಬೋರ್ಡಿನಲ್ಲಿ ಹಾಕಿಸೋಣ. ಆಗದೆ?"

"ಹೂಂ ಸಾರ್" ಎಂದ ಮುರಲೀಧರ.

...ಪರೀಕ್ಷೆಯ ತಯಾರಿ ನಡೆಸಬೇಕು, ಇನ್ನು ತಡಮಾಡಬಾರದು–ಎಂಬ ಯೋಚನೆ ಮುರಲೀಧರನನ್ನು ಕೊರೆಯುತ್ತಿದ್ದರೂ ಹೊಸ ಚಟುವಟಿಕೆಯಿಂದ ಆತ ಉತ್ಸಾಹಿತನಾದ. ದಿನವೂ ಆತನನ್ನು ನೋಡುತ್ತಿದ್ದವರು, "ಇವತ್ತು ಖುಶಿಯಾಗಿದೀರಲ್ಲಾ, ಏನು ಸಮಾಚಾರ?" ಎಂದು ಕೇಳುವಂತಾಯಿತು. ಸಂಪಾದಕ ಮಂಡಲದಲ್ಲಿ ತಾನು ಒಬ್ಬನಾದರೂ ಶ್ರೀಕಂಠಯ್ಯನವರಿಗೆ ಹೆಚ್ಚು ವಿಶ್ವಾಸವಿದ್ದುದು ತನ್ನಲ್ಲೇ ಎಂಬುದು ಖಚಿತವಾಗಿತ್ತು. ಕಾಲೇಜು ಪತ್ರಿಕೆಗೆ ಸಂಪಾದಕ ತಾನು. ಕೈಬರೆಹದ್ದಲ್ಲ, ಅಚ್ಚಾಗುವ ಪತ್ರಿಕೆ...

ಶ್ರೀಕಂಠಯ್ಯ ಅಂದರು:

"ಮ್ಯಾಗಜೀನಿಗೆ ಒಂದಿಷ್ಟು ಜಾಹೀರಾತು ದೊರಕಿಸ್ಬೇಕು. ಪ್ರಿಂಟಿಂಗ್ ಖರ್ಚಾದರೂ ಹುಟ್ಟುತ್ತೆ."

ಮಹದೇವಯ್ಯ ಕೇಳಿದ:

"ಅದೆಲ್ಲಿ ಸಿಗುತ್ತೆ ಸಾರ್?"

"ಸ್ಪೋರ್ಟ್ಸ್ ಅಂಗಡಿಯವರು, ದೊಡ್ಡ ದೊಡ್ಡ ಪುಸ್ತಕದಂಗಡಿಯವರು, ಕೊಡ್ತಾರೆ. ಹೋಗಿ ಕೇಳ್ಬೇಕು."

ವಿಷಯ ಸ್ಪಷ್ಟವಾದಾಗ ಉತ್ಸಾಹ ಧ್ವನಿಯಲ್ಲಿ ಮಹದೇವಯ್ಯನೆಂದ:

"ಆ ಜವಾಬ್ದಾರಿ ನನಗಿರಲಿ ಸಾರ್. ಮೂರು ನಾಲ್ಕು ಅಂಗಡಿಯವರು ನನಗೆ ಗೊತ್ತು. ತಗೊಂಡ್ಬರ್‍ತೀನಿ."

"ನಿಮ್ಮ ಅಂಗಡೀದೂ ಬೇಕು!"

ಚಿಕ್ಕಪೇಟೆಯಲ್ಲಿ ಮಹದೇವಯ್ಯನ ತಂದೆಯ ದೊಡ್ಡ ಜವಳಿ ಅಂಗಡಿ ಇತ್ತು.

"ಆಗಲಿ ಸಾರ್, ಅದಕ್ಕೇನು?"

ಮುರಲೀಧರನ ಕೈಗೆ ನಿಲುಕದ ಲೋಕ ಅದು. ಮಹದೇವಯ್ಯನ ಧೈರ್ಯ ಕಂಡು ಆತನಿಗೆ ಅಭಿಮಾನವೆನಿಸಿತು. ಆತನಲ್ಲಾದರೂ ಆ ಕೆಲಸಕ್ಕೆ ಇಳಿದಿದ್ದರೆ ಒಂದೆ ರಡು ಜಾಹೀರಾತುಗಳಾದರೂ ಸಿಗುತ್ತಿದ್ದುವೋ ಇಲ್ಲವೋ...

ಶ್ರೀಕಂಠಯ್ಯ ತಮ್ಮ ಕೈ ಸೇರಿದ್ದ ಎಂಟು ಹತ್ತು ಲೇಖನಗಳನ್ನು ಮುರಲೀಧರ ನಿಗೆ ಕೊಟ್ಟು ಹೇಳಿದರು.

"ಓದಿ ನೋಡು. ತಪ್ಪುಗಳಿದ್ದರೆ ತಿದ್ದು. ಹ್ಯಾಗೆ ಮಾಡ್ತೀಂತ ನೋಡೋಣ."

"ಆಗಲಿ ಸಾರ್, ಓದಿ ನೋಡ್ತೀನಿ," ಎಂದ ಮುರಲೀಧರ. ಅದು ತನ್ನ ಸಾಮರ್ಥ್ಯಕ್ಕೆ ಮೀರಿದ ಕೆಲಸ ಎಂದು ಆತನಿಗೆ ತೋರಲಿಲ್ಲ.

ಶ್ರೀಕಂಠಯ್ಯ ಕೇಳಿದರು:

"ನೀನೇನು ಬರೀತೀಯಾ? ಪ್ರಬಂಧವೋ? ಕಥೆಯೋ?"

"ಇನ್ನೂ ಯೋಚಿಸಿಲ್ಲ, ಸಾರ್."

"ಬರಿ. ಚೆನ್ನಾಗಿ ಬರಲಿ. ನೋಡಿದವರು ತಲೆದೂಗೋ ಹಾಗಿರ್ಬೇಕು ಈ ಸಲದ ಮ್ಯಾಗಜೀನು."

"ಆಗಲಿ ಸಾರ್."

ಬೆಳಗ್ಗೆಯೂ ಸಂಜೆಯೂ ಪಾಠ ಹೇಳುವುವರ ಜತೆಗೆ ಲೇಖನಗಳನ್ನು ಓದಿ ನೋಡುವ ಕೆಲಸ ಮುರಲೀಧರನಿಗೆ. ಹೆಚ್ಚಿನ ಬರೆಹಗಳು ತೀರಾ ಕೆಳಮಟ್ಟದಲ್ಲಿ ದ್ದುವು. ಇವನ್ನೆಲ್ಲ ಅಚ್ಚು ಹಾಕಿದರೆ ಓದಿದವರು ತಲೆದೂಗಿದಂತೆಯೇ—ಎಂದು ಕೊಂಡ ಮುರಲೀಧರ. ಲಕ್ಷ್ಮೀಕಾಂತ ಬರೆದ ಕವಿತೆಗಳಂತೂ 'ಅಸಹನೀಯ' ವಾಗಿದ್ದುವು.

ಲಕ್ಷ್ಮೀಕಾಂತ ಮುರಲೀಧರನನ್ನು ಕೇಳಿದ:

"ಪ್ರಧಾನ ಸಂಪಾದಕರು ನನ್ನ ಕವಿತೆಗಳನ್ನು ನಿಮ್ಮ ಕೈಗೆ ಕೊಟ್ಟಿದಾರಂತೆ—ಹೌದೆ?"

ಆಪತ್ತು ಬಂತೆಂಬುದು ಸ್ಪಷ್ಟವಾಯಿತು ಮುರಲೀಧರನಿಗೆ. ಆದರೂ ಆತ ಎದೆ ಗುಂದಲಿಲ್ಲ. ಮಾತನಾಡುವುದಕ್ಕೆ ಪೀಠಿಕೆಯಾಗಿ ಮುಗುಳು ನಕ್ಕ.

"ಹೌದು."

"ಪ್ರಿಂಟಿಂಗ್ ಯಾವಾಗ ಶುರುವಾಗುತ್ತೆ?"

"ಗೊತ್ತಿಲ್ಲ."

"ಬೇರೆ ಯಾರ ಯಾರ ಲೇಖನಗಳನ್ನು ಹಾಕ್ತಾರಂತೆ?"

"ಇನ್ನೂ ತೀರ್ಮಾನಿಸಿಲ್ಲ."

ಅಂತಹ ಪ್ರಶ್ನೆಗಳೆಲ್ಲ ಬಂದುವೇ ಹೊರತು, ಸ್ವಂತದ ಕೃತಿಗಳ ವಿಷಯವಾಗಿ ಏನನ್ನೂ ಲಕ್ಷ್ಮೀಕಾಂತ ಕೇಳಲಿಲ್ಲ. ಮುರಲೀಧರ ತಾನಾಗಿಯೇ ಮೆಚ್ಚುಗೆ ಸೂಚಿಸ ಬಹುದೆಂದು ನಿರೀಕ್ಷಿಸಿದ್ದ ಆತ. ಅದು ಬರದೇ ಇದ್ದಾಗ ಅನಿವಾರ್ಯವಾಗಿ ಆತನೇ ಅದರ ಪ್ರಸ್ತಾಪ ಮಾಡಬೇಕಾಯಿತು.

"ನನ್ನ ಕವಿತೆಗಳ ವಿಷಯ ಶ್ರೀಕಂಠಯ್ಯನವರು ಏನೆಂದರು?"

"ಅವರು ಓದಿಲ್ಲಾಂತ ಕಾಣುತ್ತೆ."

ಲಕ್ಷ್ಮೀಕಾಂತನ ಮುಖ ತುಸು ವಿವರ್ಣವಾಯಿತು.

"ನೀವು ಓದಿದಿರಾ?"

"ಹೂಂ"

ಮುರಲೀಧರನ ಎದೆ ಡವಡವನೆ ಹೊಡೆದುಕೊಂಡಿತು. ಮುಂದಿನ ಪ್ರಶ್ನೆ ಯಾವುದೆಂಬುದನ್ನು ನಿರೀಕ್ಷಿಸುವುದು ಕಷ್ಟವಾಗಿರಲಿಲ್ಲ. ಅದಕ್ಕೆ ಕೊಡಬೇಕಾದ ಉತ್ತರ—

"ಅವಸರದಲ್ಲಿ ಬರೆದೆ. ಹ್ಯಾಗಿವೆ?"

[ಅಲ್ಲಿ ಇಲ್ಲಿ ಚೆನ್ನಾಗಿಲ್ಲದೆ ಹೋದರೆ, ಅವಸರದಲ್ಲಿ ಬರೆದುದೇ ಹಾಗಾಗಲು ಕಾರಣ.]

"ಒಂದೆರಡು ಪರವಾಗಿಲ್ಲ; ತಕ್ಕಮಟ್ಟಿಗಿವೆ."

—ಅದು ಕೂಡ ಮನಸ್ಸಾಕ್ಷಿಗೆ ವಿರುದ್ಧವಾಗಿಯೆ ಆತ ಹೇಳಿದ ಮಾತು.

ಲಕ್ಷ್ಮೀಕಾಂತನ ಮುಖ ಅವಮಾನ ಸಹಿಸಲಾಗದೆ ಕೆಂಪೇರಿತು.

"ಅದರಲ್ಲಿರೋ ದೋಷ ಏನು ಹೇಳ್ತೀರಾ?"

ತೊಡೆ ತಟ್ಟಿ ನೀಡಿದ ಆಹ್ವಾನದಂತಿತ್ತು ಆ ಧ್ವನಿ. ಮುರಲೀಧರನನ್ನು ಕೆಣಕಿ ದಂತಾಗಿ ಆತನೆಂದ:

"ಮುಖ್ಯತಃ ಅವು ಕವಿತೆಗಳಲ್ಲ."

"ಇನ್ನೇನು ಮತ್ತೆ? ಭಾಮಿನಿ ಷಟ್ಪದಿಯಲ್ಲಿ ಬರೆದು ಕೊಡ್ಬೇಕೋ"

"ಹಾಗಂದ್ನೆ? ಶ್ರೀಯವರ ಇಂಗ್ಲಿಷ್ ಗೀತಗಳು ನೀವು ಓದಿದೀರಾ? ಬೇಂದ್ರೆ-ಪುಟ್ಟಪ್ಪನವರ ಕವಿತೆಗಳನ್ನು—"

"ಕವಿತೆ ಬರೀಬೇಕಾದರೆ ಅವನ್ನೆಲ್ಲ ಓದಲೇಬೇಕೂಂತ ನಿಯಮ ಇದೆಯೊ?"

"ಹಾಗೇನಿಲ್ಲ. ಆದರೂ—"

"ನೀವು ಸ್ವತಃ ಕವಿತೆ ಬರೆದಿದೀರೇನು?"

"ಇಲ್ಲವಪ್ಪ!"

"ಹಾಗಾದರೆ ನನ್ನ ಕೃತಿಯ ವಿಷಯ ಮಾತನಾಡೋದಕ್ಕೆ ನಿಮಗೆ ಅಧಿಕಾರವಿಲ್ಲ."

"ಓ!"

"ಶ್ರೀಕಂಠಯ್ಯನವರು ಯಾತಕ್ಕೆ ಅವನ್ನೆಲ್ಲ ನಿಮ್ಮ ಕೈಗೆ ಕೊಟ್ಟರೋ! ಏನೇ ಇರಲಿ, ನೀವು ತಕ್ಷಣ ಮುದ್ರಣ ಶುರುಮಾಡೋದು ವಾಸಿ. ತಿಳೀತೇನ್ರಿ?"

"ನಾನು ಸಂಪಾದಕ ಮಂಡಲದಲ್ಲಿದೀನಲ್ಲ. ಅದಕ್ಕೋಸ್ಕರ ನನ್ನ ಕೈಗೆ ಕೊಟ್ಟಿರ ಬಹುದು ಅಲ್ವೆ?"

"ನಾನೂ ಸಂಪಾದಕ ಮಂಡಲದಲ್ಲಿದೀನಿ. ಮರೀಬೇಡಿ!"

"ಆಗಲಿ ಲಕ್ಷ್ಮೀಕಾಂತ್. ಸುಮ್ನೆ ಯಾತಕ್ಕೆ ವಾಗ್ವಾದ?"

"ಶುರು ಮಾಡಿದ್ದು ನಾನೋ ನೀವೋ..."

ಮುರಲೀಧರ ಮಾತನಾಡಲಿಲ್ಲ. ಉಗುಳು ನುಂಗಿ ಸುಮ್ಮನಾದ. ಆತನನ್ನೆ ನೆಟ್ಟದೃಷ್ಟಿಯಿಂದ ನೋಡುತ್ತ ಲಕ್ಷ್ಮೀಕಾಂತ ಕೇಳಿದ:

"ಮ್ಯಾಗಜೀನಿಗೆ ನೀವೇನು ಬರೀತೀರಾ?"

ಮುರಲೀಧರನ ಮನಸ್ಸು ಅಷ್ಟರಲ್ಲೆ ಮುದುಡಿಕೊಂಡಿತ್ತು.

"ಗೊತ್ತಿಲ್ಲ. ಬರೀದೇ ಇದ್ದರೂ ಇರಬಹುದು."

"ಬರೆದಾಗ ಸ್ವಲ್ಪ ತಂದು ತೋರಿಸಿ."

"ಮೇಸ್ಟ್ರಿಗೆ ಕೊಡ್ತೀನಿ. ಕೇಳಿ ಇಸಕೊಳ್ಳಿ."

"ನಾನು ಓದಿನೋಡಿ ಒಪ್ಪಿಗೆ ಕೊಡದೆ ಅದು ಹ್ಯಾಗೆ ಪ್ರಕಟವಾಗುತ್ತೋ ನೋಡ್ತೀನಿ."

ಮುರಲೀಧರ ತನ್ನ ಹಾದಿ ಹಿಡಿದ. ಆ ಲಕ್ಷ್ಮೀಕಾಂತನೊಡನೆ ಮಾತು ಮುಂದುವರಿಸಲು ಆತ ಇಷ್ಟಪಡಲಿಲ್ಲ.

ಆ ಮಾತುಕತೆಯ ವಿಷಯ ಅಧ್ಯಾಪಕರೊಡನೆ ಪ್ರಸ್ತಾಪಿಸಲೂ ಇಲ್ಲ ಆತ.

ಶ್ರೀಕಂಠಯ್ಯನವರೇ ಒಂದು ಸಂಜೆ ಕವಿತೆಗಳನ್ನೆಲ್ಲ ಓದಿನೋಡಿ ಅಳ್ಳೆ ಬಿರಿಯು ವಂತೆ ನಕ್ಕರು. ಹತ್ತಿರದಲ್ಲಿದ್ದ ಮುರಲೀಧರನನ್ನು ಅವರು ಹುಸಿಮುನಿಸು ತೋರಿ ಸುತ್ತ ಟೀಕಿಸಿದರು:

"ಇಷ್ಟು ಒಳ್ಳೊಳ್ಳೇ ಕೃತಿಗಳು ಬಂದಿವೇಂತ ನೀನು ಹೇಳಲೇ ಇಲ್ಲವಲ್ಲಯ್ಯ! ಆ ಲಕ್ಷ್ಮೀಕಾಂತ ಮಹಾಕವಿಯೇ ಸರಿ!"

ಮುರಲೀಧರ ಮುಗುಳುನಕ್ಕು ಸುಮ್ಮನಿದ್ದ. ಶ್ರೀಕಂಠಯ್ಯನವರೇ ಮುಂದು ವರಿಸಿದರು:

"ಇಂಥಾದ್ದನ್ನೆಲ್ಲ ಅಚ್ಚು ಹಾಕಿದರೆ ನಮ್ಮ ಮುಖಕ್ಕೆ ಮಂಗಳಾರತಿಯಾಗೋದು ಖಂಡಿತ."

"ಆತನದು ಯಾವುದಾದರೂ ಒಂದು ಆರಿಸಿಕೊಂಡರಾಯ್ತು ಸಾರ್."

"ಸರೀನಪ್ಪ. ನೀನೇ ನೋಡು ಯಾವುದನ್ನ ಹಾಕ್ಬಹುದೂಂತ. ಅಲ್ಲಿ ಇಲ್ಲಿ ಸ್ವಲ್ಪ ತಿದ್ದು."

ಪಂದ್ಯಾಟದ ಪಟುಗಳ ಬ್ಲಾಕುಗಳು ಬಂದುವು. ವರದಿಗಳು ಸಿದ್ಧವಾದುವು. ಮುದ್ರಣವೂ ಆರಂಭವಾಯಿತು.

ಆದರೆ ಮುರಲೀಧರನಿನ್ನೂ ತಾನೇನು ಬರೆಯಬೇಕೆಂಬುದನ್ನು ನಿರ್ಧರಿಸಿರಲಿಲ್ಲ.

ಬರೆದರಾದೀತೆಂದು ಎಂದೋ ಭಾವಿಸಿದ್ದ ಮೂರು ನಾಲ್ಕು ಕಥಾ ವಸ್ತುಗಳನ್ನು ಆತ ಮನಸ್ಸಿನಲ್ಲೆ ಮೆಲುಕು ಹಾಕಿದ. ಆದರೂ ಒಂದೂ ಸ್ಪಷ್ಟವಾದ ರೂಪು ತಳೆಯಲಿಲ್ಲ....

ಬಹಳ ದಿನಗಳಿಂದ ಬರೆಯದೆ ಇದ್ದ ದಿನಚರಿ ಪುಸ್ತಕವನ್ನು ಆ ರಾತ್ರೆ ಮುರಲೀಧರ ಕೈಗೆತ್ತಿಕೊಂಡ. ಲಕ್ಷ್ಮೀಕಾಂತನೊಡನೆ ಆದ ಸಂಭಾಷಣೆಯನ್ನು ಬರೆದಿಡುವ ಮನಸ್ಸಾಯಿತು......ಬರೆದು ಮುಗಿಸಿದ ಆ ಪುಟವನ್ನು ಮತ್ತೊಮ್ಮೆ ಓದಿನೋಡಿ ಮೇಲ್ಗಡೆ, 'ನಾನು ಕಂಡ ಕವಿ' ಎಂಬ ಶಿರೋನಾಮೆಯನ್ನು ಆತ ಅದಕ್ಕಿರಿಸಿದ.

ಹಿಂದಿನ ಹಾಳೆಗಳನ್ನು ಮಗುಚುವ ಮನಸ್ಸಾಯಿತು...

ಜಲಪ್ರಳಯವಾಯಿತೇನೋ ಎಂದು ಭ್ರಮೆ ಹುಟ್ಟಿಸುವಂತೆ ಮಳೆ ಸುರಿದಿದ್ದ ಆ ಒಂದು ರಾತ್ರೆ....

ಓದುತ್ತಿದ್ದ ಮುರಲೀಧರನಿಗೆ ಹಾಗೆಯೇ ನಿದ್ದೆ ಬಂತು.

೮

ಮಾರನೆಯ ದಿನ ಭಾನುವಾರ. ರಜಾ. ಅಯ್ಯರ್ ಭೋಜನ ಶಾಲೆಯ ಗಿರಾಕಿಗಳು ಆ ದಿವಸ ಏಳುತ್ತಿದ್ದುದು ಸ್ವಲ್ಪ ತಡವಾಗಿ. ಬೆಳಗ್ಗೆ ಬೇಗನೆ ಹೋದರೆ ಸ್ನಾನಕ್ಕೆ ಅನುಕೂಲವಾಗಿರುತ್ತಿತ್ತು.

ಆ ಕಾರಣದಿಂದ ಮುರಲೀಧರ, ಎದ್ದೊಡನೆಯೆ ತಡಮಾಡದೆ ಹೊರ ಬಿದ್ದ. ಆತನ ಹಾಗೆಯೇ ಬೇಗನೆ ಬಂದಿದ್ದ ಒಬ್ಬಿಬ್ಬರಷ್ಟೇ ಸ್ನಾನದ ಮನೆಯಲ್ಲಿದ್ದರು.

ಬಿಸಿನೀರು ಸುರಿಸಿಕೊಂಡ ಮೈಯಿಂದ ಉಗಿ ಎದ್ದಿತು. ಸ್ನಾನದ ಮನೆಯ ಹೊಗೆಯನ್ನು ಅದು ಇದಿರಿಸಿತು. ಮರದಿಂದ ಮಾಡಿದ್ದ ಬಕೀಟಿನಲ್ಲಿ ನೀರು. ಒಬ್ಬರ ಸ್ನಾನಕ್ಕೆ ಒಂದು ಬಕೀಟು ತುಂಬಾ. ಅಷ್ಟರಿಂದಲೆ ತೃಪ್ತಿಯಾಯಿತು ಮುರಲೀಧರನಿಗೆ.

ಭಾನುವಾರ ಅಯ್ಯರ್ ಭೋಜನ ಶಾಲೆಯಲ್ಲಿ ಊಟ ತಡ. ರಜಾ ದಿನಗಳಲ್ಲಿ ಯಾವಾಗಲೂ ಹಬ್ಬದ ಅಡುಗೆ. ಏನಾದರೊಂದು ಸಿಹಿ ಇರುತ್ತಿತ್ತು, ಇತರ ದಿನಗಳಿಗಿಂತ ಹೆಚ್ಚಾಗಿ. ಆ ಬೆಳಗ್ಗೆ ಬರಿಯ ಒಂದು ಲೋಟ ಕಾಫಿ ಸಾಲುತ್ತಿರಲಿಲ್ಲ. ಒಂದೋ ಎರಡೋ ಇಡ್ಲಿಗಳಿದ್ದರೆ ಚೆನ್ನಾಗಿರುತ್ತಿತ್ತು. ದುಡ್ಡು ಇಲ್ಲದೆ ಇದ್ದಾಗ

ಆ ಸಿರಿವಂತಿಕೆಯನ್ನು ತೋರಲು ಮುರಲೀಧರ ಹೋಗುತ್ತಿರಲಿಲ್ಲ. ಈ ದಿನ ಆತನಲ್ಲಿ ಚಿಲ್ಲರೆ ಹಣವಿತ್ತು. ಮನಸ್ಸೂ ಉಲ್ಲಾಸವಾಗಿತ್ತು. ತಿಂಡಿ ಕಾಫಿ ಎರಡನ್ನೂ ಸ್ವೀಕರಿಸುವ ಇಚ್ಛೆಯಾಯಿತು. ಕ್ರಾಪು ಬಾಚಿಕೊಂಡು ಬರೋಣವೆಂದು ಆತ ಕೊಠಡಿಯ ಕಡೆಗೆ ನಡೆದ.

ಸ್ನಾನಮಾಡುತ್ತಿದ್ದಾಗಲೇ ಮನಸಿನಲ್ಲೊಂದು ನಿರ್ಧಾರವನ್ನು ಆತ ಮಾಡಿದ್ದ: ಆ ದಿನ ಮ್ಯಾಗಜೀನಿಗೋಸ್ಕರ ಏನನ್ನಾದರೂ ಬರೆಯಲೇಬೇಕೆಂದು. ಕಾಫಿ ತಿಂಡಿಯ ಬಳಿಕ ಬರೆಯಲು ಕುಳಿತನೆಂದರೆ....

ಕೊಠಡಿಯ ಹೊರಗೆ ಯಾರೋ ನಿಂತಿದ್ದುದು ದೂರದಿಂದಲೆ ಮುರಲೀಧರನಿಗೆ ಕಾಣಿಸಿತು. ತನಗೋಸ್ಕರವೆ ಇರಬೇಕು. ಬಿಳಿಯ ಜುಬ್ಬ–ಮುಖವೂ ಕಾಣಿಸಿತು. ನಾರಣಪ್ಪ! ಕೊಠಡಿ ಎಲ್ಲಿದೆ ಎಂದು ಕೇಳಿ ತಿಳಿದಿದ್ದ, ಅಷ್ಟೆ. ಈ ದಿನವೆ ಬರುವನೆಂಬುದು ಮಾತ್ರ ಮುರಲೀಧರನಿಗೆ ಗೊತ್ತಿರಲಿಲ್ಲ. ಸ್ನೇಹಿತನ ದರ್ಶನದಿಂದ ಆತನಿಗೆ ಸಂತೋಷವಾಯಿತು.

ನಡಿಗೆಯನ್ನು ತೀವ್ರಗೊಳಿಸುತ್ತ ಮುರಲೀಧರ ಕೊಠಡಿಯನ್ನು ಸಮೀಪಿಸಿದ.

"ಬಂದು ಬಹಳ ಹೊತ್ತಾಯ್ತೆ?"

"ಇಲ್ಲ. ಈಗ್ತಾನೆ ಬಂದೆ."

"ರೂಮು ಪತ್ತೆ ಹಚ್ಚೋದು ಕಷ್ಟವಾಯ್ತೇನು?"

"ಏನೇನೂ ಇಲ್ಲ. ನಿಮ್ಮ ಭೋಜನ ಶಾಲೆ ಬೋರ್ಡು ನೋಡ್ದೆ. ನೇರವಾಗಿ ಇಲ್ಲಿಗ್ಬಂದೆ. ಕಿಟಿಕಿ ತೆರೆದೇ ಇರಿಸಿದೀರಾ. ಕೊಠಡಿ ನಿಮ್ಮದೇಂತ ಗೊತ್ತು ಹಚ್ಚೋದು ಸುಲಭವಾಯ್ತು. ಎಲ್ಲಿಗೆ ಹೋಗಿದೀರಿ ಅಂತ ನಿಮ್ಮ ಪಕ್ಕದ ಕೊಠಡಿಯವರನ್ನ ಕೇಳಿ ತಿಳಿಯೋಣಾಂತಿದ್ದೆ. ಆದರೆ ಅವರು ಯಾರೂ ಎದ್ದೇ ಇಲ್ಲ!"

"ಭಾನುವಾರ ಏಳೋದಕ್ಕೆ ಏನವಸರ ಹೇಳಿ?"

ಬಾಗಿಲು ತೆರೆದು ನಾರಣಪ್ಪನನ್ನು ಒಳಕ್ಕೆ ಕರೆದುದಾಯಿತು. ಪೆಟ್ಟಿಗೆಯನ್ನು ಮುರಲೀಧರ ತೋರಿಸಿದ. ಆದರೆ ಚಾಪೆಯೇ ನಾರಣಪ್ಪನಿಗೆ ಇಷ್ಟವಾಯಿತು.

ಮುರಲೀಧರ ನಕ್ಕು ಹೇಳಿದ:

"ಆ ಪೆಟ್ಟಿಗೆಯ ಮೇಲೆಯೇ ನಮ್ಮ ಸ್ನೇಹಿತ ರಾಮಚಂದ್ರಯ್ಯ ಆ ದಿನ ಕೂತದ್ದು."

"ಓ!"

"ಬಸ್ ಓಡಾಟ ಶುರುವಾಗಿಲ್ವಲ್ಲ. ಹ್ಯಾಗ್ಬಂದ್ರಿ ಇಷ್ಟು ಬೆಳಗ್ಗೆ?"

"ಐದು ಘಂಟೆಗೇ ಎಚ್ಚರವಾಯ್ತು. ನಮ್ಮಣ್ಣನ ಸ್ನೇಹಿತರು ಯಾರೋ ಬಂದಿದ್ದರು. ಅವರನ್ನ ಕಲಾಸಿಪಾಳ್ಯಂ ಬಸ್ ನಿಲ್ದಾಣದ ತನಕ ತಲಪಿಸೋ ಕೆಲಸವಿತ್ತು. ಅಲ್ಲಿಂದ ನೇರವಾಗಿ ನಿಮ್ಮಲ್ಲಿಗೆ ಬಂದ್ಬಿಟ್ಟೆ."

"ಜಟಕಾ ಮಾಡಿದಿರಾ?"

"ಇಲ್ಲ. ನಡ್ಕೊಂಡೇ ಬಂದ್ವಿ. ಬೆಳಗ್ಗೆ ನಡೆಯೋದು ಹಿತವಾಗಿರುತ್ತೆ."

ಅಣ್ಣನ ಸ್ನೇಹಿತರು—ಎಂದಾಗ ನಾರಣಪ್ಪ ಮುರಲೀಧರನ ಮುಖಭಾವವನ್ನೆ ನಿರೀಕ್ಷಿಸಿದ. ಅಲ್ಲಿ ಯಾವ ಬದಲಾವಣೆಯೂ ಕಾಣಿಸಲಿಲ್ಲ.

ತನ್ನಲ್ಲಿದ್ದ ಚಿಲ್ಲರೆ ಆಣೆಗಳನ್ನೆಲ್ಲ ಎತ್ತಿಕೊಳ್ಳುತ್ತ ಮುರಲೀಧರನೆಂದ:

"ಬನ್ನಿ, ನಮ್ಮ ಅಯ್ಯರ್ ಹೋಟಲಿನ ಕಾಫಿ ರುಚಿ ನೋಡುವಿರಂತೆ."

...ಸಿಹಿ ತರಿಸಬೇಕೆಂಬ ಆಸೆ ಇತ್ತು ಮುರಲೀಧರನಿಗೆ. ಆದರೆ ಬಿಲ್ಲು, ತನ್ನಲ್ಲಿದ್ದ ಹಣಕ್ಕಿಂತಲೂ ಹೆಚ್ಚಾಗಬಹುದೆಂದು ಭಯವಾಯಿತು. ಮೊದಲ ಬಾರಿಗೆ ಕೊಠಡಿಗೆ ಬಂದ ಗೆಳೆಯನಿಗೆ ತಾನು ಮಾಡುವ ಸತ್ಕಾರ ಇದೇ ಏನು? ಎಂದು ತನ್ನನ್ನು ತಾನೆ ಮೂದಲಿಸುವಂತೆಯೂ ಆಯಿತು. ಹೋಟೆಲಿನ ಹುಡುಗ ಎದುರು ಬಂದು ನಿಂತಾಗಲೂ ಆತನ ಮನಸ್ಸನ್ನು ಆವರಿಸಿದ್ದುದು ಅನಿಶ್ಚಯತೆಯೇ.

ಮುರಲೀಧರನ ಪರಿಚಯವಿದ್ದ ಹುಡುಗನೆಂದ:

"ಎರಡು ಕಾಫೀನಾ?"

"ತಾಳಪ್ಪ. ಸ್ವಲ್ಪ ತಿಂಡಿ ಬೇಕು."

"ಏನು ತರಲಿ?"

ಯೋಚಿಸಲು ಮೆದುಳಿಗೆ ಅವಕಾಶಕೊಡದೆ ಮುರಲೀಧರ ತೊದಲಿದ.

"ಎರಡು ಕೇಸರಿ ಭಾತ್."

ಹುಡುಗ ಒಳ ಹೋದಂತೆ ನಾರಣಪ್ಪ ಕೇಳಿದ:

"ಯಾಕೆ? ಸಿಹಿ ನಿಮಗೆ ಇಷ್ಟವೆ?"

"ಹಾಗೇನಿಲ್ಲ. ಸುಮ್ನೆ ತರಹೇಳ್ದೆ."

"ನೋಡಿ, ಹೀಗೆಲ್ಲ ಅತಿಥಿ ಸತ್ಕಾರ ಮಾಡಬಾರ್ದು."

"ಸುಮ್ನಿರಿ."

ಕೇಸರಿ ಭಾತ್ ಬಂದು ಅದನ್ನು ಅರ್ಧ ತಿನ್ನುವವರೆಗೂ ಬಿಲ್ಲಿನ ಕಹಿಯೋಚನೆ ಮುರಲೀಧರನನ್ನು ಕಾಡಿತು. ಮುಂದೆ ಅದನ್ನಾತ ಮರೆಯಲೆತ್ನಿಸಿದ.

ಇಡ್ಲಿ—ಕಾಫಿ...

"ನಮ್ಮ ಅಯ್ಯರ್ ಹೋಟ್ಲಲ್ಲಿ ಅವರೇಕಾಳು ಉಪ್ಪಿಟ್ಟು ಪ್ರಸಿದ್ಧ," ಎಂದ ಮುರಲೀಧರ.

"ಮಾಡಿದಾರೇನು?" ಎಂದು ನಾರಣಪ್ಪ ನಕ್ಕು ಕೇಳಿದ.

"ಇಲ್ರಿ. ಅವರೇಕಾಳು ಈಗೆಲ್ಲಿಂದ ಬಂತು?"

"ತಮಾಷೆಗೆ ಕೇಳ್ದೆ. ಅದನ್ನೂ ತರಿಸ್ಬಿಡ್ತೀರೇನೊ ಅಂತ."

ಬಿಲ್ಲು ಬಂತು. ಮಡಚಿದ್ದ ಸದ್ಯಃ. ಬಾಗಿಲ ಬಳಿ ಹೋಗುವವರೆಗೂ ಅದನ್ನು ತೆರೆದು ನೋಡಬೇಕಾದ ಅಗತ್ಯವಿರಲಿಲ್ಲ.

ಹೊರಟಂತೆ ತಾನು ಹಿಂದಾಗುತ್ತ ಮುರಲೀಧರನೆಂದ:

"ನಡೀರಿ. ಬಂದ್ಬಿಟ್ಟೆ."

"ನನಗೆ ಚಿಲ್ಲರೆ ಬೇಕು. ಬಿಲ್ಕೊಡಿ," ಎಂದು ನಾರಣಪ್ಪ ಕೈ ಚಾಚಿದ.

"ದಯವಿಟ್ಟು ನಡೀರಿ."

ನಾರಣಪ್ಪ ಬಾಗಿಲನ್ನು ದಾಟಿದೊಡನೆ ಆತನಿಗೆ ಬೆನ್ನು ಹಾಕಿ, ಅಯ್ಯರ್ ಕುಳಿತಿದ್ದ ಕಡೆ ನಿಂತು, ಚೀಟಿಯನ್ನು ತೆರೆದ ಮುರಲೀಧರ. ಇಬ್ಬರು–ಹತ್ತಾಣೆ. ಕೈ, ಚಿಲ್ಲರೆ ಆಣೆಗಳನ್ನು ಹೊರತಂದು ಎಣಿಸಿತು.

ತುಸು ಕಂಪಿಸಿದ ಧ್ವನಿಯಲ್ಲಿ ಮುರಲೀಧರನೆಂದ:

"ಒಂದಾಣೆ ಕಮ್ಮಿ ಇದೆ ಕಣ್ರೀ. ಆಮೇಲೆ ಕೊಡ್ತೀನಿ."

ಎಂದೂ ಹಾಗೆ ಕೇಳಿದವನಲ್ಲ ಮುರಲೀಧರ. ಅಷ್ಟು ಮೊತ್ತದ ಬಿಲ್ಲನ್ನು ಪಡೆದವನೇ ಅಲ್ಲ ಆತ.

"ಆಗಲಿ. ನೆನಪಿನಿಂದ ತಂದ್ಕೊಡಿ, ಅಷ್ಟೆ," ಎಂದ ಅಯ್ಯರ್.

ಮುರಲೀಧರ ಸರಾಗವಾಗಿ ಉಸಿರಾಡುವಂತಾದುದು ಬೀದಿಗಿಳಿದಾಗ ಮಾತ್ರ.

ಕೊಠಡಿಗೆ ಮರಳಿದ ಬಳಿಕ ನಾರಣಪ್ಪ ಕೇಳಿದ:

"ಇದೇನು ಮುರಲಿ? ಗೋಡೆಗಳನ್ನೆಲ್ಲಾ ಬರಿದಾಗಿಯೇ ಇರಿಸಿದೀರಲ್ಲ?"

"ಯಾರ ಚಿತ್ರ ತೂಗಹಾಕಲಿ ಹೇಳಿ? ಚಕ್ರವರ್ತಿಯವರನ್ನು ತೂಗೋಣವೆಂದರೆ ನಾನು ರಾಜಭಕ್ತನಲ್ಲ. ಪುಢಾರಿಗಳಿಗೆ ಮೊಳೆ ಹೊಡೆಯೋಣವೆಂದರೆ ಅವರಲ್ಲಿ ಸಾಕಷ್ಟು ನಂಬುಗೆ ಇಲ್ಲ."

"ಚೆನ್ನಾಗಿದೆ!"

"ಸಂಬಂಧಿಕರದು ಯಾರದಾದರೂ ಇಡೋಣವೆಂದರೆ ಒಳ್ಳೆಯ ಭಾವಚಿತ್ರವೇ ಇಲ್ಲ..."

"ಹೋಗಲಿ. ನಮ್ಮ ಮನೇಲಿ ಎರಡು ಕ್ಯಾಲೆಂಡರುಗಳಿವೆ. ಒಂದು ತಂದ್ಕೊಡ್ತೀನಿ."

"ಅದರಲ್ಲಿದೆಯೇನೋ ಚಿತ್ರ?"

"ಇಲ್ಲವಪ್ಪ. ಬರೇ ತಾರೀಕು ಪಟ್ಟಿ."

"ಆಗಲಿ."

ಕುಳಿತುಕೊಳ್ಳುತ್ತ ನಾರಣಪ್ಪ, ಅರೆತೆರೆದಿದ್ದ ದಪ್ಪನೆಯ ಪುಸ್ತಕವನ್ನು ನೋಡಿದ. ರಾತ್ರೆ ಅರ್ಧ ಓದಿ ಹಾಗೆಯೇ ಇರಿಸಿದ್ದ ದಿನಚರಿ ಪುಸ್ತಕ.

"ಇಷ್ಟು ದೊಡ್ಡ ನೋಟ್ ಬುಕ್ ಯಾವುದು ಮುರಲಿ ಇದು?"

ಮುರಲೀಧರನೆಂದ:

"ಬೇಡಿ! ಓದ್ಬೇಡಿ!"

"ಓಹೋ! ಸಾಹಿತ್ಯಕೃತೀನೋ?"

ಗೆಳೆಯನ ನಿಷೇಧವನ್ನು ಲೆಕ್ಕಿಸದೆ ಆ ಪುಸ್ತಕವನ್ನೆತ್ತಿಕೊಳ್ಳಲು ನಾರಣಪ್ಪನ ಕೈ

ಮುಂದುವರಿಯಿತು.

ಮೊದಲ ಹಾಳೆಗಳನ್ನು ನೋಡಿ, ಮುಟ್ಟಿದುದು ತಪ್ಪಾಯಿತೆಂಬಂತೆ ಅದನ್ನು ಕೆಳಗಿರಿಸತೊಡಗಿ ನಾರಣಪ್ಪನೆಂದ:

"ಇದು ದಿನಚರಿ."

ಈಗ ಮುರಲೀಧರನೆ ಹೇಳಿದ:

"ಖಾಸಗಿ ದಿನಚರಿಯಲ್ಲ ನಾಣಿ. ನೀವು ಓದಬಾರದ್ದು ನಾನು ಏನು ಬರೆದೇನು?"

"ಓದಲೆ ಹಾಗಾದರೆ?"

"ಹೂಂ."

"ಬೇಡ ಅಂದಿರಿ ಆಗ?"

"ಏನು ತಿಳ್ಕೊತೀರೋ ಅಂತ ನಾಚಿಕೆಯಾಯ್ತು."

"ಸರಿ, ಸರಿ!"

ಮೇಲಿಂದ ಮೇಲೆ ಓದಿದರಾಯಿತೆಂದು ಭಾವಿಸಿದ್ದ ನಾರಣಪ್ಪ-ಕುತೂಹಲದಿಂದ, ಕ್ರಮೇಣ ತೀವ್ರ ಆಸಕ್ತಿಯಿಂದ-ಪ್ರತಿಯೊಂದು ಪುಟವನ್ನೂ ತಿರುವಿ ಹಾಕಿದ.

ಸಂಭಾಷಣೆಯ ಅಗತ್ಯವಿರಲಿಲ್ಲ. ಓದಿಗೆ ತಡೆಯಾಗುವಂತಿತ್ತು ಮಾತು. ಹೊರ ನೋಡುತ್ತ, ನಡುನಡುವೆ ಸ್ನೇಹಿತನ ಕಡೆಗೆ ದೃಷ್ಟಿ ಬೀರುತ್ತ, ಕುಳಿತಿರುವುದೊಂದೇ ಮುರಲೀಧರನ ಪಾಲಿಗಿದ್ದ ಕೆಲಸ.

ಓದುತ್ತಿದ್ದಂತೆ ನಾರಣಪ್ಪನ ಮುಖದ ಮೇಲೆ ಗೆಲುವು ಮೂಡಿತು. ಹುಬ್ಬುಗಳು ಮೇಲೇರಿದುವು ಒಮ್ಮೆ. ಕಣ್ಣುಗಳಲ್ಲಿ ಬೆಳಕು ಕಾಣಿಸಿತು ಮತ್ತೊಮ್ಮೆ. ಒಮ್ಮೆ ಮುಖವೆತ್ತಿ ಆತ ಗೆಳೆಯನನ್ನು ನೋಡಿ ನುಡಿದ:

"ಎಂಥೆಂಥದೆಲ್ಲಾ ಬರೆದಿದೀರಾ! ನನಗೆ ಗೊತ್ತೇ ಇರ್ಲಿಲ್ಲ!"

ಮುರಲೀಧರನ ಮುಖ ನಸುಗೆಂಪೇರಿತು.

"ಎಂಥೆಂಥದು ಬರೆದಿದೀನಿ?"

"ಯಾಕೆ? ಇದು ಕಾವ್ಯ ಕಣ್ರೀ, ಕಾವ್ಯ."

"ಕಾವ್ಯ?"

"ಇನ್ನೇನು? ಬರೇ ಟಿಪ್ಪಣೀಂತ ತಿಳಕೊಂಡಿದೀರಾ? ಅಲ್ಲ, ಇದು ಮಹಾಗೀತ. ಈ ಹತ್ತು ಚೂರು ಒಟ್ಟಾಗಿ ಇರಿಸಿದಾಗ ಸಿಗೋದು ಬದುಕಿನ ಸಮಗ್ರ ಚಿತ್ರ."

"ಸಾಕು, ಬಿಡಿ."

"ಶೋಕದ ಅಲೆಯೂ ಇಲ್ಲಿದೆ. ಸಂತೋಷದ ತೆರೆಯೂ ಇಲ್ಲಿದೆ. ಎಂಥ ಮಂಜುಳ ಧ್ವನಿ ಇದು! ಕೇಳ್ತೀರಾ? ಓದಿ ಹೇಳ್ಲೆ ಈ ಪುಟ? ಬರೆದಿರುವ ನಿಮಗೇ ನೆನಪಿದೆಯೋ ಇಲ್ಲವೋ. ಓದ್ಲಾ?"

"ಬೇಡಿ ಪರಿಹಾಸ್ಯ ಮಾಡ್ಬೇಡಿ."

ಒಂದು ಕ್ಷಣ ಗಂಭೀರವಾಗಿದ್ದು ನಾರಣಪ್ಪನೆಂದ:

"ಪರಿಹಾಸ್ಯ ಯಾಕ್ಮಾಡ್ಲಿ ಮುರಲಿ? ಇವತ್ತು ಇಲ್ಲಿಗೆ ಬಂದು ಇದನ್ನು ನಾನು ಓದ್ತಿರೋದು ಒಂದು ಸುಯೋಗ."

'ಆಯಿತಲ್ಲಿಗೆ' ಎಂಬ ಪದ ನಾಲಗೆಯ ತುದಿವರೆಗೆ ಬಂದರೂ ಅದನ್ನು ಮುರಲೀಧರ ತಡೆ ಹಿಡಿದ. ಆತನ ಪಾಲಿಗೆ ಸಹಪಾಠಿಯ ಆ ಮೆಚ್ಚುಗೆ ಬಲು ದೊಡ್ಡ ವಿಷಯವಾಗಿತ್ತು. ಆದರೂ—

"ನಾನೇನೂ ಸಾಹಿತ್ಯಕೃತಿ ಅಂತ ಅದನ್ನೆಲ್ಲ ಬರೆದಿಲ್ಲ ನಾಣಿ."

"ಒಳ್ಳೇ ಕೆಲಸ ಮಾಡಿದಿರಿ. ಅದಕ್ಕೇ, ಕೃತ್ರಿಮತೆ ಲವಲೇಶವಾದರೂ ಇಲ್ಲ."

"ತೋಚಿದ್ದು ಗೀಚಿದ್ದು ಅನ್ತಾರಲ್ಲ ಹಾಗೆ"

"ಹೀಗೆಯೇ ಗೀಚ್ತಾ ಇರಿ ಯಾವಾಗಲೂ...."

ಹಾಗಾದರೆ ನಾರಣಪ್ಪನ ದೃಷ್ಟಿಯಲ್ಲಿ ತಾನೊಬ್ಬ ಒಳ್ಳೆಯ ಲೇಖಕನೆ?–ಎಂದು ಕೊಂಡ ಮುರಲಿ. ಆದರೆ ನಿಜಸಂಗತಿ ಏನಿತ್ತು?

"ನೀವು ಹೀಗಂತೀರಾ. ಕಾಲೇಜು ಮ್ಯಾಗಜೀನಿಗೆ ಏನಾದರೂ ಬರೆಯೋಣ ಅಂತ ಎಷ್ಟೋ ದಿವಸದಿಂದ ಪ್ರಯತ್ನಿಸ್ತಿದೀನಿ. ಒಂದೇ ಒಂದು ಕತೆ ಬರೆಯೋದು ನನ್ನಿಂದಾಗಿಲ್ಲ."

ಆ ಧ್ವನಿಯಲ್ಲೂ ಪ್ರಾಮಾಣಿಕತೆಯೇ ಇದ್ದುದನ್ನು ನಾರಣಪ್ಪ ಕಂಡ. ಮುರಲೀಧರನ ಸಂಕಟವನ್ನು ಹೇಗೆ ವಿವರಿಸಬೇಕೆಂಬುದೇ ತಿಳಿಯದೆ ಹೋಯಿತು ಆತನಿಗೆ. ಟಿಪ್ಪಣಿ ಪುಸ್ತಕದ ತೆರೆದ ಹಾಳೆಗಳ ಮೇಲೊಮ್ಮೆ ದೃಷ್ಟಿ ಹರಿಸಿ ಆತನೆಂದ:

"ಏನು ನೀವು ಹೇಳ್ತಿರೋದು? ಬೇರೆ ಹೊಸದಾಗಿ ಯಾಕೆ ಬರೀಬೇಕು ನೀವು? ಇದರಿಂದಲೇ ಯಾವುದಾದರೊಂದನ್ನು ಆರಿಸಿಕೊಡಿ."

"ಇದರಿಂದಲೇ?"

"ಹೂಂ. ಉದಾಹರಣೆಗೆ ಈ 'ದೇವತೆಗಳ ಕಣ್ಣೀರು' ಇದು ಸೊಗಸಾದ ಸಣ್ಣ ಕಥೆ."

"ಸಣ್ಣ ಕಥೆ? ಅದನ್ನು ಬರೆದಿರೋ ದಿನಾಂಕ ನೋಡಿ ನಾಣಿ. ಅದೊಂದು ಅನುಭವ."

"ಅನುಭವಿಸಿ ಬರೆದದ್ದು. ಅದಕ್ಕೇ ಇಷ್ಟು ಚೆನ್ನಾಗಿದೆ. ದಿನಾಂಕ ಆಗಲೇ ನೋಡಿದೀನಿ. ಆ ರಾತ್ರೆ ನನಗೂ ನೆನಪಿದೆ. ಆದರೆ ಮುರಲಿ ಮತ್ತು ನಾಣಿ ಎಂಬ ಇಬ್ಬರು ಆಗ ಸ್ನೇಹಿತರಾಗಿರ್ಲಿಲ್ಲ ಅಷ್ಟೆ!"

ಕಂಠ ಬಿಗಿದು ಬಂದು ಮಾತನಾಡುವುದಾಗಲಿಲ್ಲ ಮುರಲೀಧರನಿಂದ. ಆತ ಕೆಲ ನಿಮಿಷಗಳ ಕಾಲ ಸುಮ್ಮನಿದ್ದ.

ಬಳಿಕ, ನಾರಣಪ್ಪ ಕೆಳಗಿರಿಸಿದ ಟಿಪ್ಪಣಿ ಪುಸ್ತಕವನ್ನು ತಾನೆತ್ತಿಕೊಂಡ. ಹಾಳೆಗಳನ್ನು ತೆರೆದ. 'ದೇವತೆಗಳ ಕಣ್ಣೀರು' ಎಂಬ ತಲೆಕಟ್ಟಿನ ಕೆಳಗಿದ್ದ ಸಾಲುಗಳನ್ನು

ಓದಿದ.

ಬರೆದುದು ಚೆನ್ನಾಗಿತ್ತೆಂದು ಮನವರಿಕೆಯಾದರೂ ಮೆಲ್ಲನೆ ತಲೆ ಎತ್ತಿ ನಾರಣಪ್ಪನನ್ನು ನೋಡಿ ಆತ ಕೇಳಿದ:

"ಇದನ್ನು ಕೊಡೋಣ ಅಂತೀರಾ?"

"ಹೌದು. ಇದು ಚೆನ್ನಾಗಿದೆ. ಯಾವುದನ್ನು ಬೇಕಾದರೂ ಕೊಡಬಹುದು. ಸ್ವಲ್ಪ ಹೆಚ್ಚು ಕಡಮೆ ಮಾಡಿದರಾಯ್ತು. ಕತೆಯೋ ಪ್ರಬಂಧವೋ ಆಗ್ತದೆ. ಇದರಲ್ಲಂತೂ ಒಂದಕ್ಷರ ಕೂಡ ಬದಲಾಯಿಸಬೇಕಾದ್ದಿಲ್ಲ."

"ಆಗಲಿ, ಹಾಗೇ ಮಾಡೋಣ."

ನಾರಣಪ್ಪ ನಸುನಕ್ಕು ಅಂದ:

"ಇವತ್ತು ಹಾಗಾದರೆ ನಿಮಗೇನೂ ಕೆಲಸವಿಲ್ಲ. ಪ್ರತಿ ಮಾಡೋದು ತಾನೆ? ಸಾಯಂಕಾಲವಿದೆ, ರಾತ್ರೆ ಇದೆ. ಹೊರಡಿ. ಇವತ್ತು ಊಟ ನಮ್ಮನೇಲಿ."

"ಬೇಡ ನಾಣಿ. ಹ್ಯಾಗೂ ಬಂದಿದೀರಾ, ನನ್ನ ಅತಿಥಿಯಾಗಿ ಇಲ್ಲೇ ಇದ್ಬಿಡಿ."

"ಅದು ಇನ್ನೊಂದು ದಿವಸ. ಈ ದಿನ ನೀವು ಬರಲೇ ಬೇಕು."

ಮುರಲೀಧರ ಒಪ್ಪದೆ ಅನ್ಯ ಗತಿ ಇರಲಿಲ್ಲ.

ಬೆಳಗ್ಗೆ ಅಷ್ಟು ದೂರ ಗೆಳೆಯ ನಡೆದು ಬಂದುದು ಆತನಿಗೆ ನೆನಪಿತ್ತು. ಪುನಃ ಈಗ ಕಾಲ್ನಡಿಗೆ ಸಾಧ್ಯವಿರಲಿಲ್ಲ. ಬಸ್ ಎಂದೊಡನೆ ಮತ್ತೆ ಅತ್ಯಗತ್ಯವಾದ ಹಣ. ಅದನ್ನೆತ್ತಿಕೊಳ್ಳಲು ಆತ ಪೆಟ್ಟಿಗೆಯನ್ನು ತೆರೆದಂತೆ ನಾರಣಪ್ಪನೆಂದ:

"ದುಡ್ಡು ನನ್ನ ಹತ್ತಿರ ಇದೆ. ತೆಗೀಬೇಡಿ."

"ಛೆ! ಛೆ!"

"ಛೆನೂ ಇಲ್ಲ, ಛಿನೂ ಇಲ್ಲ. ದಯವಿಟ್ಟು ನನ್ನ ಮಾತು ಕೇಳಿ,"

ನಿರುತ್ತರನಾದ ಮುರಲೀಧರ.

ಬಸ್ ಸ್ಟಾಪಿನೆಡೆಗೆ ಅವರು ನಡೆದಂತೆ ನಾರಣಪ್ಪ ಸಣ್ಣನೆ ನಗತೊಡಗಿದ.

"ಯಾಕೆ ನಗ್ತಿದೀರಾ?"

"ಹೆಣ್ಣು ಕೊಡಲು ಬಂದ ಮಾವ– ಅಂತ ಒಂದು ಅಧ್ಯಾಯ ಬರೆದಿದೀರಲ್ಲ. ಅದು ನೆನಪಾಯ್ತು."

"ಓ! ಅದೇ?"

"ಆಮೇಲೆ ಮಾವ ಸಿಗಲೇ ಇಲ್ವೇನು?"

"ಒಂದೆರಡು ಸಾರೆ ಕಣ್ಣಿಗೆ ಬಿದ್ದಿದ್ದ. ಪರಿಚಯ ಇಲ್ಲದವರ ಹಾಗೆ ನಾನು ಸುಮ್ನಿದ್ದೆ. ಆತನೂ ಮಾತಾಡಿಸ್ಲಿಲ್ಲ. ನಿಷ್ಪ್ರಯೋಜಕ ಹುಡುಗ ಅಂತ ಭಾವಿಸಿರ್ಬೇಕು."

"ನಿಮಗೆ ಹೆಣ್ಣು ಸಿಗದೇ ಹೋದರೂ ನಮ್ಮಿಬ್ಬರ ಪರಿಚಯಕ್ಕೆ ಕಾರಣನಾದನಲ್ಲ ಅಷ್ಟು ಸಾಕು!"

.. ನಾರಣಪ್ಪನ ಮನೆಯಲ್ಲಿ ಆತನ ತಾಯಿ ಮುರಲೀಧರನನ್ನು ಪ್ರೀತಿಯಿಂದ ಸ್ವಾಗತಿಸಿದರು:

"ಬಾ ಮಗು! ಬಾ..."

ಆ ಒಲವಿನ ಜಲಸೇಚನದಿಂದ ಮನಸ್ಸು ನಿರ್ಮಲವಾದಂತೆ ಮುರಲಿಗೆ ಭಾಸ ವಾಯಿತು.

೯

ಶ್ರೀಕಂಠಯ್ಯನವರೆಂದರು:

"ನೀನು ಬರೆದಿರೋದು ಚೆನ್ನಾಗಿದೆ ಕಣೋ. ನಿಜವಾಗಿಯೂ ಚೆನ್ನಾಗಿದೆ: ಚಿಕ್ಕದಾದರೂ ಕಲಾತ್ಮಕವಾಗಿದೆ. ಕಥೆಯಲ್ಲ–ಒಂದು ಚಿತ್ರ. ಅಲ್ವೆ?"

ಮುರಲೀಧರನೆಂದ:

"ಹೌದು ಸಾರ್. ಒಂದು ಚಿತ್ರ."

"ಆದರೆ ಓದುವಾಗ ಒಳ್ಳೆಯ ಕಥೆ ಕೊಡುವ ರಸಾನುಭವವೇ ಇದರಿಂದಲೂ ಆಗುತ್ತೆ. ಅದೀಗ ಒಳ್ಳೇ ಬರೆವಣಿಗೆಯ ಲಕ್ಷಣ. ನಿಜವಾಗಿ ನೋಡಿದರೆ ನೀನು ಕಲಾವಿಭಾಗದಲ್ಲಿರಬೇಕಾಗಿತ್ತು. ವಿಜ್ಞಾನದ ವಿದ್ಯಾರ್ಥಿಯಾಗಿದ್ದು ಇದನ್ನು ಬರೆ ದಿರೋದು ನನಗೆ ಹೆಮ್ಮೆಯ ವಿಷಯ."

ಹೃದಯ ತುಂಬಿಬಂದಂತಾಗಿ ಮುರಲೀಧರನೆಂದ:

"ಏನಿದ್ದರೂ ಗುರುಕೃಪೆ ಸಾರ್."

ಶ್ರೀಕಂಠಯ್ಯ ನಿಟ್ಟುಸಿರು ಬಿಟ್ಟು ಅಂದರು:

"ಏನು ಮಾಡೋಣ ಹೇಳು? ಗುರುಕೃಪೆ ಅನ್ನೋದು ಹಳೇ ಕಾಲದ ಒಳ್ಳೆಯ ಪ್ರಯೋಗ. ಈಗ ಅದಕ್ಕೆ ಅರ್ಥವೂ ಇಲ್ಲ, ಬೆಲೆಯೂ ಇಲ್ಲ. ಪ್ರತಿ ತರಗತಿಯೂ ದೊಂಬಿಯೇ. ಎಲ್ಲ ವಿದ್ಯಾರ್ಥಿಗಳ ಮುಖ ಪರಿಚಯ ಕೂಡ ನಮಗಿರೋದಿಲ್ಲ. ವೈಯಕ್ತಿಕವಾಗಿ ನಾವು ಸುಖ ದುಃಖ ವಿಚಾರಿಸೋದು ಎಲ್ಲಿ ಬಂತು? ಈಗ ಪಾಠ ಹೇಳೋದು ಹೆಣ ಚಾಕರಿನಪ್ಪಾ. ಅಧ್ಯಾಪಕರಿಗೂ ಉತ್ಸಾಹವಿಲ್ಲ, ವಿದ್ಯಾರ್ಥಿಗಳಿಗೂ ಉತ್ಸಾಹವಿಲ್ಲ. ಇಷ್ಟಿದ್ದೂ ಯಾವನಾದರೂ ಪ್ರತಿಭಾಶಾಲಿ ವಿದ್ಯಾರ್ಥಿ ಮುಂದಕ್ಕೆ ಬಂದರೆ ಅದು ಆತನ ಸ್ವಸಾಮರ್ಥ್ಯದಿಂದಲೇ ಹೊರತು ಗುರುಕೃಪೆಯಿಂದಲ್ಲ..."

ಅವರ ಧ್ವನಿ ಭಾರವಾಗಿತ್ತು. ಆಡಿದ ಒಂದು ಮಾತೂ ಹಗುರವಾಗಿರಲಿಲ್ಲ. ಅದನ್ನೆಲ್ಲ ಅರ್ಥಮಾಡಿಕೊಳ್ಳುತ್ತ ನಿಂತ ಮುರಲೀಧರನಿಗೆ ತಾನು ಏನು ಉತ್ತರ ಹೇಳ ಬೇಕೆಂಬುದೇ ತೋಚಲಿಲ್ಲ.

ಶಿಷ್ಯನನ್ನು ನೆಟ್ಟ ದೃಷ್ಟಿಯಿಂದ ನೋಡುತ್ತ ಕುಳಿತ ಅಧ್ಯಾಪಕರೇ ನಸುನಕ್ಕು ಅಂದರು:

"ನಿನ್ನ ಹತ್ತಿರ ಇದನ್ನೆಲ್ಲ ಹೇಳಬಾರದು ಕಣಯ್ಯ. ಕತೆ ಬರೆದು ಬಿಟ್ಟೀಯೆ ಎಲ್ಲಾದರೂ!"

"ಇಲ್ಲ ಸಾರ್," ಎಂದ ಮುರಲೀಧರ, ತಾನೂ ನಗುತ್ತ...

...ಪರೀಕ್ಷೆ ಸಮೀಪಿಸಿತೆಂದು ವಿದ್ಯಾರ್ಥಿಗಳು ಭರದಿಂದ ಸಿದ್ಧತೆ ನಡೆಸಿದರು. ಕಾಲೇಜು ಪತ್ರಿಕೆಯ ಮುದ್ರಣವೂ ವೇಗವಾಗಿ ಸಾಗಿತು.

ಮ್ಯಾಗಜೀನಿನ ಕೆಲಸ ಪ್ರತಿಯೊಂದೂ ಸಾಂಗವಾಗಿ ನೆರವೇರಿತು ಎನ್ನುವ ಹಾಗಿರಲಿಲ್ಲ. ಲಕ್ಷ್ಮೀಕಾಂತನ ಪ್ರಕರಣ ದೊಡ್ಡ ಸ್ವರೂಪವನ್ನೆ ತಳೆಯುವ ಚಿಹ್ನೆಗಳು ಕಂಡುವು.

ಆತ ಖಡಾಖಂಡಿತವಾಗಿ ಮಹದೇವಯ್ಯನೊಡನೆ ಅಂದ:

"ಪ್ರೆಸ್ಸಿಗೆ ಹೋಗೋಕ್ಮುಂಚೆ ಲೇಖನಗಳನ್ನೆಲ್ಲ ನಾನು ಓದಿ ನೋಡಲೇಬೇಕು. ನಾನೂ ಸಂಪಾದಕ. ನನ್ನ ಸಮ್ಮತಿ ಇಲ್ದೆ ಯಾವ ಕೆಲಸವನ್ನೂ ನೀವು ಮಾಡೋ ಹಾಗಿಲ್ಲ."

ಪಂದ್ಯಾಟದ ಪಟುಗಳ ಭಾವಚಿತ್ರಗಳೊಡನೆ ಬ್ಲಾಕ್ ತಯಾರಿಸುವವರಲ್ಲಿಗೆ ಹೊರಟಿದ್ದ ಮಹದೇವಯ್ಯನೆಂದ:

"ಲೇಖನಗಳ ಜವಾಬ್ದಾರಿ ನನ್ನದಲ್ಲಪೋ. ಏನಿದ್ದರೂ ಮುರಲೀಧರ್‌ರನ್ನು ಕೇಳಿ."

ಲಕ್ಷ್ಮೀಕಾಂತ ಮುರಲೀಧರನನ್ನು ಹುಡುಕಿಕೊಂಡು ಹೋಗಿ ಕೇಳಿದ:

"ನನ್ನ ಕವಿತೆಗಳು ಏನಾದುವು?"

"ಪ್ರಧಾನ ಸಂಪಾದಕರು ಒಂದನ್ನು ಆರಿಸಿಕೊಟ್ಟಿದ್ದಾರೆ. ಪ್ರೆಸ್ಸಿಗೆ ಹೋಗಿದೆ."

"ಉಳಿದುದನ್ನು ಕಸದ ಬುಟ್ಟಿಗೆ ಎಸೆದರೋ?"

"ಇಲ್ಲ. ನನ್ನಲ್ಲಿವೆ. ಕೊಡ್ಲೇನು?"

"ಬೇಡಿ. ನೀವೇ ಇಟ್ಕೊಳ್ಳಿ. ಅಚ್ಚುಹಾಕದೇ ಇದ್ದರೆ ನನಗೇನೂ ನಷ್ಟವಾಗೋದಿಲ್ಲ. ಇಂಥದು ಸಾವಿರ ಬರೆದೇನು."

"ಸರಿ."

ಹುಬ್ಬು ಕುಣಿಸಿ ಲಕ್ಷ್ಮೀಕಾಂತ ಕೇಳಿದ:

"ನೀವೇನು ಬರೆದಿರಿ?"

"ಏನೋ ಒಂದು ಬರೆದೆ ಕಣ್ರಿ. ಚೆನ್ನಾಗಿಲ್ಲ."

"ಶ್ರೀಕಂಠಯ್ಯನವರು ಬೇಡ ಅಂದರೋ?"

ತುಂಟತನದ ಉತ್ತರ ಕೊಡು ಎಂದಿತು ಮುರಲೀಧರನ ಮನಸ್ಸು. ಆತನೆಂದ:

"ಇಲ್ಲ. ಅಚ್ಚು ಹಾಕೋಣ, ಸಂಪಾದಕರಾದ ತಪ್ಪಿಗಾದರೂ ಒಬ್ಬೊಬ್ಬರದು ಒಂದೊಂದು ಇದ್ದರೆ ವಾಸಿ–ಅಂದರು."

ಬಾಣ ನಾಟಿತು. ಲಕ್ಷ್ಮೀಕಾಂತ ಕೆರಳಿ ನುಡಿದ:

"ಕವಿತೇನ ಸೇರಿಸ್ಕೊಂಡಿರೋದು ನನ್ನ ಮೇಲಿನ ದಾಕ್ಷಿಣ್ಯದಿಂದ ಅನ್ನಿ. ಆ ಕವಿತೆಗೆ ಸ್ವಂತದ ಯೋಗ್ಯತೆ ಏನೂ ಇಲ್ಲ ಹಾಗಾದರೆ."

"ಅದೆಲ್ಲ ನನಗೆ ಗೊತ್ತಿಲ್ಲ. ಆ ವಿಚಾರ ನೀವು ಅಧ್ಯಾಪಕರನ್ನೆ ಕೇಳಬಾರ್ದೆ?"

"ಕೇಳದೆ ಬಿಡ್ತೀನೀಂತ ಅಂದ್ಕೊಂಡಿರೊ?"

....ಶ್ರೀಕಂಠಯ್ಯನವರಿಗೆ ರೇಗಿತು. ಅವರು ಲಕ್ಷ್ಮೀಕಾಂತನನ್ನು ಉದ್ದೇಶಿಸಿ ಅಂದರು:

"ಏನಪ್ಪ ಸಮಾಚಾರ? ಏನು ವಿಶೇಷ? ವಿದ್ಯಾರ್ಥಿಯಾಗಿರೋದು ನೀನೋ ನಾನೋ?"

ಅಷ್ಟಕ್ಕೆಲ್ಲ ಅಂಜುವವನಾಗಿರಲಿಲ್ಲ ಕವಿ ಲಕ್ಷ್ಮೀಕಾಂತ.

"ನೀವು ಹೀಗೆಲ್ಲ ಫೇವರಿಟ್ ತೋರಿಸೋದು ತಪ್ಪು, ಸಾರ್."

"ಫೇವರಿಟ್ ಅಲ್ಲ ಕಣಯ್ಯ. ಫೇವರ್ ಅನ್ನು, ಅಥವಾ ಫೇವರಿಟಿಸಂ ಅನ್ನು. ಪಕ್ಷಪಾತ ಅಂತ ಸ್ವಚ್ಛವಾಗಿ ಹೇಳಿದರೆ ಮತ್ತಷ್ಟು ವಾಸಿ."

"ಥ್ಯಾಂಕ್ಸ್ ಸಾರ್. ತಪ್ಪಾಗಿದ್ದರೆ ತಿದ್ದಿಕೊಳ್ಳೋಣ. ಅದಕ್ಕೇನು? ಆದರೆ ನೀವು ಈ ರೀತಿ ಮಾಡೋದು ಮಾತ್ರ ಸರಿಯಲ್ಲ."

"ಏನಯ್ಯ ಅದು, ಸರಿ–ತಪ್ಪು?"

"ಇದು ಸರ್ವಾಧಿಕಾರ ಸಾರ್."

ಆತ್ಮೀಯತೆಗೆ ಅವಕಾಶವಿಲ್ಲವೆಂದು ಅಧ್ಯಾಪಕರು ಬೇಗನೆ ಬಹು ವಚನಕ್ಕೆ ತಿರುಗಿದರು:

"ನಿಮ್ಮ ಕವಿತೆಗಳನ್ನೆಲ್ಲ ಅಚ್ಚು ಹಾಕಿಸ್ಬೇಕಾಗಿತ್ತೂಂತ ತಾನೆ ನೀವು ಹೇಳೋದು?"

ಲಜ್ಜೆಗೊಳ್ಳುವ ಅಭ್ಯಾಸವೆಲ್ಲ ಲಕ್ಷ್ಮೀಕಾಂತನಿಗಿರಲಿಲ್ಲ.

"ಹೌದು."

"ಒಂದು ಬಿಟ್ಟು ಉಳಿದದ್ದೆಲ್ಲ ಹಾಗೇ ಇವೆ. ನೋಡೀಪ್ಪ. ಅವನ್ನೆಲ್ಲ ವಿಶ್ವ ವಿದ್ಯಾನಿಲಯದ ಪ್ರಬುದ್ಧ ಕರ್ಣಾಟಕ ಪತ್ರಿಕೆಗೆ ಕಳಿಸೋದೇ ಯೋಗ್ಯ."

"ಅದಕ್ಕೆ ನಿಮ್ಮ ರೆಕಮೆಂಡ್ ಬೇಕಾಗಿಲ್ಲ ಸಾರ್."

"ರೆಕಮೆಂಡ್ ಅಲ್ಲ, ರೆಕಮೆಂಡೇಷನ್. ಶಿಫಾರಸು ಅಂತ."

ಲಕ್ಷ್ಮೀಕಾಂತ ಸ್ವರವೇರಿಸಿ ನುಡಿದ:

"ನನ್ನ ಸಂಪಾದಕ ಸ್ಥಾನಕ್ಕೆ ರಾಜಿನಾಮೆ ಕೊಡ್ತೀನಿ."

"ಅದರಿಂದ ನಮ್ಮ ಸಂಪಾದಕ ಮಂಡಲಕ್ಕೆ ತುಂಬಾ ನಷ್ಟವಾಗೋದೇನೊ ನಿಜ.

ಆದರೂ ಅನಿವಾರ್ಯವಾಗಿ ನಿಮ್ಮ ರಾಜಿನಾಮೇನ ಸ್ವೀಕರಿಸ್ತೀವಿ. ನಿಮ್ಮ ಹೆಸರಾದರೂ ಪತ್ರಿಕೆಯ ಮೇಲೆ ಇರೋಕೆ ಸಮ್ಮತಿ ಕೊಡ್ತೀರಿ ತಾನೆ?"

"ಇಲ್ಲ, ಕೂಡದು!"

"ಆಗಲಿ, ನಮ್ಮ ದೌರ್ಭಾಗ್ಯ..."

ಅಷ್ಟು ಹೇಳಿದ ಶ್ರೀಕಂಠಯ್ಯ, ತಾಳ್ಮೆಯಿಂದಿರಲು ಯತ್ನಿಸುತ್ತ, ಬಾಗಿಲಿನತ್ತ ಬೊಟ್ಟು ಮಾಡಿ, ಹೊರಹೋಗುವಂತೆ ಸಂಜ್ಞೆಯಿಂದಲೆ ಸೂಚಿಸಿದರು ಲಕ್ಷ್ಮೀಕಾಂತನಿಗೆ.

ಆಗಲೂ ಆತನೆಂದ:

"ಇದು ಬಹಳ ಸೀರಿಯಸ್ ವಿಷಯ ಸಾರ್."

ಶ್ರೀಕಂಠಯ್ಯ ಗುಡುಗಿದರು:

"ಗೊತ್ತು ಕಣಯ್ಯ. ಗೆಟೌಟ್!"

ಅಷ್ಟಕ್ಕೆ ಸುಮ್ಮನಾಗಲಿಲ್ಲ ಲಕ್ಷ್ಮೀಕಾಂತ. ರಾಜಿನಾಮೆ ಪತ್ರವನ್ನು ಸಲ್ಲಿಸಿದ ಬಳಿಕ, ಕಾಲೇಜಿನ ಪ್ರಿನ್ಸಿಪಾಲರಿಗೂ ದೀರ್ಘವಾಗಿ ದೂರು ಕೊಟ್ಟ. ಅದು ಮೂರು ನಾಲ್ಕು ಹಾಳೆಗಳಷ್ಟಿದ್ದ ಆರೋಪ ಪತ್ರಿಕೆ.

ಪ್ರತಿನಿತ್ಯದಂತೆ ಏಕಪ್ರಕಾರವಾಗಿ ಶಾಂತವಾಗಿರುವುದರ ಬದಲು, ಶಿಕ್ಷಕ ವೃಂದದ ಸರೋವರದಲ್ಲಿ ಒಂದೆರಡು ದಿನಗಳ ಕಾಲ ಸಣ್ಣ ಪುಟ್ಟ ತೆರೆಗಳನ್ನೆಬ್ಬಿಸಿತು ಆ ಫಿರ್ಯಾದು. ಸ್ವತಃ ಲಕ್ಷ್ಮೀಕಾಂತನ ಪ್ರಚಾರದಿಂದಾಗಿ ವಿದ್ಯಾರ್ಥಿಗಳ ಮಧ್ಯದಲ್ಲೂ ಅಲ್ಲಿ ಇಲ್ಲಿ ಆ ವಿಷಯವನ್ನು ಕುರಿತು ವಾದ ವಿವಾದಗಳಾದುವು.

ಅಧ್ಯಾಪಕರು ಒಬ್ಬರನ್ನೊಬ್ಬರು ಕೇಳಿದರು:

"ಯಾರ ಮಗನಯ್ಯ ಆತ?"

ಮಗನಿಂದಾಗಿ ತಂದೆಯ ಹೆಸರೂ ಪ್ರಖ್ಯಾತವಾಯಿತು.

ಸರಕಾರದ ಹಿರಿಯ ಹುದ್ದೆಯಲ್ಲಿದ್ದು ನಿವೃತ್ತರಾದವರೊಬ್ಬರ ಸುಕುಮಾರ.

"ಆತನೆ? ಬರೇ ಸಾಧೂಂತ ಕಾಣುತ್ತಲ್ಲ ಆ ಪ್ರಾಣಿ...."

"ತಂದೆ ಸಾಧುವಾದರೆ ಮಗನೂ ಹಾಗೆಯೇ ಇರಬೇಕೆಂಬ ನಿಯಮವಿದೆ ಯೇನು?"

ಲಕ್ಷ್ಮೀಕಾಂತ ಮಾತ್ರ ಹೋದ ಹೋದಲ್ಲೆಲ್ಲ ಜಾಹೀರು ಮಾಡಿದ:

"ಶ್ರೀಕಂಠಯ್ಯನನ್ನು ಡಿಸ್‌ಮಿಸ್ ಮಾಡ್ತಾರೆ, ನೋಡ್ಕೊಳ್ಳಿ."

ಆದರೆ ಆತನಿಗೆ ಆಶಾಭಂಗವಾಯಿತು. ಕಾಲೇಜಿನ ಪ್ರಿನ್ಸಿಪಾಲರು ಆತನನ್ನು ಕರೆದು ವಿಚಾರಣೆ ನಡೆಸಿದ ರೀತಿಯೇ ಬೇರೆಯಾಗಿತ್ತು. ತರಗತಿಯ ಪ್ರಬಂಧವನ್ನು ತಿದ್ದುವಂತೆ, ದೂರಿನಲ್ಲಿದ್ದ ನೂರು ತಪ್ಪುಗಳ ಮೇಲೆ ಅವರು ಗುಣಾಕಾರದ ಗುರುತು ಹಾಕಿದರು. ತರಗತಿಯ ಪರೀಕ್ಷೆಯಲ್ಲಿ ಆತನಿಗೆ ದೊರೆತಿದ್ದ ಅಂಕಗಳ ವಿವರ ತರಿಸಿ ಕೊಂಡು "ಯಾಕೆ ಇಷ್ಟು ಕಡಮೆ?" ಎಂದರು. ಕೊನೆಯದಾಗಿ ಆತನ ಕವಿತೆಗಳನ್ನೂ

ಓದಿ ನೋಡಿ, "ಈ ಹೊಲಸನ್ನು ನೀನೇ ಏನಯ್ಯ ಬರೆದೋನು?" ಎಂದು ಕೇಳಿದರು.

"ಸೆಪ್ಟೆಂಬರಿನಲ್ಲಿ ಪರೀಕ್ಷೆಗೆ ಕಟ್ಟೋಣಾಂತ ಮಾಡಿದೀಯೋ? ಹೋಗು. ಓದ್ಕೊ. ಇನ್ನೊಮ್ಮೆ ನಿನ್ನ ವಿಷಯ ಏನಾದರೂ ಮಾತು ಕೇಳಿತೂಂದ್ರೆ ಹುಷಾರ್!" ಎಂದು ಎಚ್ಚರಿಕೆ ಇತ್ತರು.

ಮುಖಮುದುಡಿಸಿಕೊಂಡು ಲಕ್ಷ್ಮೀಕಾಂತ ಮನೆಗೆ ಹೋದ. ಎರಡು ದಿನ ಕಾಲೇಜಿನ ಕಡೆಗೆ ಬರಲಿಲ್ಲ. ಮೂರನೆಯ ದಿನ ಬಂದಾಗ, ಕುತೂಹಲಿಗಳಾಗಿದ್ದ ಸಹಪಾಠಿಗಳಿಗೆ ಆತನೆಂದ:

"ನನ್ನ ದೂರು ವೈಸ್ ಛಾನ್ಸಲರ್ ಹತ್ತಿರಕ್ಕೆ ಹೋಗಿದೆ. ತನಿಖೆಗೆ ಕಮೀಶನ್ ನೇಮಿಸ್ಬಹುದು..."

ಒಬ್ಬ ವಿದ್ಯಾರ್ಥಿ ವ್ಯಂಗ್ಯೋಕ್ತಿಯನ್ನಾಡಿದ:

"ಪ್ರಚಂಡ ಕಣಯ್ಯ ನೀನು."

"ಅಲ್ದೆ ಇನ್ನೇನು?" ಎಂದ ಲಕ್ಷ್ಮೀಕಾಂತ, ಆತ ಆಡಿದುದು ಹೊಗಳಿಕೆ ಎಂದೇ ಭಾವಿಸಿ.

ಆ ಸಂಪಾದಕನ ರಾಜಿನಾಮೆ ಪತ್ರ ಮಾತ್ರ ಸ್ವೀಕೃತವಾಯಿತು.

ಸಂಪಾದಕ ಮಂಡಲದಲ್ಲಿ ಲಕ್ಷ್ಮೀಕಾಂತನ ಹೆಸರಿಲ್ಲದೆಯೇ ಕಾಲೇಜ್ ಮ್ಯಾಗ ಜೀನ್ ಪ್ರಕಟವಾಯಿತು.

ಸಂಕಲನ–ಮುದ್ರಣ ಎರಡೂ ಸೊಗಸಾಗಿದ್ದುವು.

ಅಧ್ಯಾಪಕ ವೃಂದದಲ್ಲಿ ಪ್ರಧಾನ ಸಂಪಾದಕ ಶ್ರೀಕಂಠಯ್ಯನವರನ್ನು ಹೊಗಳು ವವರೇ ಎಲ್ಲರೂ.

ಅವರು ಮಾತ್ರ ನಿರ್ಧಾರದ ಧ್ವನಿಯಲ್ಲಿ ಪ್ರತಿಯೊಬ್ಬರೊಡನೆಯೂ ಒಂದೇ ಮಾತನ್ನು ಅಂದರು:

"ಈ ಪ್ರಶಂಸೆ ಸಲ್ಲಬೇಕಾದ್ದು ಹುಡುಗರಿಗೆ–ಅದರಲ್ಲೂ ಆ ಮುರಲೀಧರನಿಗೆ."

'ದೇವತೆಗಳ ಕಣ್ಣೀರು' ಲೇಖನವನ್ನೋದಿದವರೆಲ್ಲರೂ ನಾನಾ ಪದಗಳನ್ನು ಉಪಯೋಗಿಸಿ 'ಚೆನ್ನಾಗಿದೆ' ಎಂಬ ಒಂದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ಪರಿಚಯವಿಲ್ಲದವರೆಲ್ಲರೂ "ಮುರಲೀಧರ ಯಾರು?" ಎಂದು ಕೇಳಿದರು.

ಲಕ್ಷ್ಮೀಕಾಂತನ ಪ್ರತಿಭಟನೆಗೆ ಮುಂಚಿತವಾಗಿಯೆ ಅಚ್ಚಾಗಿ ಬಿಟ್ಟಿತ್ತು ಆತನ ಕವಿತೆ. ಕೃತಿ ಪ್ರಕಟವಾಗುವುದಕ್ಕೆ ಮುಂಚೆಯೇ ಪ್ರಖ್ಯಾತನಾಗಿದ್ದ ಮಹಾನುಭಾವನ ಕವಿತಾ ಸೃಷ್ಟಿಯನ್ನು ನೋಡುವ ಅಪೇಕ್ಷೆ ಇಲ್ಲದವರು ಯಾರಿದ್ದರು? ಪ್ರತಿ ಯೊಬ್ಬರೂ ಅದನ್ನೋದಿಯೇ ಓದಿದರು.

ಹೆಸರು 'ನಮ್ಮ ಕಾಲೇಜು'

ಮೊದಲ ಸಾಲುಗಳು ಹೀಗಿದ್ದುವು:

'ಸೊಗಯಿಪ ಕಟ್ಟಡವಿದು ನಮ್ಮಯ ಕಾಲೇಜು
ಇದರೊಳಗಿರುವರು ಗುರು ವಿದ್ಯಾರ್ಥಿಗಳು....'

[ಹಸ್ತಪ್ರತಿಯಲ್ಲಿ 'ವಿದ್ಯಾರ್ತಿ' ಎಂದಿತ್ತು. ಮುರಲೀಧರ ಅದನ್ನು ತಿದ್ದಿದ್ದ.]

ಮ್ಯಾಗಜೀನು ಹೊರಬಿದ್ದ ಕೆಲ ದಿನಗಳವರೆಗೂ ವಿದ್ಯಾರ್ಥಿಗಳು ಲಕ್ಷ್ಮೀಕಾಂತ ನನ್ನು ಕಂಡೊಡನೆ ಆರಂಭಿಸುತ್ತಿದ್ದರು:

"ಸೊಗಯಿಪ ಕಟ್ಟಡವಿದು..."

ನಾರಣಪ್ಪ ಮುರಲೀಧರನೊಡನೆ ಹೇಳಿದ:

"ನಿಮ್ಮಿಂದಾಗಿ ಮ್ಯಾಗಜೀನು ಚೆನ್ನಾಗಿ ಬಂತೂಂತ ನನಗೆ ಸಂತೋಷವಾಗಿದೆ, ಮುರಲಿ."

"ಆ ಸಂತೋಷಕ್ಕೆ ಮೂಲ ಕಾರಣವೂ ನೀವೇ," ಎಂದ ಮುರಲೀಧರ.

"ಹ್ಯಾಗೆ?"

"ನನ್ನ ಬರೆವಣಿಗೆ ವಿಷಯದಲ್ಲಿ ನನಗೆ ವಿಶ್ವಾಸ ಹುಟ್ಟಿಸಿದೋರು ನೀವು. ಸಂಪಾದಕ ಮಂಡಲಿಗೆ ನನ್ನ ಹೆಸರು ಸೂಚಿಸಿದೋರು ನೀವು. 'ದೇವತೆಗಳ ಕಣ್ಣೀರು' ಲೇಖನವನ್ನು ಕೊಡೋ ಹಾಗೆ ಸಲಹೆ ಮಾಡ್ದೋರು ನೀವು. ಇಷ್ಟು ಸಾಲದೇನು?"

"ಇಲ್ಲ ಮುರಲಿ. ದೀವಟಿಗೆ ಹಿಡಿಯೋ ಮನುಷ್ಯ ಬೆಳಕು ಹಾಯಿಸಬಹುದು. ಆದರೆ ದೇವರಿಗಿಂತ ಆತ ದೊಡ್ಡೋನಾಗಲಾರ."

"ನಾಣಿ, ನೀವು ಆ ಮಾತು ಆಡಬಾರದು. ನಮ್ಮೊಳಗೆ ಅಂಥ ಅಂತರವಿಲ್ಲ."

...ಕನ್ನಡದ ಅಧ್ಯಾಪಕರು ಮುರಲೀಧರನನ್ನು ಕರೆದು ಹೇಳಿದರು:

"ಚೆನ್ನಾಗಿ ಬರೆದಿದೀ ಕಣಯ್ಯ. ಈ ಶಕ್ತೀನ ಬೆಳಸ್ಕೋ. ಮಾತು ಬಾರದ ಜನರಿಗೆ ಬರೆಹಗಾರ ವಾಣಿ. ಆತ ಸರಸ್ವತಿಯ ಉಪಾಸಕ. ಸತ್ಯದ ಪ್ರತಿಪಾದಕ. ತುಂಬಾ ಓದು. ಲೋಕದ ವಿದ್ವತ್ತಿಗೆಲ್ಲ ನಾವೇ ವಾರಿಸುದಾರರು. ಎದೆಯೊಳಗೆ ಜಾಗ ಇದೆ ನೋಡು, ಅದು ಬರಿದಾಗಬಾರದು. ಹಾಗೇ ತಲೆಯೊಳಗಿಂದು. ಇನ್ನೊಬ್ಬರಿಗೆ ಎಷ್ಟು ಕೊಟ್ಟರೂ ಅವೆರಡೂ ತುಂಬಿಯೇ ಇರಬೇಕು....ಪರೀಕ್ಷೆ ಹತ್ತಿರ ಬಂತು. ಈಗ ಚೆನ್ನಾಗಿ ಓದಿ ಪಾಸಾಗು. ರಜಾದಲ್ಲಿ ತುಂಬಾ ಬರಿ."

ಮುರಲೀಧರ ಆ ಮಾತುಗಳಿಗಾಗಿ ಕೃತಜ್ಞನಾಗುತ್ತ ನುಡಿದ:

"ಆಗಲಿ, ಸಾರ್."

## ೧೦

ಪರೀಕ್ಷೆ ತೀರಾ ಹತ್ತಿರಕ್ಕೆ ಬಂತು. ತರಗತಿಗಳು ಎಂದೋ ಮುಕ್ತಾಯವಾಗಿದ್ದುವು, ವಿದ್ಯಾರ್ಥಿಗಳ ಕೊಠಡಿಗಳಲ್ಲಿ ನಡುರಾತ್ರೆ ಕಳೆದು ಬೆಳಕು ಹರಿಯುವವರೆಗೂ

ದೀಪಗಳು ಉರಿದುವು. ಸಹಸ್ರ ಸಹಸ್ರ ಕಣ್ಣುಗಳು ನಿದ್ದೆಗೆಟ್ಟು ಕೆಂಪಾದುವು. ಆರೈಕೆ ಇಲ್ಲದೆ ತಲೆಗೂದಲು ಅಸ್ತವ್ಯಸ್ತವಾಯಿತು.

ಎರಡೇ ದಿನಗಳು ಉಳಿದುವು ಪರೀಕ್ಷೆಗೆ.

ಆ ಬೆಳಗ್ಗೆ ಎದ್ದಾಗ ನಾರಣಪ್ಪನನ್ನು ನೋಡಬೇಕೆನಿಸಿತು ಮುರಲೀಧರನಿಗೆ. ಗೆಳೆಯನ ಭೇಟಿ ಇಲ್ಲದೆ ಬಹಳ ದಿನಗಳಾಗಿದ್ದುವು. ಆದರೂ ಅಷ್ಟು ದೂರ ಹೋಗಿ ಬರಲು ಸಮಯ ವ್ಯಯ ಮಾಡುವುದು ಮಿತ್ರನ ಸಮಯವನ್ನೂ ವ್ಯರ್ಥಗೊಳಿಸುವುದು, ಸರಿಯಲ್ಲವೆನಿಸಿತು. ಮನಸ್ಸು ಬಿಗಿ ಹಿಡಿದು ಆತ ವ್ಯಾಸಂಗದಲ್ಲೆ ನಿರತನಾದ.

ಆ ಪೂರ್ವಾಹ್ನ ಅಂಚೆಯವನು ಮುರಲೀಧರನ ವಿಳಾಸ ಬರೆದಿದ್ದೊಂದು ಕಾರ್ಡನ್ನು ಹೊತ್ತು ತಂದ.

ಹಿರಿಯಣ್ಣನ ಹಸ್ತಾಕ್ಷರ. 'ಕ್ಷೇಮ' ಎಂದು ಕಾರ್ಡಿನ ಮೂಲೆಯಲ್ಲಿ ಸೂಚಿಸಿದ್ದರೂ ಕೆಟ್ಟ ಸುದ್ದಿಯೇ ಅದರೊಳಗಿದ್ದುದು.

ತಂದೆ ಹಾಸಿಗೆ ಹಿಡಿದಿದ್ದರು. ಒಂದೇ ಸಮನೆ ಕೆಮ್ಮು. ರಕ್ತ ವಾಂತಿಯಾಗ ತೊಡಗಿತ್ತು. ವೈದ್ಯರ ಔಷಧೋಪಚಾರ. ಅವರೇನೋ 'ಭಯವಿಲ್ಲ' ಎಂದಿದ್ದರು.

'ಆದಷ್ಟು ಬೇಗ ನೀನು ಬರಬೇಕೂಂತ ಅಮ್ಮ ಹೇಳಿದಾಳೆ. ತಡಮಾಡದೆ ಪರೀಕ್ಷೆ ಮುಗಿದ ಕೂಡಲೇ ಬಾ.'

ಮುರಲೀಧರ ತಂದೆಗೆ ಗುಣವಾಗಬಹುದೆಂದು ತನಗೆ ತಾನೇ ಎಷ್ಟು ಹೇಳಿಕೊಂಡರೂ ಮನಸ್ಸು ಅಶುಭವನ್ನೆ ನೆನೆಯಿತು.

ಓದಲು ಇಷ್ಟವಾಗಲಿಲ್ಲ. ಮನೋಸ್ವಾಸ್ಥ್ಯ ಕದಡಿತು. ಮಲಗಿ, ಕಣ್ಣೆವೆಗಳನ್ನು ಬಿಗಿಯಾಗಿ ಮುಚ್ಚಿ, ಹೊತ್ತು ಕಳೆಯಲು ಆತ ಯತ್ನಿಸಿದ. ಮೆದುಳು ಬಿಸಿ ಏರಿತು. ಅಂಗಾಂಗಗಳು ಜಡವಾದುವು.

ಆಗಲೆ ಬರಬೇಕೆ ಆ ಸುದ್ದಿ? ಪರೀಕ್ಷೆ ಅಷ್ಟೊಂದು ಸಮೀಪವಾಗಿದ್ದ ಹೊತ್ತಿನಲ್ಲಿ ಆತ ಊರಿಗೆ ಹೋಗುವುದಾದರೂ ಹೇಗೆ?

ಕಾಹಿಲೆ ಬೀಳುವುದು ಸಾಮಾನ್ಯ ವಿಷಯ. ಬೇಗನೆ ಚೇತರಿಸಿಕೊಳ್ಳಬಾರದೆಂದೇನೂ ಇಲ್ಲವಲ್ಲ. ಆದರೂ ಈಸಲ ಯಾಕೋ—

ಒಂದೇ ಸಮನೆ ಕೆಮ್ಮು; ರಕ್ತವಾಂತಿಯಾಗುತ್ತಿತ್ತು ಬೇರೆ. ಅದೆಂತಹ ಕಾಹಿಲೆ?

ತಾಯಿ ಬರಹೇಳಿದ್ದರು.

ಹೋಗುವುದೇ ಚೆನ್ನಾಗಿರುತ್ತಿತ್ತು. ಆದರೆ ಹೇಗೆ? ಹೇಗೆ?

ಎಂತಹ ಕೆಟ್ಟ ಘಳಿಗೆಯಲ್ಲಿ ಬಂದನೋ ಆ ಅಂಚೆಯವನು? ತಾನೊ ಓದಬೇಕು; ಪಠ್ಯಪುಸ್ತಕಗಳ ಟಿಪ್ಪಣಿಗಳ ಪುಟಗಳನ್ನು ತಿರುವಿ ಹಾಕಬೇಕು.

ಮುರಲೀಧರ ಎದ್ದು ಕುಳಿತು ಮತ್ತೆ ಓದಲು ಯತ್ನಿಸಿದ. ಅಕ್ಷರಗಳು ಕಣ್ಣೆದುರು ಕುಣಿಯುತ್ತಿದ್ದುವೇ ಹೊರತು, ಓದುತ್ತಿದ್ದುದೊಂದೂ ಅರ್ಥವಾಗಲಿಲ್ಲ.

ಮಧ್ಯಾಹ್ನದ ಊಟ. ತಿಂದುದು ರುಚಿಸದಿದ್ದರೂ ಹೊಟ್ಟೆಗೆ ಒಂದು ತುತ್ತು.

ಊಟ ಮುಗಿದ ಬಳಿಕ ನಿದ್ದೆ ಹೋಗಲು ಯತ್ನ.

ಹತ್ತಾರು ಸಾರೆ ಎಚ್ಚರವಾಗಿ ಕಣ್ಣು ರಿಯುತ್ತಿದ್ದ ಆ ಹಗಲುನಿದ್ದೆಯಿಂದ ಶರೀರಕ್ಕೆ ಯಾವ ವಿಶ್ರಾಂತಿಯೂ ದೊರೆಯಲಿಲ್ಲ.

ಮನಸಿನ ನೆಮ್ಮದಿಯನ್ನು ಹುಡುಕುತ್ತ ಮಲ್ಲೇಶ್ವರದವರೆಗಾದರೂ ಹೋಗಿ ಬರಬೇಕೆಂದು ಆತ ನಿರ್ಧರಿಸಿದ....

...ಪುಸ್ತಕಗಳೆದುರು ಕುಳಿತಿದ್ದ ನಾರಣಪ್ಪ ಗೆಳೆಯನನ್ನು ಸ್ವಾಗತಿಸಿದ:

"ನೂರು ವರ್ಷ ಆಯುಸ್ಸು ನಿಮಗೆ. ಬನ್ನಿ ಮುರಲಿ. ಇದೇ ಈಗ ನಿಮ್ಮನ್ನು ನೆನೆಸ್ಕೊಳ್ತಿದ್ದೆ; ಒಂದೈದು ನಿಮಿಷವಾದರೂ ನಿಮ್ಮ ಜತೆ ಹರಟೆ ಸಾಧ್ಯವಾದರೆ ಎಷ್ಟು ಚೆನ್ನಾಗಿರುತ್ತೇಂತ ಯೋಚಿಸ್ತಿದ್ದೆ."

"ಬೆಳಗಿನಿಂದ ನನಗೂ ಅದೇ ಯೋಚನೆ ಇತ್ತು," ಎಂದ ಮುರಲೀಧರ.

ಆದರೆ ಮುಖಭಾವದ ಜತೆಗೆ ಸ್ವರವೂ ಆಗಲೇ ಕೈ ಕೊಟ್ಟಿತ್ತು. ಸ್ನೇಹಿತನ ಮುಖವನ್ನು ಎವೆಯಿಕ್ಕದೆ ನೋಡಿ ನಾರಣಪ್ಪ ಕೇಳಿದ:

"ಏನು ಸಮಾಚಾರ?"

ನೇರವಾದ ಆ ಪ್ರಶ್ನೆಗೆ ಬಳಸುವ ಉತ್ತರ ನೀಡುವುದು ಯೋಗ್ಯವಾಗಿರಲಿಲ್ಲ. ಕುಳಿತುಕೊಳ್ಳುತ್ತ, ಷರಾಯಿಯ ಜೇಬಿನೊಳಗಿಂದ, ಸ್ವಲ್ಪ ಮುದುಡಿದ್ದ ಕಾರ್ಡನ್ನು ಮುರಲೀಧರ ಹೊರತೆಗೆದು ಗೆಳೆಯನ ಕೈಗಿತ್ತ.

ತಂದೆಯನ್ನು ಕಳೆದುಕೊಂಡಿದ್ದ ನಾರಣಪ್ಪನ ಮುಖದ ಮೇಲೆಯೂ ಕಳವಳದ ಛಾಯೆ ಮೂಡಿತು. ಕಾಗದವನ್ನೋದಿದ ಆತ ಒಂದು ಕ್ಷಣ ಏನನ್ನೂ ಹೇಳಲಿಲ್ಲ. ತೆರೆದ ಪುಸ್ತಕದ ಮೇಲೆ ಕಾರ್ಡನ್ನಿರಿಸಿದ. ಕುಳಿತಲ್ಲಿಂದಲೆ ಅದರತ್ತ ದೃಷ್ಟಿಯೋಡಿಸಿ ಆ ಸಾಲುಗಳನ್ನು ಮತ್ತೆ ಓದಿದ.

ದೃಷ್ಟಿ ಮುರಲೀಧರನ ಅಣ್ಣನ ಸಹಿಯನ್ನು ದಾಟಿದ ಬಳಿಕ ಆತನೆಂದ:

"ಸೋಮವಾರ ಪರೀಕ್ಷೆ. ಏನ್ಮಾಡ್ತೀರಾ?"

"ನನಗೊಂದೂ ತೋಚ್ತಾ ಇಲ್ಲ ನಾಣಿ."

"ಸ್ಥಿತಿ ಪೂರಾ ಕೆಟ್ಟಿದ್ದರೆ ಬಂದೇ ತೀರಬೇಕೂಂತ ಬರೀತಿದ್ದರು. ಅಲ್ವೆ?"

"ಅದು ನಿಜ. ಆದರೂ ಏನೋ ಅಳುಕು. ಓದೋಕೆ ಮನಸಾಗ್ತಾ ಇಲ್ಲ."

ನಾರಣಪ್ಪ ಏನನ್ನೂ ಹೇಳಲಿಲ್ಲ. ಮುರಲೀಧರನ ಬಳಿ ಹೇರಳವಾಗಿದ್ದ ಬೇಸರದೊಂದು ಭಾಗ ಆವರಿಸಿತು.

ಯೋಚನೆಗಳು ಒಂದು ಮಟ್ಟಕ್ಕೆ ಬಂದು ತಲಪಿದಂತೆ ಮುರಲೀಧರನೇ ಅಂದ:

"ಏನೇ ಆಗಲಿ. ಪರೀಕ್ಷೆಗೆ ಕುಳಿತೇಬಿಡಬೇಕೂಂತ ಮಾಡಿದೀನಿ. ಆಗದೆ?"

"ಅದು ಸರಿ. ಪರೀಕ್ಷೆ ಮುಗಿದೊಡನೆ ಹೋದರಾಯ್ತು."

ಆ ತೀರ್ಮಾನದ ಬಳಿಕ ಮುರಲೀಧರನ ಮುಖ ಮತ್ತೆ ಕಳೆಗೊಂಡಿತು.

ನಾರಣಪ್ಪನ ಅಕ್ಕ ತಿಂಡಿಯ ತಟ್ಟೆಗಳನ್ನು ತಂದಿಟ್ಟಳು.

ಆತನ ತಾಯಿ ಬಂದು ಹುಡುಗರಿಬ್ಬರನ್ನೂ ನೋಡಿ ಅಂದರು:

"ಪರೀಕ್ಷೆ ಪರೀಕ್ಷೆ ಅಂತ ಓದಿ ಓದಿ ಅದೆಷ್ಟು ಸಣಕಲಾಗ್ತೀರೋ ನಾನು ಬೇರೆ ಕಾಣೆ!"

ನಗಲು ಯತ್ನಿಸುತ್ತ ಮುರಲೀಧರನೆಂದ:

"ರಜಾದಲ್ಲಿ ಇಲ್ಲೇ ಇದ್ಬಿಡ್ತೀನಿ ಅಮ್ಮ. ಇಬ್ಬರಿಗೂ ಹೀಗೆ ತಿಂಡಿ ಕೊಡಿ. ಹ್ಯಾಗೆ ಆಗ್ತೀವಿ ಅನ್ನೋದನ್ನ ನೀವೇ ನೋಡಿ ಆಮೇಲೆ."

"ಆಗಲಿ ಮಗೂ. ಖಂಡಿತ ಬಂದು ಇಲ್ಲೇ ಇದ್ಬಿಡು."

ತಾಯಿ ಅಲ್ಲೇ ಕುಳಿತು ಹಿರಿಯ ಮಗನ ಮಾತನ್ನೆತ್ತಿದರು. ನಾರಣಪ್ಪನಿಗೆ ಬಿಡುವಿರಲಿಲ್ಲವೆಂದು ಆ ಸಾರೆ ಮಲ್ಲೇಶಪ್ಪನ ಭೇಟಿಗೆ ಅವರೇ ಹೋಗಿದ್ದರು.

"ಏನಂತಾನೆ ಗೊತ್ತೆ ಮಲ್ಲೇಶಿ? ಒಳಗೆ ನಾನು ಚೆನ್ನಾಗೇ ಇದೀನಿ; ನನ್ನ ಯೋಚ್ನೆ ಮಾಡ್ಬೇಡಿ—ಅಂತ. ಸರಿಯಾಗೇ ನೋಡ್ಕೋತಿದಾರಂತೆ. ಕೆಲಸ ಏನೂ ಕೊಡೊಲ್ವಂತೆ."

"ಕೆಲಸ ಯಾಕೆ ಕೊಡ್ತಾರೆ? ಸ್ಥಾನಬದ್ಧ ರಾಜಕೀಯ ಕೈದಿ ಅಂದ್ಮೇಲೆ ಅಂಥಾ ದೇನೂ ಅವರು ಮಾಡೋಹಾಗಿಲ್ಲ," ಎಂದ ಮುರಲೀಧರ. ಆ ಮಾಹಿತಿಯನ್ನು ಆತ ತಿಳಿದುಕೊಂಡಿದ್ದುದೇನೋ ನಾರಣಪ್ಪನಿಂದಲೇ.

ಬಿಡುಗಡೆಯ ಯತ್ನವೂ ನಡೆದಿತ್ತು. ನಾರಣಪ್ಪನ ತಂದೆಯ ಸ್ನೇಹಿತರಾಗಿ ದ್ದೊಬ್ಬ ವಕೀಲರು ಸರಕಾರದ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿದ್ದರು.

'ಸ್ವತಃ ಆ ಯುವಕ ಅಪಾಯಕಾರಿ ಅಂತ ನಾವು ಭಾವಿಸಿಲ್ಲ. ಆತನಿಗೆ ಬಂದಿದ್ದ ಕಾಗದಗಳಿಲ್ಲದೇ ಹೋಗಿದ್ದರೆ ದಸ್ತಗಿರಿಯ ಯೋಚನೆಯನ್ನೂ ನಾವು ಮಾಡ್ತಿರ್ಲಿಲ್ಲ. ತಾಳಿ, ಪರಿಸ್ಥಿತಿ ಸ್ವಲ್ಪ ಸುಧಾರಿಸಿದ ತಕ್ಷಣ—'

ಅದು, ಅಧಿಕಾರಿಗಳು ಆಡಿದ್ದ ನವುರು ಮಾತು.

ತಾಯಿ ಅಂದರು:

"ಅಂತೂ ಒಮ್ಮೆ ಮಲ್ಲೇಶಿ ಮನೆಗೆ ಬಂದರೆ ಸಾಕು."

"ಬಂದೇ ಬರ್ತಾರೆ. ಎಷ್ಟು ದಿವಸ ಅಂತ ಜೈಲಿನಲ್ಲಿಡೋದು ಸಾಧ್ಯ?" ಎಂದ ಮುರಲೀಧರ.

...ಸಂಜೆ ಗೆಳೆಯನ ಮನೆಯಿಂದ ಬೇಗನೆ ಹೊರಟು ಆತ ಕೊಠಡಿ ಸೇರಿದ. ಪಾಠ ಹೇಳುವ ಕೆಲಸವಿರದ—ಅದರ ಪರಿಣಾಮವಾಗಿ ಸಂಪಾದನೆ ಶೂನ್ಯವಾದ—ದಿನ ಗಳು...ಆ ಹಗಲು ಹೆಚ್ಚು ಓದುವುದಾಗಿರಲಿಲ್ಲ. ರಾತ್ರೆಯಾದರೂ ಹೆಚ್ಚುಹೊತ್ತು ಕುಳಿತುಕೊಳ್ಳುವುದು ಅಗತ್ಯವೆನಿಸಿತು.

ಪುಸ್ತಕವನ್ನು ತೆರೆದು ಕುಳಿತ ಮುರಲೀಧರನನ್ನು, ಬೆಳಗ್ಗೆ ಬಂದಿದ್ದ ಕಾಗದದ ಸಾಲುಗಳ ನೆನಪು ಕ್ಷಣ ಕಾಲ ಗೊಂದಲಕ್ಕೀಡು ಮಾಡಿತು. ಆದರೆ ಮುರಲೀಧರ

ಚೇತರಿಸಿಕೊಂಡು, ದೃಢಮನಸ್ಕನಾಗಿ ಅಭ್ಯಾಸದಲ್ಲಿ ನಿರತನಾದ....

...ಸೋಮವಾರ ಸಡಗರದ ದಿನ. ಅದು, ಎರಡು ವರ್ಷಗಳ ಅಧ್ಯಯನ ನಿರ್ದಿಷ್ಟವಾದೊಂದು ಘಟ್ಟವನ್ನು ತಲಪುವ ಸನ್ನಿವೇಶ. ಉತ್ತೀರ್ಣನಾಗಲಾರೆನೆಂಬ ಭಯವೇನೂ ಮುರಲೀಧರನಿಗೆ ಇರಲಿಲ್ಲ. ಆದರೂ ಪರೀಕ್ಷಾ ಭವನವನ್ನು ಸಮೀಪಿಸಿ ದಂತೆ ಆತನ ಎದೆಬಡಿತ ತೀವ್ರವಾಯಿತು. ಈ ಪರೀಕ್ಷೆಯಲ್ಲಿ ಯಶಸ್ಸು ಲಭಿಸಿತೆಂದರೆ ಒಂದು ಅಧ್ಯಾಯ ಪೂರ್ಣವಾದಂತೆ...

ಮರಗಳ ಕೆಳಗೆ ಕೊನೆಯ ಆ ಘಳಿಗೆಯಲ್ಲೂ ವಿದ್ಯಾರ್ಥಿಗಳ ಸಿದ್ಧತೆ ನಡೆದಿತ್ತು. ಆ ರೀತಿ ಓದಿ ತಲೆ ಕೆಡಿಸಿಕೊಳ್ಳುವುದು ಎಂದೂ ಒಪ್ಪಿಗೆಯಾಗಿರಲಿಲ್ಲ ಮುರಲೀಧರನಿಗೆ. ಗಡಿಯಾರದ ಮುಳ್ಳುಗಳು ಧಾವಿಸುತ್ತಿದ್ದ ಆ ಹೊತ್ತಿನಲ್ಲಿ ಶಾಂತನಾಗಿ ಸುಮ್ಮನಿರು ವುದೇ ಹೆಚ್ಚು ವಿಹಿತವಾಗಿತ್ತು.

ಮುರಲೀಧರ ಅತ್ತಿತ್ತ ನೋಡಿದ. ನಾರಣಪ್ಪ ಆತನೆಡೆಗೇ ಬರುತ್ತಿದ್ದುದು ಕಂಡಿತು. ಶುಭ್ರ ಶ್ವೇತವಸನ ಎಂದಿನಂತೆಯೇ.

ತಾನೂ ಆತನೆಡೆಗೆ ಮುಂದುವರಿದು, ಸಮೀಪಿಸಿದಂತೆ, ಮುರಲೀಧರನೆಂದ:

"ಯಜ್ಞ ಕುಂಡದ ಹತ್ತಿರ ಹೋಗೋಕ್ಮುಂಚೆ ಸಿಕ್ಕಿದಿರಲ್ಲ! ಸಂತೋಷ!"

ನಾರಣಪ್ಪ ಮುಗುಳುನಕ್ಕ. ಆದರೆ ಆತನ ದೃಷ್ಟಿ ಇದ್ದಕ್ಕಿದ್ದಂತೆ, ಅವರನ್ನು ಹಾದು ಹೋದ ಕೆಂಪು ಸೈಕಲಿನತ್ತ ಹರಿಯಿತು. ಕೆಂಪು ಸೈಕಲಿನಮೇಲೆ ಖಾಕಿಯುಡು ಗೆಯ ಸವಾರ. ಕಂಕುಳಿಗೆ ತೂಗಹಾಕಿದ್ದ ತೊಗಲ ಚೀಲ.

ನಾರಣಪ್ಪನೆಂದ:

"ತಂತಿ ಬಂದಿದೆ, ಯಾರಿಗೋ."

ತಂತಿ? ಯಾರಿಗೆ? ಮುರಲೀಧರನ ಉಸಿರು ಸರಾಗವಾಗಿ ಆಡಲಾಗದೆ ಚಡ ಪಡಿಸಿತು. ಯಾರಿಗೆ ತಂತಿ? ಅಣ್ಣ ಬರೆದಿದ್ದ ಕಾರ್ಡು ಆತನ ಕಣ್ಣೆದುರು ಬೃಹದಾಕಾರ ತಳೆಯಿತು. ತಂದೆ-ತನ್ನ ತಂದೆ?

ಅವರಿಬ್ಬರ ದೃಷ್ಟಿಗಳೂ ಸೈಕಲು ಹೋದ ದಿಕ್ಕನ್ನೇ ಹಿಂಬಾಲಿಸಿದುವು. ತಂತಿ ಯವನು ಪರೀಕ್ಷಾ ಭವನದ ಬಳಿ ಇಳಿದು, ಮೆಟ್ಟಲುಗಳನ್ನೇರಿ, ಜವಾನನನ್ನು ವಿಚಾರಿ ಸುತ್ತಿದ್ದ. ಪರೀಕ್ಷಾರ್ಥಿಗಳ ಮೇಲೆ ಕಣ್ಣಿಡಲು ನಿಯೋಜಿತರಾಗಿದ್ದ ಇಬ್ಬರು ಅಧ್ಯಾ ಪಕರು ಅತ್ತ ಬಂದರು. ಅವರೊಡನೆಯೂ ಮಾತನಾಡಿದ ಖಾಕಿಯುಡುಗೆಯ ಮನುಷ್ಯ.

ಅವರೆಲ್ಲ, ಹೊರಗೆ ಅಲ್ಲಲ್ಲಿದ್ದ ಹುಡುಗರತ್ತ ದೃಷ್ಟಿ ಹಾಯಿಸುತ್ತಿದ್ದಂತೆ ಕಂಡಿತು.

ಬಾಯಿ ತೆರೆದು ಉಚ್ಚರಿಸದಿದ್ದರೂ ಬಲವಾದ ಸಂದೇಹ ನಾರಣಪ್ಪನನ್ನು ಕಾಡುತ್ತಿತ್ತು. ಆಗಲೇ ಮುಖ ವಿವರ್ಣವಾಗ ತೊಡಗಿದ್ದ ಮುರಲೀಧರನೊಡನೆ ಆತನೆಂದ:

"ಬನ್ನಿ. ಅಲ್ಲಿಗೆ ಹೋಗೋಣ. ಯಾರನ್ನೋ ಹುಡುಕ್ತಿದಾರೆ."

ಅವರಂತೆಯೇ ಬೇರೆಯೂ ಇಬ್ಬರು ಮೂವರು ವಿದ್ಯಾರ್ಥಿಗಳು ಅತ್ತ ಸರಿದರು.

ದೂರದಿಂದಲೆ ಕಾಣಿಸಿದುವು ಚಲಿಸುತ್ತಿದ್ದ ತುಟಿಗಳು. ಮುರಲೀಧರ ಎಂಬ ಪದವನ್ನೆ ಅವು ರೂಪಿಸುತ್ತಿದ್ದಂತೆ ಕಂಡಿತು.

ಅದೇ ನಿಜವಾಗಿತ್ತೆನ್ನುವಂತೆ ಪರಿಚಯದ ಸಹಪಾಠಿಯೊಬ್ಬ ಕರೆದು ಹೇಳಿದ:

"ರೀ ಮುರಲೀಧರ್. ನಿಮಗೊಂದು ಟೆಲಿಗ್ರಾಂ."

ಉಳಿದ ವಿದ್ಯಮಾನಗಳೆಲ್ಲ ಕನಸಿನಲ್ಲಿ ನಡೆದಂತೆ. ಕಾತರ. ಉದ್ವೇಗ. ಯಾರದೋ ಸ್ವರ ಕೇಳಿಸಿತು. 'ಇವರೇ ಮುರಲೀಧರ್' ಹಳದಿ ಬಣ್ಣದ ಪೆನ್ಸಿಲು. ಕಪ್ಪು ಸೀಸದ ಕಡ್ಡಿ. 'ಒನ್ ನಾಟ್ ಸೆವೆನ್ ನಂಬರ್. ಸಹಿ ಹಾಕಿ.' ನಡುಗುತ್ತಿದ್ದ ಕೈ ಬೆರಳುಗಳು. ಲಕೋಟೆಯನ್ನು ಹರಿದು ಒಡೆದು, ಮಡಚಿದ ಕಾಗದವನ್ನು ಹೊರ ಕ್ಕೆಳೆದು ಬಿಡಿಸಿದುದಾಯಿತು. ಅಸ್ಪಷ್ಟವಾಗಿ ಅತ್ತಿತ್ತ ಚಲಿಸಿ, ಕ್ರಮೇಣ ಘನೀಭವಿಸಿದ ನಾಲ್ಕು ಇಂಗ್ಲಿಷ್ ಪದಗಳು:

'ತಂದೆ–ಉಲ್ಬಣಾವಸ್ಥೆ–ತಕ್ಷಣ–ಬಾ...'

ಏನು, ಯಾರದೆಂದು ತಿಳಿಯುವ ಕುತೂಹಲವಿದ್ದ ಒಬ್ಬಿಬ್ಬರು ವಿದ್ಯಾರ್ಥಿಗಳು, ತಂತಿಯಲ್ಲಿದ್ದ ವಿಷಯ ಗೊತ್ತಾದೊಡನೆ ಮತ್ತೆ ಮರಗಳಡಿಗೆ ಸರಿದರು.

ಕಾಲುಗಳು ಕ್ಷೀಣಿಸಿ ಕುಸಿ ಬೀಳುವ ಹಾಗಾಯಿತು ಮುರಲೀಧರನಿಗೆ. ಕಣ್ಣು ಗಳಿಗೆ ಕತ್ತಲು ಕವಿಯಿತು. ಚಿಂತೆಗೊಳಗಾಗಿ ನಿಂತಿದ್ದ ನಾರಣಪ್ಪನ ಆಕೃತಿ ಮಸು ಕಾಗಿ ಆತನಿಗೆ ತೋರಿತು.

ಸಂಕಟದ ಆ ಸಮಯದಲ್ಲಿ ಬಹುವಚನ ಪ್ರಯೋಗದ ಔಪಚಾರಿಕ ನಿಯಮ ಗಳನ್ನು ಬದಿಗಿರಿಸಿ, ನಾರಣಪ್ಪನೆಂದ:

"ಮುರಲಿ, ಮುರಲಿ! ಏನ್ಮಾಡ್ತೀಯಾ ಈಗ?"

"ಹೂಂ? ಏನು?"

ಗೆಳೆಯ ಏನು ಕೇಳಿದನೆಂಬುದು ಮುರಲೀಧರನಿಗೆ ಸ್ಪಷ್ಟವಾಗಿರಲಿಲ್ಲ.

"ಊರಿಗೆ ಹೋಗ್ತೀಯಾ?"

ರುಗ್ಣಶಯ್ಯೆಯಲ್ಲಿದ್ದ ತಂದೆ........ತನಗೋಸ್ಕರ ಆತ ಆವರೆಗೂ ತೋರಿದ ಒಲವು ಎಷ್ಟೇ ಇರಲಿ, ತನಗೆ ಜನ್ಮವಿತ್ತವನು ಆತ–ಜನಕ....ತಾನು ಹೋಗಲೇಬೇಕು. ಆತನ ಮುಖವನ್ನೊಮ್ಮೆ ನೋಡಲೇಬೇಕು...

"ಹೂಂ. ಹೋಗ್ತೀನಿ."

"ಎಷ್ಟು ಗಂಟೆಗಿದೆ ಬಸ್ಸು?"

"ಬಸ್ಸು?"

ಎಷ್ಟು ಗಂಟೆಗೆ? ಊರಿಗೆ ಎಷ್ಟೋ ಸಾರೆ ಹೋಗಿರುವ ತನಗೆ ತಿಳಿದಿರ ಬೇಕಲ್ಲವೆ?

ಪ್ರಯಾಸಪಟ್ಟು ಸ್ಮರಿಸಿಕೊಂಡವನಂತೆ ಹುಬ್ಬುಗಳನ್ನು ಕುಂಚಿತಗೊಳಿಸುತ್ತ ಮುರಲೀಧರನೆಂದ:

"ಹನ್ನೆರಡು ಗಂಟೆಗೆ ಒಂದಿದೆ."

"ದುಡ್ಡಿದೆಯೇನು ಟಿಕೆಟಿಗೆ?"

"ಇದೆ, ಕೊಡಡೀಲಿ."

ಪರೀಕ್ಷೆ–ಪರೀಕ್ಷಾ ಭವನ........ಐದು ನಿಮಿಷಗಳೂ ಉಳಿದಿರಲಿಲ್ಲ. ಬಸ್ ನಿಲ್ದಾಣದವರೆಗೆ ಸ್ನೇಹಿತನ ಜತೆ ಹೋಗುವುದಂತೂ ಆಗದ ಮಾತು.

ಆದರೂ ನಾರಣಪ್ಪ ಕೇಳಿದ:

"ಒಬ್ಬನೇ ಹೋಗೋಕಾಗುತ್ತಾ?"

"ಹೂಂ. ಹೋಗ್ತೀನಿ."

"ಸಾಧ್ಯವಾದರೆ ನಾಳೆಯೇ ವಾಪಸು ಬಂದ್ಬಿಡು."

"ಹೂಂ."

ಶ್ರೀಕಂಠಯ್ಯ, ಅವರಿಬ್ಬರು ನಿಂತಿದ್ದ ಹಾದಿಯಾಗಿ ಬಂದರು. ನಮಿಸಿದ ನಾರಣಪ್ಪನನ್ನು ನೋಡಿ ತಲೆಯಾಡಿಸಿದರು. ಶಿಷ್ಯ ಮುರಲೀಧರನೂ ಅಲ್ಲಿದ್ದನೆಂದು ಮುಗುಳು ನಕ್ಕರು. ಆದರೆ ಆ ಹುಡುಗ ಶಿಲಾಪ್ರತಿಮೆಯಂತಿದ್ದ. ಕಪ್ಪಿಟ್ಟಿತ್ತು ಮುಖ. ಒಂದು ಹೆಜ್ಜೆ ಮುಂದಿರಿಸಿದ್ದ ಶ್ರೀಕಂಠಯ್ಯ ತಡೆದು ನಿಂತು, ತಿರುಗಿ ನೋಡಿ, ಕೇಳಿದರು:

"ಏನು ಸಮಾಚಾರ?"

ನಾರಣಪ್ಪ ವಿಷಯ ತಿಳಿಸಿದಾಗ ಅಧ್ಯಾಪಕರ ಮುಖವೂ ಮ್ಲಾನವಾಯಿತು, ಅವರೆಂದರು:

"ಸೋ ಸಾರಿ. ಪರೀಕ್ಷೆಗೇನು ಇನ್ನೊಂದ್ಸಲ ಪಾಸ್ ಮಾಡ್ಕೋಬಹುದು. ಹೋಗಿ ಬಾ."

ಸಹಾನುಭೂತಿಯ ಆ ಧ್ವನಿ, ಮುರಲೀಧರನ ಅಳಲಿನ ಚೀಲವನ್ನು ಇರಿಯಿತು. ಆತನ ಕಣ್ಣುಗಳಲ್ಲಿ ಹನಿಯಾಡಿತು.

ಬೀದಿಯ ಕಡೆಗೆ ಎರಡು ಹೆಜ್ಜೆ ಇಟ್ಟು ಆತನೆಂದ:

"ಬರ್ತೀನಿ ನಾಣಿ. ಹೋಗ್ಬರ್ತೀನಿ."

"ಹೂಂ. ಸಾಧ್ಯವಾದರೆ ನಾಳೇನೆ ಬಾ. ಇಲ್ಲದೇ ಹೋದ್ರೆ ಕಾಗದನಾದರೂ ಬರಿ."

"ಆಗಲಿ ನಾಣಿ."

ಒಬ್ಬನೇ ನಡೆದು ಹೋದ ಮುರಲೀಧರನನ್ನೇ ನಾರಣಪ್ಪ ಸ್ವಲ್ಪ ಹೊತ್ತು ದಿಟ್ಟಿಸಿದ. ಬಾರಿಸಿದ ಗಂಟೆಯ ಸದ್ದು ಆತನನ್ನು ಎಚ್ಚರಿಸಿತು. ಭಾರವಾದ ಹೃದಯದೊಡನೆ ಆತ ಪರೀಕ್ಷಾಭವನದ ದ್ವಾರದೆಡೆಗೆ ನಡೆದ.

# ೧೧

ಮೋಟಾರಿನಲ್ಲಿದ್ದುದು–ಮೆತ್ತನೆಯ ಆಸನವಲ್ಲ, ಮುಳ್ಳುಗಿಡ. ಅಷ್ಟೊಂದು ಸಂಕಟ ಅನುಭವಿಸುತ್ತ ಮುರಲೀಧರ ಪ್ರಯಾಣ ಬೆಳಸಿದ. ಪ್ರಯಾಣಿಕರನ್ನು ಇಳಿಸ ಲೆಂದೋ ಹತ್ತಿಸಿಕೊಳ್ಳಲೆಂದೋ ವಿರಾಮಕ್ಕೆಂದೋ ಅಲ್ಲಿ ಇಲ್ಲಿ ವಾಹನ ನಿಂತಾಗಲೆಲ್ಲ, ಆತನ ಮನಸ್ಸು ಅಸಹನೆಯಿಂದ ಚೀರಾಡುತ್ತಿತ್ತು. ಆ ಒಂದು ಸಾರೆಯಾದರೂ ವೇಗವಾಗಿ ಊರು ಸೇರುವುದು ಸಾಧ್ಯವಿದ್ದರೆ... ಹಣವಿರುತ್ತಿದ್ದರೆ ಟ್ಯಾಕ್ಸಿ ಮಾಡಿ ಕೊಂಡೇ ಬರುತ್ತಿದ್ದ ಆತ–ನಿಸ್ಸಂದೇಹವಾಗಿಯೂ.

ನಸುಕಿನಲ್ಲೆ ಯಾರನ್ನೋ ಪಟ್ಟಣಕ್ಕೆ ಕಳುಹಿಸಿ ಅಣ್ಣ ತಂತಿ ಕೊಡಿಸಿರಬೇಕು. [ಸ್ವತಃ ಆಳನ್ನು ಕಳುಹಿದ್ದರೂ ತಂತಿ ಕೈ ಸೇರುವ ಹೊತ್ತಿಗೇ ಬಂದು ತಲಪುತ್ತಿದ್ದ.] ಅಷ್ಟು ಬೆಳಗ್ಗೆಯೇ ದೇಹಸ್ಥಿತಿ ಹಾಗಿತ್ತೆಂದಮೇಲೆ ಈಗ....

ತಾನು ಮನೆ ಸೇರುವುದರೊಳಗೆ ಪ್ರಮಾದವೇನೂ ಆಗಿರಲಾರದೆಂದುಕೊಂಡ ಮುರಲೀಧರ. ಆದರೂ ಮನಸ್ಸು ಕೆಟ್ಟುದನ್ನೆ ಚಿಂತಿಸುತ್ತಿತ್ತು...

ಅಂತೂ ಕೊನೆಗೊಮ್ಮೆ ಆ ನಿಲ್ದಾಣ ತಲಪಿತು. ಅಲ್ಲಿಂದ ಕಾಲು ಹಾದಿಯ ಮೂಲಕ ಸಾಗಬೇಕು ಮನೆಗೆ.

ಜನ ಸಂಚಾರವಿಲ್ಲದ ದಾರಿ. ವೇಗವಾಗಿ ಮುರಲೀಧರ ನಡೆದ. ನಡು ನಡುವೆ ಓಡಿದ.

ಪರಿಚಿತವಾದ ಹೊಲದ ಏರಿ, ಹಿತ್ತಿಲು, ಮನೆ....

ಕಥೆ ಮುಗಿದಿತ್ತು. ವಯಸ್ಸಾಗಿದ್ದ ತಂದೆಯ ಜೀವ ಮಗನಿಗಾಗಿ ಕಾದಿರಲಿಲ್ಲ. ನಾಲ್ಕಾರು ಕಂಠಗಳಿಂದ ಹೊರಡುತ್ತಿದ್ದ ರೋದನ ಅಲೆಯಲೆಯಾಗಿ ಬಂದು ಮುರಲೀ ಧರನನ್ನು ಇದಿರುಗೊಂಡಿತು. ಮುಂದುವರಿಯುತ್ತಿದ್ದ ಮುರಲೀಧರ ಥಟ್ಟನೆ ನಿಂತ. ಎದುರು ಕತ್ತಲು ಕವಿದಂತಾಗಲು ಹಿತ್ತಿಲ ಬಾಗಿಲನ್ನು ಆಧರಿಸಿದ. ಆ ಕತ್ತಲೆಯನ್ನು ಭೇದಿಸಿಕೊಂಡು ತಾಯಿಯ ಶೋಕಧ್ವನಿ ಆತನ ಕಿವಿಗಳನ್ನು ಇರಿಯಿತು. ಕರುಳು ಕತ್ತರಿಸಿದಂತಾಯಿತು ಆಕೆಯ ಕಂದನಿಗೆ. ಮುರಲೀಧರ ಕೂಗಿಕೊಂಡ:

"ಅಮ್ಮಾ!"

ಆ ಕೂಗು ಇತರರಿಗೆ ಕೇಳಿಸಿತೋ ಇಲ್ಲವೋ. ಗಂಡಸರು ಅಂಗಳದಲ್ಲಿ ನೆರೆ ದಿದ್ದರು. ಅಳುತ್ತಿದ್ದವರನ್ನು ಸಮಾಧಾನ ಪಡಿಸುವ ಧ್ವನಿಗಳಿದ್ದುವು: "ಅಳಬೇಡಿ! ಅಳಬೇಡಿ!" ತನ್ನ ಮನೆಯವರಲ್ಲ, ಸಂಬಂಧಿಕರಲ್ಲ. ಸಮೀಪದ ಮನೆಗಳ ನಿವಾಸಿಗಳು ಅವರು.

ಮುಂದೆಂದೂ ಏಳದ ಹಾಗೆ ಮಲಗಿದ್ದ ವ್ಯಕ್ತಿಯನ್ನು ಮನೆಯೊಳಗಿಂದ ನಾಲ್ವರು ಹೊತ್ತು ತಂದರು.

ಮಲಗಿದ್ದ ವ್ಯಕ್ತಿ ಯಾರೆಂಬುದು ಮುರಲೀಧರನಿಗೆ ತಿಳಿಯದೆ? ಅಯ್ಯೋ!

ಮುಚ್ಚಿಕೊಂಡಿದ್ದ ಆತನ ಕಂಠವನ್ನು ಭೇದಿಸುತ್ತ ಆರ್ತನಾದ ಹೊರಟಿತು:

"ಅಪ್ಪಾ!"

ತಪ್ಪಿಸಿಕೊಂಡು ಓಡುವವನಂತೆ ನಿಂತಲ್ಲಿಂದ ಅಂಗಳಕ್ಕೆ ಧಾವಿಸಿದ ಮುರಲೀಧರ.

"ಅಪ್ಪಾ! ಅಪ್ಪಾ!"

ಶವದ ಬಳಿ ಆತ ಕುಸಿಕುಳಿತ.

ಯಾರೋ ಗಟ್ಟಿಯಾಗಿ ಅಂದರು:

"ಮುರಲಿ ಬಂದ."

ಮುರಲೀಧರನ ತಾಯಿ ಮತ್ತೆ ಸ್ವರವೆತ್ತಿ ಗೋಳಾಡಿದರು:

"ಅಯ್ಯೋ ಮಗನೇ! ಈಗ ಬಂದೆಯಾ?"

ಯಾರೋ ಮುರಲೀಧರನನ್ನು ಗಟ್ಟಿಯಾಗಿ ಹಿಡಿದುಕೊಂಡು ಅಂದರು:

"ಅಳಬೇಡವಪ್ಪಾ..."

...ನಡೆಯಬೇಕಾಗಿದ್ದುದನ್ನೆಲ್ಲ ಕ್ರಮಬದ್ಧವಾಗಿ ನೆರವೇರಿಸಿದರು. ಬದುಕಿದ್ದಾಗ ಬಂದ ಎಡರು ತೊಡರುಗಳನ್ನೆಲ್ಲ ಇದಿರಿಸಿ ನೂರು ಜನರ ಗೌರವಕ್ಕೆ ಪಾತ್ರನಾಗಿದ್ದ ಮನುಷ್ಯ, ಚಿತೆಯ ಮೇಲೆ ಅಸಹಾಯನಾಗಿ ಮಲಗಬೇಕಾಯಿತು. ಎತ್ತರಕ್ಕೆ ಬೆಳೆದು ಆ ಇಳಿವಯಸ್ಸಿನಲ್ಲಷ್ಟೆ ಕುಗ್ಗತೊಡಗಿದ್ದ ದೇಹ, ಸುಟ್ಟು ಹಿಡಿ ಬೂದಿಯಾಯಿತು.

....ಗೃಹಶಾಂತಿಯನ್ನು ಕದಡುವ ಕಲಹಗಳಿರಲಿಲ್ಲ ಆ ಸಂಜೆ. ಅತ್ತು ಅತ್ತು ಅಳಲಿನ ಕೊಡವನ್ನು ಬರಿದುಗೊಳಿಸಿದ್ದ ತಾಯಿ ನರಳುತ್ತ ಚಾಪೆ ಹಿಡಿದರು. ದೇವರ ವಿಷಯದಲ್ಲಿ ಆಕೆಗಿದ್ದ ಆಕ್ಷೇಪಣೆಯೊಂದೇ–ತನ್ನನ್ನೂ ಅವರ ಜತೆಯಲ್ಲೇ ಒಯ್ಯಬಾರದಾಗಿತ್ತೆ ಆ ನಿರ್ದಯ?

ಸಂಜೆಯ ತಂಗಾಳಿ ಹಿತ್ತಿಲ ಮರಗಿಡಗಳನ್ನು ಜೀವಂತಗೊಳಿಸಿತು. ಆದರೆ ಮುಚ್ಚಂಜೆ ಬಂದಾಗ ಅತ್ತಿತ್ತ ಓಡಾಡಿ ದೀಪ ಹಾಕುವ ಜನರೇ ಮನೆಯಲ್ಲಿರಲಿಲ್ಲ. ಬೇರೆ ದಿನಗಳಲ್ಲಿ ಮಕ್ಕಳ ಗದ್ದಲವಾದರೂ ಇರುತ್ತಿತ್ತು. ಆದರೆ ಈ ಹೊತ್ತು, ಹಿರಿಯರ ವರ್ತನೆ ಅರ್ಥವಾಗದೆ ಹೆದರಿದ್ದ ಎಳೆಯರು ಯಾವುದೋ ಮೂಲೆ ಸೇರಿದ್ದರು.

ಮುರಲೀಧರನ ಹಿರಿಯಣ್ಣ ಕೇಳಿದ:

"ಟೆಲಿಗ್ರಾಂ ತಲಪ್ತೇನೋ?"

ಒಡಹುಟ್ಟಿದವನ ಆ ಧ್ವನಿಯಲ್ಲಿ ಮಾರ್ದವವಿತ್ತು ಸ್ವಲ್ಪ.

"ಹೂಂ" ಎಂದ ಮುರಲೀಧರ.

"ಪರೀಕ್ಷೆ ಆಯ್ತೆ?"

"ಇಲ್ಲ, ಇವತ್ತು ಶುರು."

ಸ್ವಲ್ಪ ಹೊತ್ತು ಮೌನವಾಗಿದ್ದು ಒಡೆದ ಸ್ವರದಲ್ಲಿ ಅಣ್ಣನೆಂದ:

"ಬೆಳಗ್ಗೆ ಏಳು ಘಂಟೆ ಹೊತ್ತಿಗೆ ಪ್ರಾಣ ಹೋಯ್ತು. ಕೊನೇವರೆಗೂ ಅಪ್ಪಯ್ಯ ನಿನ್ನನ್ನು ಜ್ಞಾಪಿಸ್ಕೋತಿದ್ದ."

ಮುರಲೀಧರ ಮುಂದೆ ಏನನ್ನೂ ಹೇಳಲಿಲ್ಲ.

ಒಂದು ರಾತ್ರೆ ಕಳೆಯಿತು. ಮಾರನೆಯ ದಿನ ಮನೆ ಲವಲವಿಕೆ ತೋರಿಸಿತು. ಚಿಕ್ಕ ಯಜಮಾನಿಯರು ಹಾವು–ಮುಂಗುಸಿಗಳಾದರು, ಎಂದಿನಂತೆ.

ಮುರಲೀಧರನ ತಾಯಿ ಗೋಳಾಡಿದರು: "ಇನ್ನು ಹ್ಯಾಗಪ್ಪಾ ಈ ಮನೇಲಿ ನಾನು ಬದುಕಿರ್ಲಿ?"

ಮುರಲೀಧರ ಊರಿನೊಳಕ್ಕೆ ಹೋಗಿ ಬಡಕಲು ಅಂಚೆ ಪೆಟ್ಟಿಗೆಗೊಂದು ಕಾರ್ಡು ತುರುಕಿದ, ಅದು ನಾರಣಪ್ಪನಿಗೆ.

"ಪ್ರಿಯ ನಾಣಿ,

ನಾನು ಬರುವುದರೊಳಗೇ ತಂದೆ ಕಾಲವಾಗಿದ್ದರು.

ಈಗ ಏನು ಬರೆಯಬೇಕೋ ತೋಚುತ್ತಿಲ್ಲ. ಪರೀಕ್ಷೆಯಲ್ಲಿ ನಿನ್ನೆ ನೀನು ಚೆನ್ನಾಗಿಯೇ ಮಾಡಿರಬಹುದು. ಮುಂದೆಯೂ ಶ್ರದ್ಧೆಯಿಂದ ಉತ್ತರ ಬರೆದು ಮುಗಿಸು.

ಸೂತಕದ ಅವಧಿ ಮುಗಿದ ಮೇಲೆ ಬಂದು ಭೇಟಿಯಾಗುವೆ.

ಇತಿ, ಪ್ರೀತಿಪೂರ್ವಕ ವಂದನೆ

ನಿನ್ನ

ಮುರಲಿ"

...ಮನೆಯಲ್ಲಿ ಮುರಲೀಧರನ ಅಣ್ಣ ಕೇಳಿದ:

"ಮುಂದೇನು ಮಾಡ್ಬೇಕೂಂತಿದೀಯಾ?"

"ಗೊತ್ತಿಲ್ಲ ಅಣ್ಣ."

"ಇನ್ನು ನೀನು ಪರೀಕ್ಷೆಗೆ ಕಟ್ಟೋದು ಸಾಧ್ಯವಾಗುತ್ತೋ ಇಲ್ವೊ"

"ಕಟ್ಟಬಹುದು. ಅದಕ್ಕೇನು?"

"ಆದರೆ ಅದಾದ್ಮೇಲೆ ಓದಿಸೋದು ಮಾತ್ರ ಕಷ್ಟವೆ?"

"ಪರವಾಗಿಲ್ಲ, ಆಮೇಲೆ ನೋಡ್ಕೊಳ್ಳೋಣ ಆ ವಿಷಯ."

....ತಂದೆಯ ಕಾಹಿಲೆಯ ನಡುವೆ ಸ್ವಲ್ಪ ತಣ್ಣಗಾಗಿದ್ದ ಯಾದವೀ ಕಲಹದ ಕೆಂಡಗಳು ಮತ್ತೆ ಹೊಸ ಶಕ್ತಿಯಿಂದ ಜ್ವಲಿಸಿದುವು.

ತಾಯಿ ಕಿರಿಯ ಮಗನೊಡನೆ ಅಂದರು:

"ಮುರಲಿ, ನೀನಾದರೂ ಈ ಮನೇಲಿರು. ಏನಾಗುತ್ತೋ ಏನೊ...ನನಗೆ ದಿಗಿಲಾಗ್ತಿದೆ..."

ವಯಸ್ಸಾದ ಹಿರಿಯನಂತೆ ತಾಯಿಯನ್ನು ಮುರಲೀಧರ ಸಂತೈಸಲೆತ್ನಿಸಿದ:

"ನೀನು ಸುಮ್ನಿರಮ್ಮ. ಎಲ್ಲ ಸರಿಹೋಗುತ್ತೆ...."

"ಇಲ್ಲ ಮುರಲಿ, ನಿನಗೆ ಗೊತ್ತಾಗೊಲ್ಲ ಮುರಲಿ."

ಗೊತ್ತಾಗುತ್ತಿತ್ತು. ಆದರೆ ಆ ಕಹಿಯನ್ನು ಮರೆತು ಮಾತನಾಡಲು ಆತ ಯತ್ನಿಸುತ್ತಿದ್ದ, ಅಷ್ಟೆ..."

...ತಂದೆಯ ಮರಣದ ಹದಿನಾಲ್ಕನೆಯ ದಿನ ಮುರಲೀಧರ ಬೆಂಗಳೂರಿಗೆ ಬಂದ. ನಗರ ಸೇರುತ್ತಿದ್ದಂತೆ, ಅದನ್ನು ತಾನು ಬಿಟ್ಟು ಎಷ್ಟೋ ವರ್ಷಗಳಾಗಿದ್ದಂತೆ ಆತನಿಗೆ ಭಾಸವಾಯಿತು.

ಎದುರಿಗಿದ್ದುದು ದೊಡ್ಡ ಪ್ರಶ್ನಾರ್ಥಕ ಚಿಹ್ನೆ. ಏನಿನ್ನು?

ಹಿರಿಯಣ್ಣ ಹತ್ತು ರೂಪಾಯಿ ಕೈಗಿರಿಸಿ ಹೇಳಿದ್ದ:

"ಅಲ್ಲಿ ಸಾಲಗೀಲ ಏನಾದರೂ ಇದ್ದರೆ ತೀರಿಸಿ, ಹೊರಟು ಬಾ."

ಆ ತಿಂಗಳ ಬಾಡಿಗೆಯ ಹೊರತಾಗಿ ಬೇರೆ ಯಾರಿಗೂ ಏನೂ ಸಂದಾಯವಾಗ ಬೇಕಾದುದಿರಲಿಲ್ಲ.

ಭೋಜನಗೃಹದ ಅಯ್ಯರ್, ಎಂದ:

"ಹೇಳದೆ ಕೇಳದೆ ಹೋದಿರಿ ನೀವು. ಪರೀಕ್ಷೆ ಏನಾಯ್ತು?"

ಮುರಲಿ ವಿವರಿಸಿದಾಗ ಆತನೆಂದ:

"ಹಾಗಾ? ಪಾಪ! ನನಗೆ ಗೊತ್ತೇ ಇರ್ಲಿಲ್ಲ."

ಕೊಠಡಿಯ ಮಾಲಿಕರೆಂದರು:

"ಯುದ್ಧಕಾಲ. ಪ್ರತಿಯೊಂದಕ್ಕೂ ಬೆಲೆ ಜಾಸ್ತಿ ಆಗ್ತಿದೆ. ಬಾಡಿಗೆ ಎರಡು ರೂಪಾಯಿ ಹೆಚ್ಚಿಸ್ಬೇಕೊಂತಿದೀನಿ. ರಜಾದಲ್ಲೂ ನೀವೇ ಇಟ್ಕೊಳ್ಳೋದಾದರೆ ಆ ಎರಡರಲ್ಲಿ ಒಂದು ರೂಪಾಯಿ ರಿಯಾಯತಿ ಬಿಡ್ತೀನಿ."

"ಸದ್ಯಕ್ಕೆ ಕೊಠಡಿ ಬೇಡಿ ಇವರೆ."

"ನಿಮ್ಮಂಥ ಸಜ್ಜನರನ್ನು ಬಿಡೋಕೆ ಸಂಕಟವಾಗುತ್ತೆ. ಮುಂದಿನ ಸಾರೆ ಊರಿಂದ ಬಂದಾಗ ಮೊದಲು ನನ್ನನ್ನು ಕೇಳ್ಕೊಂಡುಹೋಗಿ. ಖಾಲಿ ಇದ್ದರೆ ಖಂಡಿತ ನಿಮಗೇ ಕೊಡ್ತೀನಿ."

"ಆಗಲಿ."

ಪಾಠಹೇಳುತ್ತಿದ್ದ ಮನೆಗಳಿಂದ ಬರಬೇಕಾದುದೇನೂ ಇರಲಿಲ್ಲವಾದರೂ ಹುಡುಗರನ್ನು ನೋಡಲೆಂದು ಮುರಲೀಧರ ಹೋದ.

ಬೆಳಗಿನ ಮನೆಯಲ್ಲಿ, ನಳಿನಿ–ಶ್ಯಾಮರ ತಾಯಿ ಕೇಳಿದರು:

"ಪರೀಕ್ಷೇಲಿ ಚೆನ್ನಾಗಿ ಮಾಡಿದಿರಾ ಮೇಸ್ಟ್ರೆ?"

ನಿಜಸಂಗತಿ ತಿಳಿದಾಗ ಅವರು ಉದ್ಗರಿಸಿದರು:

"ಅಯ್ಯೋ ಪಾಪ!"

ಹುಡುಗರ ಅಕ್ಕನನ್ನು ಕಾಣಲು ಮುರಲೀಧರ ಬಯಸಿದ. ಆದರೆ ಆ ಸುಂದರಿ ಹೊರ ಬರಲಿಲ್ಲ.

ಪಿಸುಮಾತಿನಲ್ಲಿ ಶ್ಯಾಮನೆಂದ:

"ಒಂದು ಗುಟ್ಟುಸಾರ್. ನಮ್ಮಕ್ಕನಿಗೆ ಮದುವೆ ಗೊತ್ತಾಗಿದೆ. ಮುಂದಿನ ತಿಂಗಳು. ನೀವು ಖಂಡಿತಾ ಬರ್ಬೇಕು."

"ಓ!" ಎಂದ ಮುರಲೀಧರ ಮನಸ್ಸಿನ ದಡಕ್ಕೆಲ್ಲೋ ಎಂದೋ ಅಂಟಿ ನಿಂತು ಕೊಂಡಿದ್ದ ಮೋಹಕ ನೀರಗುಳ್ಳೆ ಒಡೆದು ಹೋಗಿತ್ತು.

ವಿದಾಯ ಹೇಳಲು ಬಂದಿದ್ದ ಉಪಾಧ್ಯಾಯನಿಗೆ ಉಪಾಹಾರ ದೊರೆಯಿತು. ಹುಡುಗರ ಅಕ್ಕನ ವಿಷಯದಲ್ಲಿ ಮುರಲೀಧರನಾದ ತಾನೂ ಹುಚ್ಚು ಕಲ್ಪನೆಗೆ ಒಳ ಗಾದೆನಲ್ಲ ಎಂದು ಆತನಿಗೆ ನಗಬೇಕೆನಿಸುತ್ತಿತ್ತೆ ಹೊರತು, ಕಾಫಿ ತಿಂಡಿ ರುಚಿಸಲಿಲ್ಲ.

ಆತ ಹೊರಡುತ್ತಿದ್ದಂತೆ ಹುಡುಗರ ತಾಯಿ ಅಂದರು: "ಯಾರನ್ನಾದರೂ ಗೊತ್ಮಾಡ್ಬೇಕಾಗುತ್ತೆ ಪಾಠಹೇಳೋಕೆ. ನಳಿನೀನ ಕಾನ್ವೆಂಟಿಗೆ ಕಳಿಸೋಣಾಂತಿದೀನಿ. ಹೀಗಾಗಿ—"

ಮುರಲೀಧರ ಹಸನ್ಮುಖಿಯಾಗಿರಲೆತ್ನಿಸುತ್ತ ಉತ್ತರವಿತ್ತ:

"ಏನೂ ಪರವಾಗಿಲ್ಲ."

ಆತ ನಮಸ್ಕರಿಸಿ ಹೊರಟ. ಮಗಳ ಮದುವೆಗೆ ಬನ್ನಿ—ಎಂದು ಆ ತಾಯಿ ಯೇನೂ ಆತನನ್ನು ಕರೆಯಲಿಲ್ಲ.

ಸಂಜೆಯ ಮನೆಯಲ್ಲಿ ಊಟಕ್ಕೆ ಕರೆದರು. ಸಹಾನುಭೂತಿಯ ಮಾತುಗಳೇ.

ಆ ಹುಡುಗರ ತಾಯಿ ಅಂದರು:

"ಮುಂದಿನ ವರ್ಷವೂ ನೀವೇ ಬರಬೇಕು ಮೇಸ್ಟ್ರೆ. ಬೇರೆ ಯಾರಿಂದಲೂ ಹುಡುಗರು ಪಾಠ ಹೇಳಿಸಿಕೊಳ್ಳೊಲ್ವಂತೆ."

ಮುಂದಿನ ವರ್ಷ ದೂರದಮಾತು—ಎಂದು ಮುರಲೀಧರ ಮನಸ್ಸಿನಲ್ಲೆ ಅಂದು ಕೊಂಡರೂ ಅವರೆದುರು ಹೇಳಿದ:

"ಆಗಲಿ ತಾಯಿ."

....ತನ್ನ ನಿರ್ಧಾರವನ್ನು ನಾರಣಪ್ಪನಿಗೆ ವಿವರಿಸಿ ಹೇಳಲು ಮುರಲೀಧರನಿಗೆ ಬಹಳಹೊತ್ತು ಹಿಡಿಯಿತು.

ಬೆಂಗಳೂರು ಬಿಟ್ಟು ಸ್ನೇಹಿತ ಊರಿಗೆ ಹಿಂತೆರಳುವನೆಂಬುದನ್ನು ಗ್ರಹಿಸುವುದೇ ನಾರಣಪ್ಪನಿಂದ ಸಾಧ್ಯವಾಗಲಿಲ್ಲ.

"ಹೆಚ್ಚೆಂದರೆ ಒಂದು ತಿಂಗಳು ನಾಣಿ. ವಾಪಸು ಬಂದ್ಬಿಡ್ತೀನಿ."

"ಏನ್ಮೋಡ್ಬೇಕೂಂತಿದೀಯಾ?"

"ಉದ್ಯೋಗ. ಉದ್ಯೋಗಂ ಪುರುಷ ಲಕ್ಷಣಂ!"

"ಏನು ಹೇಳಬೇಕೋ ತೋಚ್ತಾಇಲ್ಲ. ಅಂತೂ ಬಾ."

"ಖಂಡಿತವಾಗಿಯೂ ಬರ್ತೀನಿ. ಮನೆಯ ಕುರುಕ್ಷೇತ್ರ ಯುದ್ಧ ನಿಲುಗಡೆಗೆ ಬರೋವರೆಗೆ ನಾನು ತಾಯಿಯ ಜತೆ ಇರೋದು ವಾಸಿ. ಆಮೇಲೆ ಏನಿದ್ದರೂ

ಬೆಂಗಳೂರೇ. ನಾನು ಮನುಷ್ಯನಾಗಿ ವಿಕಾಸಗೊಂಡಿರೋದೇ ಇಲ್ಲಿಯ ಗಾಳಿ ಕುಡಿದು."

ನಾರಣಪ್ಪನ ತಾಯಿ ಅಂದರು:

"ನಿಮ್ಮ ಅಮ್ಮನನ್ನೂ ಒಮ್ಮೆ ಕರಕೊಂಡು ಬಾ ಮಗೂ."

"ಈ ವಯಸ್ನಲ್ಲಿ ಅವರು ಊರುಬಿಟ್ಟು ಹೊರಡ್ತಾರೋ ಇಲ್ಲವೋ. ನಾನಂತೂ ಬಂದೇ ಬರ್ತೀನಿ."

"ಸುಮ್ನೆ ಅಲ್ಲಿ ಇಲ್ಲಿ ಅಲೆದು ಕಷ್ಟ ಪಡಬೇಡ. ಇದೇ ನಿನ್ನ ಮನೆ ಅಂತ ತಿಳ್ಕೊ."

ನಾರಣಪ್ಪನೂ ಅಂದ:

"ಹೌದು ಮುರಲಿ. ಈ ಮನೇಲಿರೋ ಜಾಗ ಸಾಕು. ಇಲ್ಲಿಗೆ ಬಾ."

"ಹೂಂ," ಉತ್ತರ ಒತ್ತರಿಸಿಕೊಂಡು ಹೊರಬಂತು.

....ಪುಸ್ತಕಗಳ ಪೆಟ್ಟಿಗೆಯನ್ನು ಕೊಠಡಿಯಿಂದ ನಾರಣಪ್ಪನ ಮನೆಗೇ ಮುರಲೀಧರ ಸಾಗಿಸಿದ. ಬಟ್ಟೆಬರೆಗಳನ್ನೆಲ್ಲ ಜಮಖಾನದೊಳಗಿರಿಸಿ ಸುರಳಿ ಸುತ್ತಿ ಬಸ್ ನಿಲ್ದಾಣದೆಡೆಗೆ ನಡೆದ.

## ೧೨

ಮುರಲೀಧರ ಮನೆಗೆ ಬಂದು ಎರಡು ವಾರಗಳೂ ಕಳೆದಿರಲಿಲ್ಲ. ಒಡ ಹುಟ್ಟಿದವರಲ್ಲಿ ಎರಡನೆಯವನು ನಿರ್ಧಾರದ ಧ್ವನಿಯಲ್ಲಿ ಅಣ್ಣನಿಗೆ ಅಂತಿಮ ನಿರೂಪವನ್ನಿತ್ತ:

"ಕೊಡು ನನ್ನ ಪಾಲು."

ಅದು ಸರಿಯಲ್ಲವೆಂದು ವಾದಿಸಲು ಅಣ್ಣ ಯತ್ನಿಸಿದ:

"ತಂದೆ ಸತ್ತ ಮಾರನೇ ದಿನವೇ ಕುಟುಂಬ ಛಿದ್ರವಾಯ್ತೂಂತ ಜನ ಆಡೋ ಹಾಗೆ ಮಾಡ್ತೀಯೇನಪ್ಪ?"

"ಆಡೋ ಜನ ಆಡ್ಕೋತಾರೆ. ನನಗೇನು ಅದರಿಂದ? ಅಪ್ಪಯ್ಯ ಇರುವಾಗ್ಲೇ ನಾನು ಹೇಳಿರ್ಲಿಲ್ವೆ ಪಾಲಾಗ್ಬೇಕೂಂತ?"

"ನೋಡು. ಯೋಚಿಸಿ ನೋಡು."

"ಇನ್ನು ಯೋಚಿಸೋದು ಏನೂ ಉಳ್ದೇ ಇಲ್ಲ. ಒಳ್ಳೇ ಮಾತಿನಲ್ಲಿ ಪಾಲಿಗೆ ಒಪ್ಪಿ, ಸರಿ. ಇಲ್ದೇ ಹೋದ್ರೆ ಕೋರ್ಟಿಗೆ ಹೋಗ್ತೀನಿ."

"ಮನೆಮುರುಕ! ಥೂ!"

"ಏನಂದೆ?"

ಕೆರಳಿದ ಚಿಕ್ಕವನು ದೊಡ್ಡವನ ಮೇಲೆ ಕೈ ಮಾಡಲು ಹೋದ. ದೊಡ್ಡವನೂ ಕೈ ಎತ್ತಿದ. ಮುರಲೀಧರನ ಅತ್ತಿಗೆಯರಿಬ್ಬರೂ "ಅಯ್ಯಯ್ಯೋ!" ಎಂದರು. ಹಿತ್ತಿಲಲ್ಲಿದ್ದ ಮುರಲೀಧರ ಓಡಿ ಬಂದ, ಅಣ್ಣಂದಿರ ಜಗಳ ಬಿಡಿಸಲು. ತಾಯಿ ಧಾವಿಸಿ ಬಂದರು ಬಟ್ಟೆ ಒಣಗಲು ಹಾಕುವ ಮಡಿಕೋಲನ್ನೆತ್ತಿಕೊಂಡು.

"ಮುಂಡೇಗಂಡ್ರಾ! ಬಿಡ್ರೋ! ಬಿಟ್ಬಿಡ್ರೋ! ನಾಚಿಕೆ ಇಲ್ದ ಪಾಪಿಗಳಾ!"

ಅಜ್ಜಿಯ ಧ್ವನಿ ಕೇಳಿ ಮೊಮ್ಮಕ್ಕಳು ಅಳತೊಡಗಿದುವು.

ಜಗಳ ನಿಂತಿತು. ಆದರೆ ತಾಯಿಯ ರೋದನ ನಿಲ್ಲಲಿಲ್ಲ. ಆಕೆಯನ್ನು ಸಮಜಾಯಿಸಲು ಮುರಲೀಧರ ಯತ್ನಿಸಿದ.

"ಸುಮ್ಮನೆ ಅಳಬೇಡವಮ್ಮ."

"ಅಯ್ಯೋ! ಅಯ್ಯೋ! ಈ ಗತಿ ಬಂತಲ್ಲಪ್ಪ ಪರಮಾತ್ಮ!"

ಆ ಊರಲ್ಲಿರಲು ಮುರಲೀಧರನ ಚಿಕ್ಕಣ್ಣ ಕುಮಾರಸ್ವಾಮಿಗೆ ಇಷ್ಟವಿರಲಿಲ್ಲ. ಮೊದಲಿನಿಂದಲೂ ಅಷ್ಟೆ. ಹೊಲದಲ್ಲಿ ಮೈ ಬಗ್ಗಿಸಿ ಒಂದು ದಿವಸವೂ ಆತ ಕೆಲಸ ಮಾಡಿದವನಲ್ಲ. ಹಳ್ಳಿಯೂ ಅಲ್ಲದ ಪಟ್ಟಣವೂ ಅಲ್ಲದ ಆ ಊರಲ್ಲಿ ಚಲಚ್ಚಿತ್ರ ಮಂದಿರವಿರಲಿಲ್ಲ. ಕುಮಾರಸ್ವಾಮಿಗಾದರೋ ಪ್ರಾಣಪ್ರಿಯವಾದುದು ಸಿನಿಮಾ. ಆತ ಹೇಳದೆ ಕೇಳದೆ ಕೋಲಾರಕ್ಕೆ ಎದ್ದು ಬಿಡುತ್ತಿದ್ದ.

ತಂದೆ ಆತನನ್ನು ಬಯ್ಯುವುದಿತ್ತು:

'ಹಾಳಾಗಿ ಹೋಗ್ತೀಯಾ ಸೂ–ಮಗನೆ!'

ಅಂತಹ ಬಯ್ಗಳಿಂದ ಕುಮಾರಸ್ವಾಮಿ ಮತ್ತಷ್ಟು ಕಠಿನಮನಸ್ಕನಾದನೇ ಹೊರತು ಸುಧಾರಿಸಲಿಲ್ಲ.

ಮದುವೆಯಾಯಿತು. ತಂದೆಯೂ ಆದ ಆತ. ಆದರೆ 'ಖಯಾಲಿ' ಮಾತ್ರ ಬಿಡಲಿಲ್ಲ.

ಆತನೆನ್ನುತ್ತಿದ್ದ:

'ಕೋಲಾರಕ್ಕೆ ಹೊರಟ್ಹೋಗ್ತೀನಿ. ದಿನಸಿನ ಅಂಗಡಿ ತೆರೀತೀನಿ.'

ಹಿರಿಯಣ್ಣ ಲಕ್ಷ್ಮೀಪತಿ ಸಜ್ಜನ. ಪರಿಪರಿಯಾಗಿ ಆತ ಹೇಳುತಿದ್ದ:

'ವ್ಯಾಪಾರದಲ್ಲಿ ಉದ್ಧಾರವಾಗೋದಕ್ಕೆ ನಾವೇನು ಶೆಟ್ಟರೆ? ಬೇಡ. ಬೇಡ.'

ಅಲ್ಲಿಗೇ ನಿಂತ ಆ ದಿನದ ಕಲಹ ಮತ್ತೆ ಪ್ರಜ್ವಲಿಸಿತು. ಮುರಲೀಧರನ ಅತ್ತಿಗೆಯರುತೂ ಒಬ್ಬರನ್ನೊಬ್ಬರು ಹೊರದೂಡಲು ಆತುರವಾಗಿಯೇ ಇದ್ದರು. ವಿರಸ ಹೆಚ್ಚಿಸಲು ಸಣ್ಣ ಪುಟ್ಟ ಸಂದರ್ಭಗಳನ್ನೆಲ್ಲ ಅವರು ಉಪಯೋಗಿಸಿದರು.

ಲಕ್ಷ್ಮೀಪತಿ ಕಿರಿಯ ತಮ್ಮನನ್ನು ಕೇಳಿದ:

"ಏನು ಹೇಳ್ತೀಯಾ ಮುರಲಿ?"

ಸಂಸಾರ ಒಡೆಯದೆ ಉಳಿದರೇ ಮುರಲಿಗೆ ಸಂತೋಷವಾಗುತ್ತಿತ್ತು. ಆದರೆ ಆತನ ಮಾತಿಗೆ ಕಿವಿಗೊಡುವವರು ಯಾರಿದ್ದರು?

ಪತಿಗೃಹಗಳಿಗೆ ತೆರಳಿದ್ದ ಅಕ್ಕಂದಿರಿಬ್ಬರಿದ್ದರು ಮುರಲೀಧರನಿಗೆ. ಕೊಟ್ಟ ಹೆಣ್ಣು ಮನೆಯಿಂದ ಹೊರಗೆ. ತಂದೆ ತೀರಿದ ಸುದ್ದಿ ಕೇಳಿದಾಗ ಅತ್ತೆ ಮನೆಯಲ್ಲೇ ಅವರು ಅತ್ತರು. ಒಬ್ಬಾಕೆ ಬಂದು ಹೋದಳು ತಾಯಿಯನ್ನು ನೋಡಲೆಂದು. ಆದರೆ ಆಸ್ತಿ ಪಾಲಾಗುವ ವಿಷಯ ಅವರಿಗೆ ಬರೆಯಬೇಕಾದುದಿರಲಿಲ್ಲ, ಅವರನ್ನು ಕೇಳಬೇಕಾದುದಿರಲಿಲ್ಲ.

ಕುಮಾರಸ್ವಾಮಿ ಅಣ್ಣನನ್ನು ಕೇಳಿದ:

"ನಿನಗೆ ಹೊಲ ಬೇಕೋ, ಮನೆಯೋ?"

"ಮುರಲಿಯೂ ಒಬ್ಬನಿದ್ದಾನೆ, ಮರೀಬೇಡ," ಎಂದ ಲಕ್ಷ್ಮೀಪತಿ.

"ಸರಿ ಹಾಗಾದರೆ, ಏರ್ಪಾಟು ಮಾಡು."

ಪಾಲಾಗಿಯೇ ಹೋಯಿತು. ಲಕ್ಷ್ಮೀಪತಿ ಮುರಲೀಧರನಿಗೋಸ್ಕರ ಮನೆ, ಹಿತ್ತಿಲು, ಅದಕ್ಕೆ ಅಂಟಿಕೊಂಡಿದ್ದ ಒಂದು ಎಕರೆ ಹೊಲ. ಉಳಿದ ಹೊಲವೆಲ್ಲ ಕುಮಾರಸ್ವಾಮಿಗೆ.

ಮೊದಲೇ ಸಿದ್ಧಗೊಳಿಸಿದ್ದ ಗಿರಾಕಿಯನ್ನು ಕರೆದು ತಂದು ಹೊಲವನ್ನು ಆತ ಮಾರಿದ. ಎರಡೂವರೆ ಸಾವಿರ ರೂಪಾಯಿ ಬಂತು. ಕೋಲಾರಕ್ಕೆ ಹೋಗಿಬಂದ ಒಂದೆರಡು ಸಾರೆ. ಟ್ಯಾಕ್ಸಿ ತಂದು ಸಂಸಾರ ಸಮೇತನಾಗಿ ಹೊರಟೇ ಹೋದ.

ಹೃದಯ ಬಿರಿಯುವವರೆಗೂ ತಾಯಿ ರೋದಿಸಿದರು. ಕೊನೆಯಲ್ಲಿ 'ಹಣೆ ಬರಹ' ಎಂದು ಸಮಾಧಾನ ಪಟ್ಟುಕೊಂಡರು.

"ನೀವಿಬ್ಬರಾದರೂ ಜತೇಲಿ ಇರೀಪ್ಪಾ," ಎಂದು ಹಾರೈಸಿದರು.

ಆ ಮನೆಯಲ್ಲಿ ಬದುಕು ದುಸ್ಸಹವಾಯಿತು ಮುರಲಿಗೆ. ಆದಷ್ಟು ಬೇಗನೆ ಮನೆ ಬಿಟ್ಟು ಹೊರಡಲು ಆತ ತೀರ್ಮಾನಿಸಿದ. ಮುಂದೆ ಮಾಡಬೇಕಾದುದೇನೆಂಬುದು ಮಾತ್ರ ಸ್ಪಷ್ಟವಾಗಿರಲಿಲ್ಲ. ಕೆಲಸ ಹುಡುಕಬೇಕು. ಯಾವ ಕೆಲಸ? ಎಂತಹ ಕೆಲಸ?...

ಮನೆಯ ಪರಿಸ್ಥಿತಿಯ ಪರಿಚಯ ಮಾಡಿಕೊಟ್ಟು ಮುರಲೀಧರ ಬರೆದಿದ್ದ ಕಾಗದಕ್ಕೆ ನಾರಣಪ್ಪನಿಂದ ಉತ್ತರ ಬಂದಿತ್ತು. ಅದಕ್ಕೆ ಮುರಲೀಧರ ಪ್ರತ್ಯುತ್ತರ ವಿತ್ತಿರಲಿಲ್ಲ. ನಾಳೆ ಬರೆದರಾಯಿತು, ನಾಡದು ಬರೆದರಾಯಿತು, ಎಂದು ದಿನ ತಳ್ಳಿದ್ದ.

ಗೆಳೆಯನಿಂದ ಮತ್ತೊಂದು ಕಾಗದ ಬಂತು, ಅನಿರೀಕ್ಷಿತವಾಗಿ. ಅದರ ಜತೆ ಯಲ್ಲಿ ಪತ್ರಿಕೆಯಿಂದ ಕತ್ತರಿಸಿದ ಎರಡು ತುಣುಕುಗಳಿದ್ದುವು.

ಒಂದು, ಕಾಲೇಜು ಮ್ಯಾಗಜೀನಿನ ವಿಮರ್ಶೆ, 'ಪ್ರಜಾಹಿತ' ಪತ್ರಿಕೆಯಲ್ಲಿ ಬಂದುದು. ಅದರಲ್ಲಿ ಎರಡು ಮೂರು ಸಾಲುಗಳ ಕೆಳಗೆ ನಾರಣಪ್ಪ ಮಸಿಯಿಂದ ಗೆರೆ ಎಳೆದಿದ್ದ. ಅಲ್ಲಿತ್ತು, 'ದೇವತೆಗಳ ಕಣ್ಣೀರು' ಕಥಾ ಚಿತ್ರದ ಪ್ರಶಂಸೆ. 'ಅಪೂರ್ವ ವೆನಿಸುವಂತಹ ಬರೆವಣಿಗೆ. ಮುರಲೀಧರರದು ಉಜ್ವಲ ಭವಿಷ್ಯವುಳ್ಳ ಲೇಖನಿ ಯೆಂದು ಧಾರಾಳವಾಗಿ ಹೇಳಬಹುದು' ವಿಮರ್ಶಕರ ಹೆಸರಿರಲಿಲ್ಲ. [ಸ್ವತಃ ಸಂಪಾ

ದಕರೇ ಬರೆದಿದ್ದಾರೇನೊ] ಓದುತ್ತ ಮುರಲೀಧರನ ತುಟಿಗಳ ಮೇಲೆ ಮುಗುಳುನಗೆ ಮೂಡಿತು.

ಇನ್ನೊಂದು, ವಾರ್ತೆ. 'ನಂಜುಂಡಮೂರ್ತಿಯವರ ಬಂಧನ.' 'ಬಹಳ ದಿವಸ ಗಳಿಂದ ಸಂಸ್ಥಾನದ ಪೋಲೀಸರು ಹುಡುಕುತ್ತಿದ್ದ ಸಮಾಜವಾದಿ ನಾಯಕ ನಂಜುಂಡ ಮೂರ್ತಿಯವರನ್ನು ನಿನ್ನೆ ರಾತ್ರಿ ಬೆಂಗಳೂರು ಗುಂತಕಲ್ ಹಾದಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಬಂಧಿಸಲಾಯಿತು.' ಅಲ್ಲೆ ಚಿಕ್ಕ ಹಸ್ತಾಕ್ಷರದಲ್ಲಿ ನಾರಣಪ್ಪ ಬರೆ ದಿದ್ದ: 'ಅಣ್ಣನ ಸ್ನೇಹಿತರನ್ನು ಕಳುಹಿಸಿಕೊಡುವುದಕ್ಕೋಂತ ಕಲಾಸಿಪಾಳ್ಯಂ ಬಸ್ ನಿಲ್ದಾಣಕ್ಕೆ ಆವತ್ತು ಬಂದಿರಲಿಲ್ವೆ? ಅವರು—'

ಆ ತುಣುಕು, ನಾರಣಪ್ಪನ ವಿಶಿಷ್ಟ ದುಡಿಮೆಯ ಲೋಕಕ್ಕೆ ಮುರಲೀಧರನನ್ನು ಕರೆದೊಯ್ದಿತು. ಅಣ್ಣನ ಬಂಧನವಾದ ಮೇಲೂ ಅಪಾಯವೆಂದು ಗೊತ್ತಿದ್ದೂ ನಾರಣಪ್ಪ ಚಟುವಟಿಕೆಗಳನ್ನು ಮುಂದುವರಿಸಿದ್ದ...

ಪುನಃ–'ಉಜ್ವಲ ಭವಿಷ್ಯತ್ತುಳ್ಳ ಲೇಖನಿ—'

ತಾಯಿ ಕೇಳಿದರು:

"ಯಾರದೋ ಕಾಗದ?"

"ನನ್ನ ಸ್ನೇಹಿತ ಬರೆದಿದಾನಮ್ಮ. ನಾಣಿ ಅಂತ."

"ಏನು ಬರೆದಿದಾನೆ?"

ತಾಯಿಯ ಪ್ರಶ್ನೆ ಕೇಳಿ ಮುರಲೀಧರನಿಗೆ ನಗು ಬಂತು. ಕಾಗದದಲ್ಲೇನಿತ್ತು ತಾಯಿಗೆ ತಿಳಿಸಲು? ಆದರೂ ನಾರಣಪ್ಪನ ತಾಯಿ ಹೇಳಿದ್ದುದು ನೆನಪಾಗಿ ಆತನೆಂದ:

"ನಿನ್ನನ್ನೊಮ್ಮೆ ಕರಕೊಂಡು ಬೆಂಗಳೂರಿಗೆ ಬರಬೇಕಂತೆ."

ಸ್ವಲ್ಪ ಹೊತ್ತು ಸುಮ್ಮನಿದ್ದು ತಾಯಿ ಅಂದರು:

"ದೇವರ ಇಚ್ಛೆ ಹಾಗಿದ್ದರೆ ಅದೂ ಆಗುತ್ತೆ. ಬೆಂಗಳೂರಲ್ಲೇ ನಿನಗೆ ದೊಡ್ಡ ಕೆಲಸ ಸಿಕ್ಕಿ, ಅಲ್ಲಿಯೇ ನೀನು ಮನೆ ಮಾಡಿದರೆ ಬಂದೇಬರ್‍ತೀನಿ."

ದೊಡ್ಡ ಕೆಲಸ–ಮನೆ ಮಾಡುವುದು...ಮುರಲೀಧರ ನಕ್ಕ. ಸದ್ಯಃ 'ಯಾಕೆ ನಗ್ತಿದೀಯಾ?' ಎಂದು ಕೇಳಲಿಲ್ಲ ತಾಯಿ. ಆಕೆಯ ಮನಸ್ಸಿನಲ್ಲೇನಿತ್ತೆಂಬುದು ಮಗ ನಿಗೆ ತಿಳಿಯದೆ? 'ಕಿರಿಯವನಿಗೂ ಒಂದು ಮದುವೆಯಾಯಿತೆಂದರೆ'....ಬಳಿಕ 'ಆತನ ಮೊಮ್ಮಗುವನ್ನೂ ನೋಡುವಂತಾಯಿತೆಂದರೆ....' ತನ್ನ ವಂಶಾಭಿವೃದ್ಧಿಯ ಯೋಚನೆ ಯೊಂದೇ ಮಾತೆಗೆ–ಪ್ರಾಚೀನ ಕಾಲದಲ್ಲೂ ಅಷ್ಟೆ. ಈಗಿನ ಕಾಲದಲ್ಲೂ ಅಷ್ಟೆ.

ಅದಂತೂ ಯಾವ ರೀತಿಯಲ್ಲೂ ತನಗೆ ಸಂಬಂಧಿಸದ ಯೋಚನೆ.

ಮುರಲೀಧರ ಹಿತ್ತಿಲಲ್ಲಿ ಸುತ್ತಾಡಿದ. ಹೊಲದ ಏರಿಯ ಮೇಲೆ ನಡೆದು ಹೋದ. ಕೆಲವೇ ದಿನಗಳ ಹಿಂದಿನವರೆಗೂ ತಮ್ಮ ಸೊತ್ತಾಗಿದ್ದ ಹೊಲಗಳನ್ನು ನೋಡಿದ....

ಅವರದೊಂದೇ ಕುಟುಂಬವಲ್ಲ, ಕೋಟಿ ಕುಟುಂಬಗಳು ಆ ರೀತಿ. ಅವಿಭಕ್ತ

ಕುಟುಂಬಗಳು ಒಡೆದು ಹೋಳಾಗುವುದೇ ನಿಯಮವೇನೋ ಎನ್ನುವಂತೆ....

ತಾನು ಹೊರಡಬೇಕು; ಹೊರಡಲೇಬೇಕು—ಬೆಂಗಳೂರಿಗೆ.

......ಇನ್ನೊಬ್ಬನ ಚಾಕರನಾಗದೆ ದುಡಿಯುವ ಆಸೆಯೊಂದಿತ್ತು ಆತನಿಗೆ. ಸರಕಾರದ ನೌಕರನಾಗುವುದಂತೂ ಊಹಿಸುವುದೂ ಸಾಧ್ಯವಿಲ್ಲದ ವಿಷಯ. ಅಂತಹ ಉದ್ಯೋಗದ ಬಗೆಗೆ ಹಿಂದೆಯೇ ಆತನಿಗೆ ಗೌರವವಿರಲಿಲ್ಲ. ನಾರಣಪ್ಪನ ಪರಿಚಯ ವಾದ ಮೇಲಂತೂ ಅಂಥವರ ವಿಷಯದಲ್ಲಿ ತಿರಸ್ಕಾರ ಭಾವ ಮೂಡಿತ್ತು....

ನಾರಣಪ್ಪನಿಗೂ ಒಪ್ಪಿಗೆಯಾಗುವಂತಹ ಉದ್ಯೋಗ ತಾನು ಕೈಗೊಳ್ಳಬೇಕು.

ವಿದ್ಯಾಭ್ಯಾಸ? ಇನ್ನು ಸೆಪ್ಟೆಂಬರಿನ ಮಾತು ತಾನೆ? ಆಗ ನೋಡಿಕೊಂಡ ರಾಯಿತು.

ಅಥವಾ ಮುಂದಿನ ಮಾರ್ಚ್‌ನಲ್ಲೇ....

'ಉಜ್ವಲ ಭವಿಷ್ಯತ್ತುಳ್ಳ ಲೇಖನಿ' ಎಂದಿದ್ದ ವಿಮರ್ಶಕ ಮಹಾನುಭಾವ. ಆತನನ್ನೇ ಕೇಳಬೇಕು, ಹಾಗೆಂದರೆ ಏನು ಎಂದು.

ಲೇಖನಿಗಿತ್ತು ಭವಿಷ್ಯತ್ತು. ತನಗೆ?

ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದುವು. ಮರುಳುಗೊಳಿಸುವ ಇಂಚರ ಅದು. ಏರಿಯ ಇಕ್ಕೆಲಗಳ ಗರಿಕೆ ಹುಲ್ಲು ಒಣಗಿದ್ದರೂ ಕುಡಿಗಳು ಹಸುರಾಗಿ ತೋರಿದುವು. ಶುಭ್ರವಾಗಿತ್ತು ಆಕಾಶ. ತಣ್ಣನೆ ಬೀಸುತ್ತಿತ್ತು ಗಾಳಿ.

ಯೋಚನೆಯ ಮೊಗ್ಗೊಂದು ಅರಳಿ ಸುವಾಸನೆ ಬೀರತೊಡಗಿತ್ತು. ವರ್ಣ ರಂಜಿತವಾದ ಸುಂದರ ಪುಷ್ಪ. ಕುಲುಕುಲು ನಗುತ್ತ ಅದು ಹೇಳುತ್ತಿತ್ತು:

'ಇದು ನಿನ್ನದೇ ಸೃಷ್ಟಿ. ನಿನ್ನದೇ. ನನಗೆ ನೀನೇ ಸ್ವಾಮಿ ನೀನೇ...'

ಮನಸ್ಸು ಎಚ್ಚರಿಸುತ್ತಲೂ ಇತ್ತು:

'ಹುಚ್ಚು ಕಣೋ, ಬರೇ ಹುಚ್ಚು. ನಂಬಬೇಡ....'

ಆದರೆ ಮುರಲೀಧರ ಆಗಲೆ ಬಲೆಯೊಳಗೆ ಸಿಲುಕಿದ್ದ. ನವುರಾದ ರೇಶಿಮೆಯ ಎಳೆಗಳಿವು ಎಂದು ಮುಟ್ಟಿ ನೋಡುತ್ತ ಆತ ಅಂದುಕೊಂಡ:

'ಯಾಕಾಗಬಾರದು? ನನ್ನ ಸ್ವಾಮಿ ನಾನೇ ಯಾಕಾಗಬಾರದು?'

ಲೇಖನಿಗೆ ಭವಿಷ್ಯತ್ತಿತ್ತು, ತನ್ನ ಲೇಖನಿಗೆ.

ಅಂತಹ ಲೇಖನಿಯಿದ್ದ ತನಗೇ ಭವಿಷ್ಯತ್ತಿತ್ತು....

ನಿರ್ಧಾರಕ್ಕೆ ಬಂದ ಮನಸ್ಸೆಂದಿತು:

'ಸರಿ ಹಾಗಾದರೆ.'

....ಆ ರಾತ್ರೆ ಮುರಲೀಧರ ನಾರಣಪ್ಪನಿಗೆ ಕಾಗದ ಬರೆಯಲು ಕುಳಿತ.

೧೩

ಲಕೋಟೆ ಸಾಕಷ್ಟು ದಪ್ಪಗಿತ್ತು. ಪರಿಚಯದ ಹಸ್ತಾಕ್ಷರ. ನಿರೀಕ್ಷಿಸಿದ್ದ ಕಾಗದವೇ.

"ಮುರಲಿ ಬರೆದಿದಾನಮ್ಮಾ" ಎನ್ನುತ್ತ ನಾರಣಪ್ಪ ಕವರನ್ನೊಡೆದು ಓದ ತೊಡಗಿದ.

ಪ್ರೀತಿಯ ನಾಣಿ,

ನೀನು ಬರೆದ ಎರಡು ಕಾಗದಗಳೂ ಬಂದವು. ಉತ್ತರ ತಡವಾಗಿದೆ. ಕ್ಷಮಿಸು.

ಮೊದಮೊದಲು, ಬರೆದು ತಿಳಿಸಬೇಕಾದ ವಿಷಯವೇ ಇಲ್ಲ ಎನಿಸುತ್ತಿತ್ತು. ಈ ಸಂಜೆಯವರೆಗೂ ಹಾಗೆಯೇ ಇತ್ತೆನ್ನಬೇಕು. ಆದರೆ ಈಗ, ಬರೆಯಬೇಕೆನ್ನಿಸಿದೆ.

ನೀನು ಕಳಿಸಿದ 'ಕಟಿಂಗ್'' ಗಳನ್ನೋದಿದೆ. 'ಭವಿಷ್ಯತ್ತುಳ್ಳ ಲೇಖನಿ' ಯ ವಿಷಯವನ್ನೋದಿ ['ಉಜ್ವಲ' ಎಂದೂ ಬರೆದಿರುವರಲ್ಲವೆ ಅವರು?] ತಮಾಷೆ ಎನಿಸಿತು. 'ದೇವತೆಗಳ ಕಣ್ಣೀರು' ಆ ರೀತಿಯ ವಿಶೇಷ ಪ್ರಸ್ತಾಪಕ್ಕೂ ಅರ್ಹವಾಗಿತ್ತೆಂದು ನಾನು ಭಾವಿಸಿಯೇ ಇರಲಿಲ್ಲ. ಏನಿದ್ದರೂ ಅದಕ್ಕೆ ಮೂಲ ಕಾರಣನು ನೀನು. ದೇವತೆಗಳು ಅತ್ತ ವಿಷಯ ನಾಲ್ಕು ಜನರಿಗೆ ಗೊತ್ತಾಗುವಂತೆ ಮಾಡಿದ ಶ್ರೇಯಸ್ಸು ನಿನ್ನದು... ಇನ್ನೊಂದು ಚೀಟಿಯಂತೂ ನಮ್ಮ ಪರಿಚಯ ಮೊದಲಾದ ದಿನಗಳನ್ನು ನೆನಪುಮಾಡಿಕೊಟ್ಟಿತು. ಹಿಂದೆ ನಿಮ್ಮಣ್ಣನ ದಸ್ತಗಿರಿಯಾದಾಗ ಫೋನ್ ಮಾಡಿ ಎರಡು ಸಾಲು ಹಾಕಿಸಬೇಕಾಯಿತು. ಈ ಸಲ ಅಂತಹ ಅಗತ್ಯ ಬೀಳಲಿಲ್ಲವಲ್ಲ ಎನ್ನುವುದು ಸಮಾಧಾನದ ವಿಷಯ. ಆ ಬೆಳಗ್ಗೆ ಬಸ್ ನಿಲ್ದಾಣದಿಂದ ನೀನು ಬಂದಾಗ ನಿಮ್ಮಣ್ಣನ ಸ್ನೇಹಿತರ ಪ್ರಸ್ತಾಪ ಮಾಡಿದ್ದೆ. ಆದರೆ, ಅವರು ಯಾರಿರಬಹುದೆಂದು ನಾನು ಊಹಿಸಲೂ ಇಲ್ಲ; ನೀನು ಹೇಳಲೂ ಇಲ್ಲ.

ಫಲಿತಾಂಶ ಪ್ರಕಟವಾದ ಬಳಿಕ ಮುಂದಿನ ಯೋಚನೆ ಎಂದಿದೀಯಾ. ಉತ್ತೀರ್ಣನಾಗುವ ವಿಷಯದಲ್ಲಿ ಸಂದೇಹ ಯಾತರದು? ನಿಮ್ಮಣ್ಣ ಚೆನ್ನಾಗಿರುವರೆಂದು ತಿಳಿದು ಸಂತೋಷವಾಯಿತು. ಇನ್ನೊಮ್ಮೆ ಹೋದಾಗ, ಅವರಿಗೆ ಪರಿಚಿತನಲ್ಲದ ನನ್ನ ವಂದನೆ ತಿಳಿಸು. ಅಕ್ಕ ಟೈಪ್‌ರೈಟಿಂಗ್ ಕ್ಲಾಸಿಗೆ ಹೋಗುತ್ತಿರುವ ವಿಷಯ ಬರೆದಿದೀಯಾ. 'ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ, ಹೊತ್ತು ಕಳೆಯುವುದು ಸುಲಭವಾಗುತ್ತದೆ,' ಎಂದು ನೀನು ಕೊಟ್ಟಿರುವ ಕಾರಣ ಸಮಂಜಸವಾಗಿಯೇ ಇದೆ. ತಕ್ಷಣವೇ ಉದ್ಯೋಗ ಕೈಗೊಳ್ಳುವ ಅಗತ್ಯವಿಲ್ಲದೆ ನೀನು ವಿದ್ಯಾಭ್ಯಾಸ ಮುಂದುವರಿಸುವಂತಾಗಲೆಂಬುದೇ ನನ್ನ ಹಾರೈಕೆ.

ಸ್ವಂತದ ವಿಷಯ. ಕಾಗದ ಬರೆಯಲು ಕುಳಿತಾಗಲೇ, ನಾನು ಮಾಡಿರುವ ಒಂದು ನಿರ್ಧಾರವನ್ನು ನಿನಗೆ ತಿಳಿಸಬೇಕೆಂದು ತೀರ್ಮಾನಿಸಿದ್ದೆ. ಅದೇನು ಎನ್ನುವೆಯೋ?

ಅದು ನಾನು ಕೈಗೊಳ್ಳಬೇಕಾದ ಉದ್ಯೋಗಕ್ಕೆ ಸಂಬಂಧಿಸಿದ್ದು. ಓದು ಮುಗಿಸುವ [ಅಂದರೆ ಪದವೀಧರನಾಗುವ] ಯೋಚನೆಯೇನೋ ಇದೆ. ಆದರೆ ಈಗ ಮನಸ್ಸಿನಲ್ಲಿ ಪ್ರಧಾನವಾಗಿರುವುದು, ತಕ್ಷಣವೇ ನಾನು ಸಂಪಾದಿಸುವ ವ್ಯಕ್ತಿಯಾಗಬೇಕೆನ್ನುವುದು.

ಸಂಪಾದಿಸುವ ವ್ಯಕ್ತಿಯನ್ನು ಸಂಪಾದಕ ಎನ್ನಬಹುದೋ?—ಬಾರದೋ? ನಾನಂತೂ 'ಸಂಪಾದಕರ ಜಾತಿಗೆ' ಸೇರಬೇಕೆಂದಿದ್ದೇನೆ! ಹೀಗಾಗಲೂ ನೀನೇ ಕಾರಣ. ನಾನು ಚೆನ್ನಾಗಿ ಬರೆಯುವವನೆಂದು ಹೊಗಳಿ ಕೆಡಿಸಿರುವ ಅಪರಾಧ ನಿನ್ನದು. ದೇವತೆಗಳ ಕಣ್ಣೀರಿಗೆ ಈ ಗತಿ ಒದಗದೆ ಇದ್ದಿದ್ದರೆ, ನನ್ನ ಲೇಖನಿಗೆ ಭವಿಷ್ಯತ್ತಿದೆ ಎಂದು ಆ ಮಹಾರಾಯ ಹೇಳದೆ ಇದ್ದಿದ್ದರೆ, ಇಷ್ಟು ಬೇಗನೆ ಇಂತಹ ನಿರ್ಧಾರ ಕೈಗೊಳ್ಳುತಿದ್ದೆನೋ ಇಲ್ಲವೋ.

ಅಂತೂ ಪತ್ರಿಕೋದ್ಯೋಗಿಯಾಗಬೇಕೆಂದು ನಿರ್ಧರಿಸಿದ್ದೇನೆ! ನಾನು ಕೈಕೊಳ್ಳುವ ಉದ್ಯೋಗ ನಾಣಿಗೆ ಒಪ್ಪಿಗೆಯಾಗಲೇಬೇಕೆನ್ನುವುದು ನನ್ನ ಶರತಗಳಲ್ಲೊಂದು. ಹೇಳು, ನಿನ್ನ ಅಭಿಪ್ರಾಯವೇನು? ನೀನು ಒಪ್ಪುವೆ ಎಂದು ಗೊತ್ತು!

ಮನೆಯಲ್ಲಿ ಇನ್ನೂ ಯಾರಿಗೂ ಹೇಳಿಲ್ಲ. ಬೆಂಗಳೂರಿಗೆ ಹೊರಡುವ ವಿಷಯ ನಾಳೆ ಇಲ್ಲಿ ಪ್ರಸ್ತಾಪಿಸುವೆ. ಸೋಮವಾರ ಹೊರಟು ಬರುವೆ. ಮೊದಲು ನಿನ್ನ ಭೇಟಿ. ಅನಂತರ ಮುಂದಿನ ಕಾರ್ಯಕ್ರಮ.

ನಿಮ್ಮ ಅಕ್ಕನಿಗೆ ನನ್ನ ನಮಸ್ಕಾರ ಹೇಳು. ತಾಯಿಯವರಿಗೆ ನನ್ನ ಪ್ರಣಾಮ ಸಲ್ಲಿಸು. ಸೋಮವಾರ ಬೆಳಗ್ಗಿನ ತಿಂಡಿ ನನಗೋಸ್ಕರ ಇಡಬೇಕಾಗಿಲ್ಲ. ಮಧ್ಯಾಹ್ನದ ಊಟಕ್ಕೆ ಮಾತ್ರ ನಾನು ಹಾಜರು!

ಇತಿ ಆತ್ಮೀಯ ವಂದನೆ

ನಿನ್ನ ಮುರಲಿ.

ಕಾಗದವನ್ನು ಓದಿ ಮುಗಿಸಿದ ನಾರಣಪ್ಪ, ಕುಳಿತಲ್ಲಿಂದಲೆ ಗಟ್ಟಿಯಾಗಿ ಹೇಳಿದ:

"ಅಮ್ಮಾ, ಮುರಲಿ ಸೋಮವಾರ ಬರ್ತಾನೆ."

ತಾಯಿ ಒಳಗಿಂದ ಬಂದು ಅಂದರು:

"ಸಂತೋಷವಪ್ಪ. ಜತೆ ಯಾರೂ ಇಲ್ಲಾಂತ ಹೇಳ್ತಾ ಇದ್ದೆ ನೋಡು. ಇನ್ನು ಸರಿಹೋಗುತ್ತೆ."

"ಆದರೆ ಮುರಲಿ ಕೆಲಸದಮೇಲೆ ಬರೋದು."

"ಏನು ಕೆಲಸ?"

"ಬೇಟೆಯಾಡೋದು ಅಮ್ಮ."

"ಎಂಥಾ ಬೇಟೆಯೊ?"

"ಉದ್ಯೋಗದ ಬೇಟೆ ಅಮ್ಮ."

ತಾಯಿ ನಕ್ಕು ಒಳ ಹೋದರು.

ನಾರಣಪ್ಪನ ಸೋದರಿ ಸರಸ್ವತಿ ಬಂದು, "ಎಲ್ಲಿದೆ ಕಾಗದ? ಕೊಡು, ಓದ್ದೋಣ," ಎಂದಳು.

೧೪

ಮುರಲೀಧರ ಪಾಲು ಕೇಳಿರಲಿಲ್ಲ. ಯಾವುದು ಯಾರಿಗೆ ಸೇರಿದುದೆಂಬ ಮಾತೇ ಬೇಡ, ಎಂದಿದ್ದ. 'ಪ್ರಾಯಸ್ಥನಾದೇಟ್ಗೆ, ಬೇಕಾದರೆ ಬರಕೊಟ್ಬಿಡ್ತೀನಿ ಎಲ್ಲಾ ನಿನ್ನದೇ ಅಂತ,' ಎಂದು ಹೇಳಿದ್ದ.

ಅವರಿಬ್ಬರೊಳಗೆ ಪಾಲಾಗದೇ ಇದ್ದರೆ ಮಾತ್ರ, ವಾಸಕ್ಕೊಂದು ಮನೆ, ಪ್ರಯಾಸಪಟ್ಟು ಉಣ್ಣಲೊಂದು ತುತ್ತು-ಸಾಧ್ಯವೆಂಬುದು ಅಣ್ಣ ಲಕ್ಷ್ಮೀಪತಿಗೆ ಗೊತ್ತಿತ್ತು. ಕಿರಿಯ ತಮ್ಮನ ವರ್ತನೆಯಿಂದ ಹೃದಯ ತುಂಬಿ ಬಂದು, ಗದ್ಗದಿತ ಕಂಠದಿಂದ ಆತನೆಂದಿದ್ದ:

'ವಯಸ್ನಲ್ಲಿ ನಾನೇ ಹಿರಿಯೋನಾದ್ರೂ ನೀನು ಅಣ್ಣ, ನಾನು ತಮ್ಮ ಅಂತ ಅನಿಸುತ್ತಲ್ಲೋ...'

ಮುರಲೀಧರ ಉದ್ಯೋಗ ಕೈಗೊಳ್ಳುವುದು ಅಗತ್ಯವೆಂಬುದನ್ನೂ ಲಕ್ಷ್ಮೀಪತಿ ಮನಗಂಡಿದ್ದ. ಮನೆಯಲ್ಲೇ ಇದ್ದುಬಿಡು-ಎಂದು ಹೇಳುವುದರಲ್ಲಿ ಅರ್ಥವಿರಲಿಲ್ಲ. ಸದ್ಯಕ್ಕೆ ಉದ್ಯೋಗ, ಸಾಧ್ಯವಾದರೆ ಓದಿಸಲೂ ಬೇಕು-ಎಂಬ ಆಸೆಯೂ ಇತ್ತು ಆತನಿಗೆ.

ಆದರೆ ತಾಯಿಗೆ ಅದೆಲ್ಲ ಎಲ್ಲಿ ಅರ್ಥವಾಗುತಿತ್ತು? ಆಕೆ ವಿರೋಧ ವ್ಯಕ್ತ ಪಡಿಸಿದರು.

"ಬೇಡ ಮುರಲಿ. ಇಲ್ಲಿಯೇ ಇದ್ಬಿಡು."

ಮುರಲೀಧರನೆಂದ:

"ನನಗೆ ಬೆಂಗಳೂರಲ್ಲಿ ಕೆಲಸವಾದ್ಮೇಲೆ ಅಲ್ಲಿಗೇ ಬರ್‍ತೀನಿ ಅಂದಿದ್ದೆ."

"ಆದ್ಮೇಲೆ ತಾನೇಪ್ಪ? ಕೆಲಸ ಸಿಗಲಿ. ಆಮೇಲೆ ಹೋಗು."

"ಪ್ರಯತ್ನ ಪಡದೆ ಕೆಲಸ ಸಿಗುತ್ತೇನಮ್ಮ?"

"ಅದೇನು ಹೇಳ್ತಿದೀಯೋ, ನನಗೊಂದೂ ಅರ್ಥವಾಗ್ತಾನೆ ಇಲ್ಲ."

ಮನೆ ಬಿಟ್ಟು ಪರವೂರಿಗೆ ಹೋಗಲು ಬಯಸಿದ ಯಾವ ಮಗನ ತಾಯಿಗೆ ತಾನೆ ಅಂಥದು ಅರ್ಥವಾಗುತ್ತಿತ್ತು?

ಲಕ್ಷ್ಮೀಪತಿಯೆಂದ:

"ನಿನಗೆ ಕೆಲಸ ಸಿಗೋವರೆಗೂ ಹ್ಯಾಗಾದರೂ ಮಾಡಿ ತಿಂಗಳಿಗೆ ಹದಿನೈದು

ರೂಪಾಯಿ ಕಳಿಸ್ತೀನಿ."

"ಸರಿ ಅಣ್ಣ. ಅಷ್ಟು ಕಳಿಸು" ಎಂದ ಮುರಲೀಧರ.

"ಊಟಕ್ಕೆಲ್ಲ ಹ್ಯಾಗ್ಮಾಡ್ತೀಯಾ?"

"ಸದ್ಯಕ್ಕೆ ಒಬ್ಬ ಸ್ನೇಹಿತನ ಮನೇಲಿರ್ತೀನಿ. ಆಮೇಲೆ ನೋಡೋಣ."

....ಹಿರಿಯ ಅತ್ತಿಗೆ ಈ ಸಾರೆ, ಬೆಳಗ್ಗೆ ಹೊರಟ ಮೈದುನನಿಗಾಗಿ ತಿಂಡಿ ಮಾಡಿದಳು. ಆಸ್ತಿಯಲ್ಲಿ ತನ್ನ ಪಾಲನ್ನು ಬಿಟ್ಟುಕೊಟ್ಟವನಲ್ಲವೆ ಆತ? ದೂರ ಹೋಗುವನೆನ್ನುವುದಂತೂ ಮತ್ತಷ್ಟು ಸಂತೋಷದ ವಿಷಯವೇ!

ಅತ್ತಿಗೆಯ ಅಂತಹ ವರ್ತನೆಯನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಮುರಲೀಧರನಿಗಿದ್ದೇ ಇತ್ತು!

ಆತ, ಅಣ್ಣನ ಮಗುವನ್ನೊಮ್ಮೆ ಎತ್ತಿ ಆಡಿಸಿ, "ಬರ್ತೀನಮ್ಮ" ಎಂದು ಹೇಳಿ ತಾಯಿಯ ಆಶೀರ್ವಾದ ಪಡೆದು, ಆ ತಿಂಗಳ ಹದಿನೈದು ರೂಪಾಯಿಗಳನ್ನು ಅಣ್ಣನಿಂದ ಇಸಕೊಂಡು ಬೆಂಗಳೂರಿಗೆ ಹೊರಟ.

* * * *

"ಕವಳಾ ತಾಯಿೊ!"

ನಾರಣಪ್ಪನ ತಾಯಿ ಹೊರಗಿಣಿಕಿ ನೋಡಿದರು. ಜಮಖಾನದ ಸುರುಳಿಯೊಡನೆ ನಿಂತಿದ್ದ ಕಪಟ ಭಿಕ್ಷುಕ. ಅವರೆಂದರು:

"ಥೂ! ಏನೋ ಇದು?"

"ನಾಣಿ, ಯಾರು ಬಂದಿದಾರೆ ನೋಡು."

ನಾರಣಪ್ಪ ಹೊರಬಂದು ಅಂದ:

"ಅರೇ, ಈವರೆಗೂ ನಿನ್ನ ಹಾದಿ ನೋಡ್ತಾ ಹೊರಗೇ ಇದ್ನೆಲ್ಲೊ. ಬೆಳಗ್ಗಿನ ಬಸ್ನಲ್ಲಿ ನೀನು ಬರಲಿಲ್ವೇನೋಂತಿದ್ದೆ."

ಮುರಲೀಧರ ಒಳಬಂದು ಕುಳಿತು ವಿರಮಿಸಿಕೊಳ್ಳುತ್ತ ನುಡಿದ:

"ಇದ್ದಿಲು ಬಸ್ಸು ಸ್ವಲ್ಪ ತಡವಾಯ್ತು."

"ಮನೇಲಿ ನಿಮ್ಮ ತಾಯಿ ಚೆನ್ನಾಗಿದಾರಾ?" ಎಂದು ನಾರಣಪ್ಪನ ತಾಯಿ ಕೇಳಿದರು.

"ಹೂನಮ್ಮಾ."

ಸರಸ್ವತಿ ಅತ್ತ ಬಂದಾಗ ಮುರಲೀಧರನೆಂದ:

"ರೀ, ನಾನು ಕೆಲಸಕ್ಕೊಂದು ಅರ್ಜಿ ಹಾಕ್ಬೇಕು ಕಣ್ರೀ. ಟೈಪ್ ಮಾಡ್ಕೊಡ್ತೀರಾ?"

ಸರಸ್ವತಿ ನಗುತ್ತ ಅಂದಳು:

"ಓಹೋ! ಅದಕ್ಕೇನಂತೆ? ಫೀಸ್ ಮಾತ್ರ ಒಂದರ್ಜಿಗೆ ಆರಾಣೆ."

"ಕೆಲಸ ಸಿಕ್ಕಿದ್ಮೇಲೆ ಕೊಟ್ರೆ ಆಗುತ್ತೊ?"

ಸರಸ್ವತಿ ಉತ್ತರ ಕೊಡಲಿಲ್ಲ. ನಕ್ಕಳು, ತಾಯಿಯ ಜತೆ, ತಮ್ಮನ ಜತೆ.

"ಸ್ನಾನಕ್ಕೇಳು" ಎಂದರು. ಮುರಲೀಧರನ ಸ್ನಾನವಾಗಿತ್ತು. "ಊಟಕ್ಕೇಳು" ಎಂದರು. ಆತ ತಡಮಾಡದೆ ಎದ್ದ.

ಊಟಕ್ಕೆ ಕುಳಿತಾಗ ಮುರಲೀಧರ, ತನ್ನ ಮನೆಯಲ್ಲಿ ಅತ್ತಿಗೆಯರು ಮಾಡುತ್ತಿದ್ದ ಅಡುಗೆಯನ್ನು ಬಣ್ಣಿಸಿದ. ಹಿರಿಯಾಕೆಯ ಅಡುಗೆ ಇದ್ದ ದಿನ ಆಕೆಯ ಕಣ್ಣು ತಪ್ಪಿಸಿ ಕಿರಿಯವಳು ಹುಳಿಗೋ ಸಾರಿಗೋ ನಾಲ್ಕು ಕಾಳು ಉಪ್ಪು ಹೆಚ್ಚಾಗಿ ಸೇರಿಸಿ ಬಿಡುತ್ತಿದ್ದಳು. ಕಿರಿಯವಳ ಅಡುಗೆಯ ದಿನ ಹಿರಿಯವಳ ಸರದಿ. ಸೇರಿಗೆ ಸವ್ವಾ ಸೇರು ಆಗ.

"ಆ ಕಳ್ಳತನ ನಡೀತಿರುವಾಗ್ಲೇ ಪತ್ತೆಯಾಗ್ಬಿಟ್ರಂತೂ ಮಜವೇ ಮಜ!"

ನಾರಣಪ್ಪನ ತಾಯಿ ಹೇಳಿದರು:

"ಈಗ ಇಬ್ಬರೂ ಬೇರೆಯಾದರಲ್ಲ. ಇನ್ನು ಸ್ವಲ್ಪ ಸಮಾಧಾನವಾಗಿರ್ತಾರೆ."

ನಸುನಕ್ಕು ಮುರಲೀಧರನೆಂದ:

"ಹೇಳೋಕಾಗೊಲ್ಲ. ಇಬ್ಬರಿಗೂ ಅಭ್ಯಾಸವಾಗ್ಬಿಟ್ಟಿದೆ ನೋಡಿ. ತಮ್ಮ ಅಡುಗೆಗೆ ತಾವೇ ಎರಡೆರಡು ಸಲ ಉಪ್ಪು ಹಾಕಿದರೂ ಹಾಕಿದರೇ!"

ನಕ್ಕು ಸಾಕಾಯಿತು ನಾರಣಪ್ಪನ ತಾಯಿಗೆ.

...ಊಟವಾದ ಬಳಿಕ ಆ ಸಂಭಾಷಣೆಯನ್ನು ಸ್ಮರಿಸುತ್ತ ನಾರಣಪ್ಪನೆಂದ:

"ನಮ್ಮ ಸಂಸಾರದ ಅವ್ಯವಸ್ಥೆ ನೋಡಿಯೂ ಅದನ್ನು ನಗೇಲಿ ತೇಲಿಸ್ಬಿಡೋದು ದೊಡ್ಡ ಗುಣ."

ಮುರಲೀಧರನೆಂದ:

"ನಮ್ಮ ಲೋಪದೋಷಗಳ ವಿಷಯವಾಗಿ ನಾವೇ ಲೇವಡಿಮಾಡೋದು ಮತ್ತಷ್ಟು ದೊಡ್ಡ ಗುಣ!"

...ಮಲ್ಲೇಶಪ್ಪನಿದ್ದಾಗ ಅಣ್ಣ ತಮ್ಮಂದಿರು ಒಂದೇ ಕೊಠಡಿಯನ್ನು ಉಪಯೋಗಿಸುತ್ತಿದ್ದರು. ಈಗ ನಾರಣಪ್ಪ, ಮುರಲೀಧರರಿಗಾಯಿತು ಆ ಕೊಠಡಿ.

...ಮುರಲೀಧರ ಹತ್ತು ರೂಪಾಯಿಗಳನ್ನು ನಾರಣಪ್ಪನ ತಾಯಿಯ ಮುಂದಿರಿಸಿದ. ಅವರು ಅದನ್ನು ಮುಟ್ಟದೆ ಕೇಳಿದರು:

"ಏನಿದು?"

"ಹಣ."

"ಛೆ! ಛೆ! ಉಂಟೆ ಎಲ್ಲಾದರೂ? ನೀನು ನನ್ನ ಮಗನಿದ್ದ ಹಾಗೆ."

"ಹೂಂ ಕಣ್ರೇ. ಅದಕ್ಕೇ ನಿಮ್ಮ ಕೈಗೆ ಕೊಡ್ತಿರೋದು. ನನ್ನ ಹತ್ತಿರ ಇದ್ದರೆ ಖರ್ಚಾಗುತ್ತೆ."

"ಹಾಗಾದರೆ ನಿನ್ನಿಷ್ಟ."

"ಪ್ರತಿ ತಿಂಗಳೂ ಹತ್ತು ಹತ್ತೇ ಕೊಡ್ತೀನಿ. ಇಟ್ಕೊಂಡ್ಬಿಡಿ. ಕೆಲಸ ಸಿಕ್ಕಿದ್ಮೇಲೆ ಜಾಸ್ತಿ ಕೊಡ್ತೀನಿ."

ತಮ್ಮ ಸಂಸಾರದ ಪಾಲಿಗೆ ಚಿನಿವಾರ ಕಟ್ಟೆಯ ಯಾತ್ರೆ ಇನ್ನೂ ಮುಗಿಯದೇ ಇದ್ದರೂ ನಾರಣಪ್ಪನ ತಾಯಿಯೆಂದರು:

"ನೋಡಪ್ಪ. ನಿನ್ನ ದುಡ್ಡು ಜೋಪಾನವಾಗಿ ನಾನಿಟ್ಕೋಬೇಕು ಅನ್ನೋದಾದ್ರೆ ನನ್ನ ಅಡ್ಡಿ ಇಲ್ಲ. ಬದಲು ಊಟದ ಖರ್ಚುಗಿರ್ಚಿಗೆ ಅಂತ–"

"ಇಲ್ಲವಮ್ಮ. ಹಾಗೆ ಭಾವಿಸ್ಬೇಡಿ. ದಯವಿಟ್ಟು ತಗೊಳ್ಳಿ." ಎಂದ ಮುರಲೀಧರ.

ಗೆಳೆಯನ ಕಡೆ ತಿರುಗಿ ಆತನೆಂದ:

"ನೀನಾದರೂ ಹೇಳೋ."

ತಾಯಿ ಒಳಹೋದೊಡನೆ ಆತ ಸ್ನೇಹಿತನನ್ನು ಟೀಕಿಸಿದ:

"ಏನೋ ಇದು ನಿನ್ನ ತಮಾಷೆ? ಯಾಕೋ ದುಡ್ಡು ಕೊಟ್ಟೆ?"

ಮುರಲೀಧರನ ಮುಖ ಬಾಡಿತು:

"ಇರಲಿ ಬಿಡು ನಾಣಿ. ಈ ಮನೇಲೆ ನಾನು ಹುಟ್ಟಿ ಬೆಳೆದವನೂಂತ್ಲೇ ಇಟ್ಕೊ. ಮಗ ದುಡಿದು ತಾಯಿ ಕೈಲಿ ಹಣ ಕೊಡಬಾರ್ದೇನು?"

"ಮಹಾ ದುಡೀತಾ ಇದಿಯಾ ಈಗ!"

"ಇರಬಹುದು ಕಣೋ. ಈಗ ದುಡೀತಾ ಇಲ್ಲ. ನಿಜ. ಆದರೆ ನಾಳೆ? ಕೆಲಸ ಸಿಕ್ದಾಗ?"

೧೫

'ನಾಳೆ' ಬಂತು. ಮುರಲೀಧರ ನಿರೀಕ್ಷಿಸಿದ್ದ ಕೆಲಸ ಮಾತ್ರ–

ಪತ್ರಿಕೋದ್ಯಮದ ಪವಿತ್ರ ದುಡಿಮೆಯ ಚಿತ್ರವನ್ನು, ಕಲ್ಪನೆಯ ಲೋಕದಲ್ಲಿ ಮುರಲೀಧರ ಬಿಡಿಸಿದ್ದ. ಸತ್ಯದ ಪ್ರತಿಪಾದನೆ–ಅನ್ಯಾಯದ ಖಂಡನೆ—ಉದಾತ್ತ ವಿಚಾರ–ನಿರ್ಭೀತ ಬರೆವಣಿಗೆ...

ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್...

ಎಷ್ಟೊಂದು ಘನವಾಗಿದ್ದುವು, ದಿವ್ಯವಾಗಿದ್ದುವು, ಆ ತತ್ವಗಳು!

ಸುತ್ತುಮುತ್ತು ದಿಗಂತದವರೆಗೆ, ಮೇಲೆ ಆಕಾಶದೆತ್ತರಕೆ, ಎಷ್ಟೊಂದು ವಿಶಾಲವಾಗಿತ್ತು ಆ ಕಾರ್ಯಕ್ಷೇತ್ರ!

ಮೃತರೂ ಕಣ್ಣು ತೆರೆಯುವಂತೆ ಮಾಡುವ ಸಂಜೀವಿನಿ ಶಕ್ತಿ, ಆ ಲೇಖನಿ. ಕೂರಲಗು, ಅದರ ಮೊನೆ. ಅದು, ಪ್ರಜಾಹಿತದ ರಕ್ಷಣೆಗೋಸ್ಕರ ಹಿರಿದ ಕತ್ತಿ. ಅಲ್ಲಿ ದುಡಿಯುವ ವ್ಯಕ್ತಿ ಸಾಮಾನ್ಯ ಮಾನವನಾಗುವುದು ಸಾಧ್ಯವೇ ಇರಲಿಲ್ಲ.

ಆ ದೇಗುಲಕ್ಕೆ ಹಾದಿ ಯಾವುದು? ಮಹಾದ್ವಾರವನ್ನು ದಾಟುವುದೆಂತು? ಗರ್ಭ ಗುಡಿಯಲ್ಲಿರುವ ಪೂಜಾರಿಯನ್ನು ಕಾಣುವ ಬಗೆ ಹೇಗೆ?

ಬಹಳ ಹೊತ್ತು ಯೋಚಿಸಿ ಮುರಲೀಧರನೆಂದ:

"ನಮ್ಮ ಮ್ಯಾಗಜೀನನ್ನು ವಿಮರ್ಶೆ ಮಾಡಿದರಲ್ಲ, ಆ 'ಪ್ರಜಾಹಿತ'ದ ಸಂಪಾದಕರನ್ನೇ ಮೊದಲು ಕಾಣ್ತೇನಿ."

"ಅದೇ ಯೋಗ್ಯ" ಎಂದ ನಾರಣಪ್ಪ.

....ಕಂಡೊಡನೆ ಗೌರವದಿಂದ ತಲೆ ಬಾಗುವಂತೆ ಮಾಡುವ ಗುಡಿಯಾಗಿರಲಿಲ್ಲ ಆ ಪತ್ರಿಕಾ ಕಛೇರಿ. ಪಾಳು ಬಿದ್ದ ದೇಗುಲದಂತಿದ್ದ ಕಟ್ಟಡ.

ಹತ್ತಿರ ಬಂದಂತೆ, ಉಂಟಾದ ಉದ್ವೇಗವನ್ನು ಶಮನಮಾಡಿಕೊಳ್ಳುತ್ತ ಮುರಲೀಧರ ಮುಂದಾದ.

ಒಳಗೆ ಕಾಣಿಸಿದ ಒಬ್ಬಿಬ್ಬರು ತಮ್ಮ ಕೆಲಸದಲ್ಲಿ ನಿರತರಾಗಿದ್ದರೇ ಹೊರತು, ಮುರಲೀಧರ ಆಗಮನವನ್ನು ಯಾರೂ ಗಮನಿಸಲೇ ಇಲ್ಲ.

ಮುರಲೀಧರ ಕೆಮ್ಮಿದ. ಒಮ್ಮೆ, ಎರಡು ಸಾರೆ. ಮುದುಕನೊಬ್ಬ ತುಸು ತಲೆ ಎತ್ತಿ ಕೇಳಿದ:

"ಯಾರು ಬೇಕು?"

"ಸಂಪಾದಕರನ್ನು ನೋಡ್ಬೇಕಾಗಿತ್ತು."

ಬದುಕೇ ಬೇಸರವಾದಂತಿದ್ದ ಆ ಮನುಷ್ಯ ಇನ್ನೊಂದು ಬಾಗಿಲಿಗೆ ಬೊಟ್ಟು ಮಾಡಿ ಮತ್ತೆ ತಲೆ ಬಾಗಿಸಿ ತನ್ನ ಕೆಲಸದಲ್ಲಿ ನಿರತನಾದ.

ಆತ ತೋರಿಸಿದ ಬಾಗಿಲಿನೊಳಕ್ಕೆ ಮುರಲೀಧರ ದೃಷ್ಟಿ ಬೀರಿದ. ತೀರಾ ಚಿಕ್ಕ ವಯಸ್ಸಿನವನೊಬ್ಬ, ಕಾಗದ ಪತ್ರ ಮಸಿಕುಡಿಕೆ ಬರೆಯುವ ಹಾಳೆ ಪತ್ರಿಕೆಗಳೆಲ್ಲ ಅಸ್ತ ವ್ಯಸ್ತವಾಗಿದ್ದ ಮೇಜಿನ ಮುಂದೆ ಕುಳಿತಿದ್ದ. ಅದರ ಪಕ್ಕದಲ್ಲಿ ಇನ್ನೊಂದು ದೊಡ್ಡ ಮೇಜಿತ್ತು. ಅದರ ಎದುರಿಗಿದ್ದ ಕುರ್ಚಿಯ ಮೇಲೆ ಕುಳಿತಿದ್ದ ಮನುಷ್ಯನ ಮುಖ ಕಾಣಿಸುತ್ತಿರಲಿಲ್ಲ.

ಮುರಲೀಧರ ಇನ್ನೂ ಅಲ್ಲೇ ಇದ್ದುದನ್ನು ಕಂಡು ಮುದುಕ ಮತ್ತೊಮ್ಮೆ ತಲೆ ಎತ್ತಿ ಹೇಳಿದ:

"ಹೋಗ್ರಿ ಮುಂದಕ್ಕೆ. ಹೆದರ್ಬೇಡಿ."

ಮುರಲೀಧರ ಮುಂದುವರಿದ. ದೊಡ್ಡ ಮೇಜಿನ ಬಳಿ ಇದ್ದವನು ಮಧ್ಯಮ ವಯಸ್ಸಿನ ವ್ಯಕ್ತಿ. ಆತ ಪ್ರಾಥಮಿಕ ಶಾಲೆಯ ಉಪಾಧ್ಯಾಯನಂತಿದ್ದ. ಆ ವ್ಯಕ್ತಿಯೇ ಸಂಪಾದಕನಿರಬಹುದೆಂದು ಭಾವಿಸಿ ಮುರಲೀಧರ ನಮಸ್ಕರಿಸಿದ.

"ಎಲ್ಲಿಂದ ಬಂದಿರಿ? ಏನು ಬೇಕು?"

ಹಾಗೆ ಕೇಳಿದ ಮನುಷ್ಯ ಅರೆಮುಚ್ಚಿದ ಕಣ್ಣುಗಳಿಂದ ಬಂದವನನ್ನು ದಿಟ್ಟಿಸಿದ.

"ಸಂಪಾದಕರ ಜತೇಲಿ ಸ್ವಲ್ಪ ಮಾತಾಡಬೇಕಾಗಿತ್ತು" ಎಂದ ಮುರಲೀಧರ.

"ನಾನೇ ಸಂಪಾದಕ. ಎಳಕೊಳ್ಳಿ ಆ ಸ್ಟೂಲ್ನ."

ಆ ಪೀಠ ಅಪಾಯಕಾರಿಯಾಗಿ ಅಲುಗುತ್ತಿತ್ತು. ಅದರ ಮೇಲೆ ಕುಳಿತು ಭಕ್ತಿಯಿಂದ ಸಂಪಾದಕನನ್ನೆ ದಿಟ್ಟಿಸಿ ಮುರಲೀಧರನೆಂದ:

"ತಮ್ಮನ್ನು ನೋಡಿ ಹೋಗೋಣಾಂತ ಬಂದೆ. ತಮ್ಮ ಪತ್ರಿಕೆ ಜನಪ್ರಿಯವಾಗಿದೆ."

"ಯಾವೂರು ನಿಮ್ಮದು?"

ಊರಿನ ಹೆಸರು ಹೇಳಿದೊಡನೆ ಹೆಚ್ಚು ಮಾತನಾಡಲು ಅವಕಾಶ ಕೊಡದೆ ಸಂಪಾದಕನೆಂದ.

"ನಿಮ್ಮೂರಿಗೆ ನಮ್ಮ ಪತ್ರಿಕೆ ಹೋಗ್ತಾಇಲ್ಲ. ಅವನು ಯಾವನೊ ರ್ಯಾಸ್ಕಲ್ ಏಜಂಟು ದುಡ್ಡು ತಿಂದ್ಹಾಕ್ಬಿಟ್ಟ. ನೋಡಿ, ಡಿಪಾಸಿಟ್ ಕೊಡೋ ಹಾಗಿದ್ರೆ ನೀವು ಏಜಂಟರಾಗ್ಬಹುದು. ಆತ ಕೊಡಬೇಕಾದ ಹಳೇ ಬಾಕೀನ—"

ಡಂಗಾಗಿ ಹೋದ ಮುರಲೀಧರ. ಚೇತರಿಸಿಕೊಳ್ಳಲೆತ್ನಿಸುತ್ತ ಆತನೆಂದ:

"ನಾನೀಗ ಈ ಊರಲ್ಲೇ ವಾಸವಾಗಿದೀನಿ ಸಾರ್."

"ಹಾಗಾದರೆ ಪ್ರಯೋಜನವಿಲ್ಲ."

ಏನೋ ತಪ್ಪು ಗ್ರಹಿಕೆಯಾಗಿರಬೇಕೆಂದು ಭಾವಿಸುತ್ತ ನಿರಾಶನಾಗದೆ ಮುರಲೀಧರನೆಂದ:

"ನಾನು ಕಾಲೇಜ್ ಮ್ಯಾಗಜೀನಿನ ಸಂಪಾದಕ ವರ್ಗದಲ್ಲಿದೀನಿ ಸಾರ್. ನನ್ನ ಹೆಸರು ಮುರಲೀಧರ ಅಂತ. ನನ್ನದೊಂದು ಲೇಖನ."

ಪಕ್ಕದಲ್ಲಿದ್ದ ಯುವಕ ಕುತೂಹಲದಿಂದ ತನ್ನನ್ನು ನೋಡಿದಂತಾಯಿತು ಮುರಲೀಧರನಿಗೆ. ಆದರೆ ಸಂಪಾದಕ ಯಾವ ಭಾವನೆಯನ್ನೂ ವ್ಯಕ್ತಪಡಿಸಲಿಲ್ಲ. ಮುರಲೀಧರನನ್ನು ಅರ್ಧದಲ್ಲೆ ತಡೆದು ಆತನೆಂದ:

"ಲೇಖನ? ನಮ್ಮ ಪತ್ರಿಕೆಗೆ ಕಳಿಸಿದೀರೇನು?"

"ಇಲ್ಲ. ನಮ್ಮ ಮ್ಯಾಗಜೀನಿನಲ್ಲಿ ಪ್ರಿಂಟಾಗಿತ್ತು. ತಾವು ಅದರ ವಿಮರ್ಶೆ ಮಾಡಿದ್ದೀರಿ."

"ಇರಬಹುದು, ನೆನಪಿಲ್ಲ."

ಮುರಲೀಧರನ ಅಂಗಾಂಗಗಳೆಲ್ಲ ಒಂದು ಕ್ಷಣ ತಣ್ಣಗಾದುವು. ಹೇಗೆ ಮುಂದುವರಿಯಬೇಕೆಂಬುದೇ ಆತನಿಗೆ ತೋಚಲಿಲ್ಲ. ಸುಮ್ಮನೆ ಎದ್ದು ಹೋಗುವುದೂ ಸಾಧ್ಯವಿರಲಿಲ್ಲ. ಅದುದಾಗಲೆಂದು ಸ್ವಲ್ಪ ತಡವರಿಸುತ್ತ ಆತನೆಂದ:

"ತಮ್ಮ ಆಫೀಸಿನಲ್ಲಿ ಏನಾದರೂ ಕೆಲಸ—"

"ಇಲ್ಲವಪ್ಪ, ಇಲ್ಲಿ ಯಾವುದೂ ಖಾಲಿ ಇಲ್ಲ."

ಅಷ್ಟು ಸುಲಭವಾಗಿ ತನ್ನ ಸೌಧ ಕುಸಿದು ಬೀಳುತ್ತಿದ್ದುದನ್ನು ಕಂಡು, ಸಂಕಟ ಪಡುತ್ತ, ಮುರಲೀಧರನೆಂದ.

"ಪತ್ರಿಕೋದ್ಯೋಗಿಯಾಗಿ ದುಡಿಯಬೇಕೂಂತ ಆಸೆ."

"ಬೇಡ ಅಂದ್ನೆ? ನಮ್ಮಲ್ಲಿ ಅವಕಾಶವಿಲ್ಲ. ದಯವಿಟ್ಟು ಬೇರೆ ಎಲ್ಲಾದರೂ ಹೋಗಿ ವಿಚಾರಿಸಿ. ನಮಸ್ಕಾರ."

ಹೊರಟು ಹೋಗಲು ಸೂಚನೆ ಆ ವಂದನೆ. ಎತ್ತಿ ಹೊರಹಾಕಿದಂತೆ ಅನುಭವ.

ವಿವರ್ಣವಾದ ಮುಖದೊಡನೆ ಮುರಲೀಧರನೆದ್ದು ವಂದಿಸಿ ಹೊರಬಂದ. ಉಜ್ವಲ ಭವಿಷ್ಯತ್ತುಳ್ಳ ಲೇಖನಿ ಎಂದು ಪ್ರಮಾಣಪತ್ರವಿತ್ತಿದ್ದ ಸಂಪಾದಕರೇ ಅಂತಹ ಗೌರವವನ್ನು ಆತನಿಗೆ ತೋರಿದ್ದರು...

....ಮೊದಲ ದಿವಸಕ್ಕೆ ಅಷ್ಟು ಸಾಕೆಂದುಕೊಂಡ ಮುರಲೀಧರ. ಯತ್ನಗಳು ಮಾರನೆಯ ದಿನವೂ ಇದ್ದುವು, ಅನಂತರವೂ ಇದ್ದುವು.

'ರಾಷ್ಟ್ರವಾಣಿ' ದಿನಪತ್ರಿಕೆಯ ಕಾರ್ಯಾಲಯ ದೊಡ್ಡ ಕಾರಖಾನೆಯಂತಿತ್ತು. ಕಾವಲಿನ ಭಟರಿದ್ದರು ಹೊರಗೆ. ಭೇಟಿಗಾಗಿ ಹೆಸರು ಬರೆದ ಚೀಟಿ ಕಳುಹಬೇಕಾಯಿತು. ತಕ್ಷಣವೆ ಸಂದರ್ಶನ ಸಾಧ್ಯವಾಗಲು ಮುರಲೀಧರನೇನು ಸುಪ್ರಸಿದ್ಧ ಮನುಷ್ಯನೆ?

ಫ್ಯಾನ್, ಫೋನ್, ಮತ್ತಿತರ ಆಧುನಿಕ ಸಲಕರಣೆಗಳಿದ್ದ ಸಂಪಾದಕರ ಕೊಠಡಿ. ಸಂಪಾದಕರು ಬೆಲೆಬಾಳುವ ಉಡುಗೆ ತೊಟ್ಟು ಠೀವಿಯಿಂದ ಕುಳಿತಿದ್ದರು. ಅವರೆದುರು, ಶ್ರೀಮಂತರ ಮನೆಯನ್ನು ಹೊಕ್ಕ ಬಡವನ ಗತಿಯಾಯಿತು ಮುರಲೀಧರನ ಅವಸ್ಥೆ.

ಆ ಸಂಪಾದಕರು ಕೇಳಿದರು:

"ಎಷ್ಟು ಓದಿದೀರಾ?"

ಪದವೀಧರನಲ್ಲ. ಆದರೂ ಅವರೆಂದರು:

"ಭಾಷಾಂತರ ಮಾಡೋದಕ್ಕೆ ಬರುತ್ತೋ?"

"ತಕ್ಕಮಟ್ಟಿಗೆ ಬರುತ್ತೆ."

"ಯಾವ ಊರಲ್ಲಿ ಯಾವ ಪತ್ರಿಕೇಲಿ ಈ ಮೊದಲು ದುಡಿದಿದೀರಾ?"

ಮುರಲೀಧರನಿಗೆ ಅಂತಹ ಅನುಭವವಿರಲಿಲ್ಲ.

"ಮತ್ತೆ? ಪ್ರತಿಸಲವೂ ಹೊಸಬರನ್ನು ತರಬೇತು ಮಾಡೋ ಟ್ರೇನಿಂಗ್ ಶಾಲೆಯೆ ಇದು?"

"ನನಗೊಂದು ಅವಕಾಶಕೊಡಿ. ಬಹಳ ಬೇಗ್ನೆ ಕಲಿತ್ಕೊಳ್ತೀನಿ."

"ಕ್ಷಮಿಸಿ."

ಒಮ್ಮೆಲೆ ಮೂಕನಾದವನಂತೆ ಅಲ್ಲಿಯೇ ಕುಳಿತ ಮುರಲೀಧರ. ಸಂಪಾದಕರು

ಆತನ ಕರ್ತವ್ಯವನ್ನು ನೆನಪು ಮಾಡಿಕೊಟ್ಟರು.

"ನೀವಿನ್ನು ಹೋಗ್ಬಹುದು."

...'ರೂಪಕಲಾ' ವಾರಪತ್ರಿಕೆಯ ಸಂಪಾದಕರು ಸಹಾಯಕನ ಅಗತ್ಯ ತಮಗಿರ ಲಿಲ್ಲವಾದರೂ, ಮುರಲೀಧರನನ್ನು ಪರೀಕ್ಷಿಸಿದರು.

"ನಮ್ಮ ಪತ್ರಿಕೆ ನೀವು ನೋಡಿದೀರಿ ತಾನೆ?"

"ಪ್ರತಿ ವಾರವೂ ತಪ್ಪದೆ ನೋಡ್ತಾ ಇರ್ತೀನಿ."

"ಹಾಗಾದರೆ, ಪತ್ರಿಕೇನ ಇನ್ನೂ ಚೆನ್ನಾಗಿ ಮಾಡೋದಕ್ಕೆ ಏನಾದರೂ ಸಲಹೆ ಕೊಡಿ ನೋಡೋಣ."

ಮುರಲೀಧರ ಉತ್ಸಾಹಗೊಂಡು ಧೈರ್ಯದಿಂದ ಹೇಳಿದ:

"ಹೊದಿಕೆಯ ಮೇಲೆ ಚಲಚ್ಚಿತ್ರ ತಾರೆಯರ ಬದಲು, ನಿಸರ್ಗ ಸೌಂದರ್ಯದ ಚಿತ್ರಗಳನ್ನು ಹಾಕಬಹುದು. ವಾರದ ಭವಿಷ್ಯದಿಂದಂತೂ ಪುಟ ದಂಡ. ಜಾಹೀ ರಾತುಗಳನ್ನು ಆದಷ್ಟು ಕಡಮೆ ಸ್ವೀಕರಿಸೋದರಿಂದ ಹೆಚ್ಚು ಲೇಖನಗಳ ಪ್ರಕಟಣೆಗೆ ಅವಕಾಶ ಸಿಗುತ್ತೆ."

ಸಂಪಾದಕರು ನಕ್ಕು ಅಂದರು:

"ನಮ್ಮ ಪತ್ರಿಕೆ ದಿವಾಳಿ ತೆಗೆಯೋ ಸಲಹೆಗಳ್ನೆ ಕೊಡ್ತಿದೀರಲ್ಲ! ನೋಡಿ, ಪತ್ರಿ ಕೋದ್ಯಮ ನಿಮಗೆ ಹೇಳಿಸಿದ್ದಲ್ಲ. ನೀವು ಕೆಲಸ ಮಾಡೋ ಪತ್ರಿಕೆ ಖಂಡಿತ ಉದ್ಧಾರ ವಾಗಲಾರದು!"

ಅದನ್ನು ಕೇಳಿ, ಅವಾಚ್ಯ ಮಾತುಗಳಿಂದ ತನ್ನನ್ನು ಯಾರೋ ಬಯ್ದ ಹಾಗಾ ಯಿತು ಮುರಲೀಧರನಿಗೆ.

....ಇನ್ನೊಬ್ಬ ಪ್ರಖ್ಯಾತ ಸಾಹಿತ್ಯ ಸಂಪಾದಕನ ಬಳಿಗೆ ಮುರಲೀಧರ ತೆರಳಿದ. ಅವರೆಂದರು:

"ಈ ಹುಚ್ಚು ಬಿಟ್ಬಿಡಪ್ಪ. ಸುಮ್ನೆ ಎಲ್ಲಾದರೂ ಉಪಾಧ್ಯಾಯನಾಗು."

......'ಪೌರನೀತಿ' ಕಚೇರಿಯಲ್ಲಿ ಸಂಪಾದಕರಿರಲಿಲ್ಲ. ಮ್ಯಾನೇಜರನಿದ್ದ. ಆತನೆಂದ:

"ನಮಗೆ ಕಂಪಾಸಿಟರು ಬೇಕು. ಉಪಸಂಪಾದಕರಲ್ಲ. ನಿಮಗೆ ಅಕ್ಷರ ಮೊಳೆ ಜೋಡಿಸೋದು ಬರುತ್ತೇನು?"

"ಇಲ್ಲ."

"ಅದನ್ನು ಮೊದಲು ಕಲಿತ್ಕೊಳ್ಳಿ."

ಎರಡು ಮೂರು ವಾರಗಳ ಅಂತರದಲ್ಲೆ ಮುರಲೀಧರ ಹಣ್ಣಾಗಿ ಹೋದ. ಊರಿಗೆ ಆತ ಕಾಗದ ಬರೆದ. "ಇನ್ನೂ ಕೆಲಸ ಸಿಕ್ಕಿಲ್ಲ." ನಾರಣಪ್ಪನ ತಾಯಿಗೆ ಆತ ನೆಂದ. "ಹುಡುಕುತ್ತಾ ಇದೀನಮ್ಮ."

ನಾರಣಪ್ಪನೊಡನೆ ಅವನೆಂದ:

"ಇಷ್ಟು ಕಷ್ಟವಾಗ್ಬಹುದೂಂತ ನನಗೆ ಗೊತ್ತಿರ್ಲಿಲ್ಲ ನಾಣಿ."

ಗೆಳೆಯ ನೇರವಾದ ಪ್ರಶ್ನೆಯನ್ನೆ ಕೇಳಿದ:

"ಇನ್ನೂ ಆಸೆ ಇಟ್ಟುಕೊಂಡಿದೀಯಾ ನೀನು?"

"ಹೌದು ಮತ್ತೆ!"

ಬಹಿರಂಗವಾಗಿ ಹಾಗೆ ಆಡಿದ್ದರೂ ಅಂತರಂಗದಲ್ಲಿ ಆತನ ಹೃದಯವನ್ನು ಹಿಸುಕುತ್ತಿದ್ದುದು ನಿರಾಸೆಯೊಂದೇ.

## ೧೬

ಪರೀಕ್ಷೆಯ ಫಲಿತಾಂಶ ಬಂತು. 'ಶ್ರೇಣಿ' ಇರಲಿಲ್ಲವಾದರೂ ನಾರಣಪ್ಪ ಉತ್ತೀರ್ಣನಾಗಿದ್ದ. ಅನಂತರದ ತಿಂಗಳಲ್ಲೆ ಹೊಸ ಅಧ್ಯಯನಕ್ಕೆ ಆರಂಭ.

ಮುರಲೀಧರನ ಪಾಲಿಗೆ ಏನೂ ಇರಲಿಲ್ಲ. ಊರಿನಿಂದ ಹದಿನೈದು ರೂಪಾಯಿ ಹಣ ಮತ್ತೆ ಬಂದಿತ್ತು. ನಾರಣಪ್ಪನ ಮನೆಗೆ ತಾನು ಭಾರವಾಗುತ್ತಿರುವೆನೆನಿಸಿತು ಮುರಲೀಧರನಿಗೆ.

ಅದೊಂದು ಸಂಜೆ ಮುರಲೀಧರ, ಮಲ್ಲೇಶ್ವರಕ್ಕೆ ಮನೆಗೆ ತೆರಳುವುದಕ್ಕೆ ಮುಂಚಿತವಾಗಿ, ದಣಿದಿದ್ದ ಕಾಲುಗಳಿಗೆ ತುಸು ವಿಶ್ರಾಂತಿ ಕೊಡಲೆಂದು ತುಳಸೀ ತೋಟಕ್ಕಿಳಿದ. ಅಂತರ್ಮುಖಿಯಾಗಿ ಒಂದೆಡೆ ಕುಳಿತ. ಅವನಿಗೆ ಸುತ್ತಮುತ್ತಲಿನ ಯಾರ ಮೇಲೂ ವಿಶೇಷ ಲಕ್ಷ್ಯವಿರಲಿಲ್ಲ.

ಹತ್ತುಮಾರುಗಳಾಚೆ ಕುಳಿತಿದ್ದೊಬ್ಬ ಯುವಕ ತನ್ನನ್ನೇ ನೋಡುತಿದ್ದುದು ಕ್ರಮೇಣ ಮುರಲೀಧರನಿಗೆ ಗೋಚರವಾಯಿತು. ಪಾಯಜಾಮ, ಶರಟು, ಅದರ ಮೇಲೊಂದು ಇಸ್ತ್ರಿ ಇರದಿದ್ದ ಕೋಟು—ಉಣ್ಣೆಯದಲ್ಲ, ಹತ್ತಿ ಬಟ್ಟೆಯದು. ಈತ ನನ್ನು ಎಲ್ಲಿಯೋ ನೋಡಿರುವೆನಲ್ಲಾ ಎನಿಸಿತು ಮುರಲೀಧರನಿಗೆ. ಆದರೆ, ಎಲ್ಲಿ ಎಂಬುದು ಎಷ್ಟು ಯೋಚಿಸಿದರೂ ನೆನಪಾಗಲಿಲ್ಲ.

ಕೆಲ ನಿಮಿಷಗಳಲ್ಲೆ ಆ ಮನುಷ್ಯ ಎದ್ದು ಮುರಲೀಧರನ ಹತ್ತಿರಕ್ಕೆ ಬಂದ. ಆತ ಕೇಳಿದ:

"ನೀವು ಒಂದು ತಿಂಗಳ ಹಿಂದೆ 'ಪ್ರಜಾಹಿತ' ಕಛೇರಿಗೆ ಬಂದಿದ್ದಿರಿ, ಅಲ್ವೆ?"

ಮುರಲೀಧರನಿಗೆ ನೆನಪಾಯಿತು. ಆ ಸಂಪಾದಕನ ಕೊಠಡಿಯಲ್ಲಿದ್ದ, ತನ್ನನ್ನು ಕುತೂಹಲದಿಂದ ನೋಡಿದ್ದ, ಯುವಕ.

"ಹೌದು, ಬಂದಿದ್ದೆ. ಕೂತ್ಕೊಳ್ಳಿ," ಎಂದ ಮುರಲೀಧರ, ಆ ಅನಿರೀಕ್ಷಿತ ಸಂಭವಕ್ಕಾಗಿ ಸಂತೋಷಪಡುತ್ತ.

ಗರಿಕೆಹುಲ್ಲಿನ ಮೇಲೆ ಆ ಯುವಕ ಕುಳಿತುಕೊಂಡು ಏನನ್ನೊ ಕೆಳಗಿರಿಸಿದ. ಮಾಸಿದ ಕರವಸ್ತ್ರ. ಕಡಲೆಕಾಯಿಗಳು ಅದರೊಳಗೆ. ಆತ ಹೇಳಿದ:

"ತಗೊಳ್ಳಿ."

ಮುರಲೀಧರನಿಗೆ ಸಂಕೋಚವೆನಿಸಿತು. ಆದರೆ 'ಹಸಿದಿದ್ದೀನಿ' ಎಂದಿತು ಹೊಟ್ಟೆ. ಟಪ್ ಟಪ್ ಎಂದು ಒಡೆದು, ಆ ಮನುಷ್ಯನ ಜತೆಗೆ ತಾನೂ ನಾಲ್ಕಾರು ಬೀಜಗಳನ್ನು ತಿನ್ನುವುದು ಯೋಗ್ಯವೆನಿಸಿತು.

ಆ ಯುವಕನೆಂದ:

"ನನ್ನ ಹೆಸರು ಕಾಶೀಪತಿ. ನಿಮ್ಮ ಹೆಸರು ಮುರಲೀಧರ, ಅಲ್ವೆ? ನನಗೆ ಗೊತ್ತು. ನಿಮ್ಮ 'ದೇವತೆಗಳ ಕಣ್ಣೀರು' ಲೇಖನದ ವಿಷಯ ಬರೆದೋನು ನಾನೇ."

ಅಮಾವಾಸ್ಯೆಯ ರಾತ್ರೆಯಲ್ಲಿ ಒಮ್ಮೆಲೆ ಮೂಡಿದ ಚಂದಿರ.

"ಓ! ಪರಿಚಯವಾದದ್ದು ತುಂಬಾ ಸಂತೋಷ. ಸಂಪಾದಕರೇ ಅದನ್ನ ಬರೆದ ರೇನೋಂತಿದ್ದೆ."

"ಸಂಪಾದನೆಯ ಕಡೆಗೆ ಗಮನ ಕೊಡೋದು ಮಾತ್ರ ನಮ್ಮ ಸಂಪಾದಕರ ಕೆಲಸ. ಬರೆವಣಿಗೆಯೆಲ್ಲ ನನ್ನದೇ."

'ಭವಿಷ್ಯತ್ತುಳ್ಳ ಲೇಖನಿ...' ಹುಚ್ಚು ಹಿಡಿಸಿ ಅಲೆಸಿಬಿಟ್ಟಿತ್ತು ಒಂದು ತಿಂಗಳ ಕಾಲ!

ಮುರಲೀಧರನ ಮುಖ ಬಾಡಿದ್ದರೂ ಕಣ್ಣುಗಳು ಅರಳಿದ್ದುವು. ಮುಗುಳು ನಗೆ ಸೂಸುತ್ತ ನೆಟ್ಟದೃಷ್ಟಿಯಿಂದ ತನ್ನನ್ನೇ ನೋಡುತ್ತಿದ್ದ ಆತನನ್ನುದ್ದೇಶಿಸಿ, ಕಾಶೀ ಪತಿಯೆಂದ:

"ಯಾವುದಾದರೂ ಪತ್ರಿಕೇಲಿ ನಿಮಗೆ ಕೆಲಸ ಸಿಗ್ತೆ?"

"ಇಲ್ಲ."

"ಇನ್ನೂ ಹುಡುಕ್ತಾನೇ ಇದೀರಾ?"

"ಹೂಂ."

"ಪತ್ರಿಕೋದ್ಯಮದ ಹಂಬಲ ಬಿಟ್ಟಿಲ್ಲಾ, ಅನ್ನಿ!"

ಮುರಲೀಧರ ಸಣ್ಣನೆ ನಕ್ಕ. ಕಾಶೀಪತಿಯೆಂದ:

"ಆಶ್ಚರ್ಯ! ಹುತಾತ್ಮರಾಗೋಕೆ ಇಷ್ಟವಿರೋರು ಮಾತ್ರ ಈ ಉದ್ಯೋಗಕ್ಕೆ ಬರ್ತಾರೆ. ನಿಮ್ಮನ್ನ ನೋಡಿದರೆ—"

...ತನಗಾದ ಅನುಭವವನ್ನೆಲ್ಲ ಆತನಿಗೆ ಹೇಳಬೇಕೆಂದು ಮುರಲೀಧರನಿಗೆ ಅನಿಸಿತು.

....ಮಾತು ಮುಗಿಯುವುದಕ್ಕೆ ಮುಂಚೆಯೆ ಕಡಲೆಕಾಯಿಗಳು ಮುಗಿದಿದ್ದುವು. ಅನಂತರವೂ ಸ್ವಲ್ಪ ಹೊತ್ತು ಮೌನವಾಗಿ ಕುಳಿತ ಬಳಿಕ ಕಾಶೀಪತಿಯೆಂದ:

"ನಿಮ್ಮನ್ನು ಮುರಿಯೋದು ಬಹಳ ಕಷ್ಟ. ನನ್ನ ಊಹೆ ಸುಳ್ಳಾಗೋದಿಲ್ಲಾಂತ ನಂಬಿಕೆ. ಒಂದು ಮಾಡ್ತೀರಾ?—"

ಎಲ್ಲಾ ಆಯಾಸವನ್ನೂ ಮರೆತುಬಿಟ್ಟಿದ್ದ ಮುರಲೀಧರ ಉತ್ಸಾಹಿತನಾಗಿ ಕೇಳಿದ:

"ಏನು? ಹೇಳಿ."

"ಚಿಕ್ಕ ಪೇಟೇಲಿ 'ಪಾಂಚಜನ್ಯ' ಅಂತ ಒಂದು ಪುಟ್ಟ ಬೋರ್ಡಿದೆ. ಅಲ್ಲೇ ಓಣೇಲಿ ಅದರ ಕಾರ್ಯಾಲಯವಿದೆ. ಮಾಲಿಕನೇ ಸಂಪಾದಕ. ಆತನ ಮನೆಯೂ ಅಲ್ಲೇ. ಹೋದ ವಾರ ಆತನ ಉಪ ಸಂಪಾದಕ ಹೇಳದೆ ಕೇಳದೆ ಓಡಿಹೋದ. ಹೋಗಿ ನೋಡಿ. ನಿಮಗೆ ಒಪ್ಪಿಗೆಯಾಗೋ ಹಾಗಿದ್ದರೆ–"

"ಖಂಡಿತ ಹೋಗ್ತೀನಿ."

"ಸಂಬಳ ಬಹಳ ಕಡಮೆ."

"ಎಷ್ಟು ಬಂದರೂ ಸರಿಯೆ."

"ಭೇಷ್! ಪ್ರತಿ ಶನಿವಾರ ಈ ತೋಟದಲ್ಲಿ ಕೂತಿದ್ದು ಹೋಗೋದು ನನ್ನ ಅಭ್ಯಾಸ. ಮೇಲಿನ ಶನಿವಾರ ಸಾಧ್ಯವಾದರೆ ನೀವು—"

"ಬರ್ತೀನಿ."

"ಬರುವಾಗ ಕಡಲೇಕಾಯಿ ತನ್ನಿ!"

"ತರ್ತೀನಿ!"

* * * *

ಟ್ರೆಡ್‌ಲ್ ಮುದ್ರಣಯಂತ್ರ. ಅಕ್ಷರದ ಮೊಳೆಗಳಿದ್ದ ಮರದ ಅಂಕಣಗಳು.

"ಈ ಕಂಪಾಸಿಟರ್ ಮುಂಡೇಗಂಡ್ರನ್ನು ನಂಬೋದೇ ಕಷ್ಟ," ಎಂದು ತಮ್ಮ ಸಂಕಟವನ್ನು ತೋಡಿಕೊಂಡರು ಗಾತ್ರ ಜೀವಿಯಾದ ಮಾಲಿಕ–ಸಂಪಾದಕರು.

ಕೆಲಸಗಾರರಿರಲಿಲ್ಲ. ಕತ್ತಲಾಗಿತ್ತು. ಮುರಲೀಧರ ಹೋದಾಗ ಅಲ್ಲಿದ್ದವರು ಅವರೊಬ್ಬರೇ.

'ಪಾಂಚಜನ್ಯ' ವಾರ ಪತ್ರಿಕೆಯ ಉಪ ಸಂಪಾದಕನ ಸ್ಥಾನಕ್ಕೆ ಉಮೇದುವಾರನಾಗಿ ಬಂದ ಆತನನ್ನು ಸೂಕ್ಷ್ಮ ನೋಟದಿಂದ ಪರೀಕ್ಷಿಸುತ್ತ–ಅವರೆಂದರು:

"ಯಾರಪ್ಪ ನಿಮ್ಮನ್ನಿಲ್ಲಿಗೆ ಕಳಿಸ್ದೋರು?"

"ಕಾಶೀಪತಿಯವರು—'ಪ್ರಜಾಹಿತ'ದ ಸಹಸಂಪಾದಕರು"

"....ನೋಡಪ್ಪ, ಇಲ್ಲಿ ಕೆಲಸ ಜಾಸ್ತಿ. ಸಂಬಳ ಕಡಿಮೆ."

"ಪರವಾಗಿಲ್ಲ ಸಾರ್. ಸಂಬಳಕ್ಕಿಂತಲೂ ಪತ್ರಿಕೋದ್ಯೋಗಿಯಾಗಿ ದುಡೀಬೇಕು ಅನ್ನೋದು ಮುಖ್ಯ."

"ಹಾಗಾದರೆ ಸರಿ. ತಿಂಗಳಿಗೆ ಹತ್ತು ರೂಪಾಯಿ ಕೊಡ್ತೀನಿ. ಕಡಮೆ ಅಂತ ಕಂಡ್ರೆ, ಸಂಬಳ ಅಲ್ಲ ಸಂಭಾವನೆ ಅಂತ ತಿಳ್ಕೋಬೌದು."

ಮುರಲೀಧರ ಅದಕ್ಕೂ ಒಪ್ಪಿದ. ಮುಳುಗುತ್ತಿದ್ದ ಆತನಿಗೆ ಹುಲ್ಲು ಕಡ್ಡಿಯೂ ಸಾಕಾಗಿತ್ತು.

ಅವರೆಂದರು:

"ನಾಳೆ ಇಪ್ಪತ್ತನಾಲ್ಕನೆ ತಾರೀಖು. ಇಪ್ಪತ್ತೈದರಿಂದ ಬಂದ್ಬಿಡಿ. ಲೆಕ್ಕ ಮುಂದಿನ ತಿಂಗಳು ಮೊದಲ್ನೇ ತಾರೀಖಿನಿಂದ ಇಟ್ಕೊಳ್ಳೋಣ."

"ಆಗಲಿ ಸಾರ್."

* * * *

ಏನಾದರೂ ಸಿಹಿ ಕೊಂಡು ಮನೆಗೆ ಹೋಗಬೇಕೆಂದು ಮುರಲೀಧರ ಭಾವಿಸಿದ. ಜೇಬಿನಲ್ಲಿದ್ದುದು ಒಂದೇ ಆಣೆ. ಆ ದುಡ್ಡಿಗೆ ಪೆಪ್ಪರ್‌ಮಿಂಟ್ ಪಡೆದು ಆತ ಮಲ್ಲೇಶ್ವರಕ್ಕೆ ನಡೆದ. ಯಾವ ಬಳಲಿಕೆಯೂ ಆತನಿಗೆ ತೋರಲಿಲ್ಲ.

ನಾರಣಪ್ಪನ ತಾಯಿ ವಿಷಯ ತಿಳಿದು ಸಂತೋಷಗೊಂಡರು. ದೇವರ ಮುಂದೆ ತುಪ್ಪದ ದೀಪ ಹಚ್ಚಿಟ್ಟರು.

"ಸಂಬಳ ಎಷ್ಟು?" ಎನ್ನುವ ಪ್ರಶ್ನೆ, ಮುರಲೀಧರನನ್ನು ಗಲಿಬಿಲಿಯಲ್ಲಿ ಕೆಡವಿತು.

ಆದರೂ ಅಧೀರನಾಗದೆ ಆತ ಉತ್ತರವಿತ್ತ:

"ಎಷ್ಟು ಬೇಕೂಂತ ಅವರೇ ಕೇಳಿದ್ರು. ನಾನಿನ್ನೂ ಉತ್ತರ ಕೊಟ್ಟಿಲ್ಲ."

...ನಿಜ ಸಂಗತಿಯನ್ನು ತಿಳಿದಾಗ ನಾರಣಪ್ಪ ಮಾತ್ರ, ತಾಯಿಗಾಗಲೀ ಅಕ್ಕನಿಗಾಗಲೀ ಕೇಳಿಸದಂತೆ ಆಕ್ರೋಶಮಾಡಿದ:

"ಅವನೇನು ಮನುಷ್ಯನೋ, ಕಸಾಯಿಯೋ?"

## ೧೭

ಮುರಲೀಧರ ಬೆಳಗ್ಗೆ ಬೇಗನೆದ್ದ.

'ಊಟ ಮುಗಿಸಿಕೊಂಡು ಹತ್ತು ಗಂಟೆಗೇ ಬಂದುಬಿಡು'—ಎಂದಿದ್ದರು ಆತನ ಮಾಲಿಕ–ಸಂಪಾದಕರು. ಒಂಭತ್ತು ಗಂಟೆಗೆ ಮನೆ ಬಿಟ್ಟರೆ ಮಾತ್ರ ಅದು ಸಾಧ್ಯ. ಅಷ್ಟರೊಳಗೆ ಅಡುಗೆ? ಆತನಾಗಿಯೇ ಅದರ ಪ್ರಸ್ತಾಪ ಮಾಡುವುದು ಸಾಧ್ಯವಿರಲಿಲ್ಲ.

ಆದರೆ ನಾರಣಪ್ಪನ ತಾಯಿ ತಾವಾಗಿಯೇ ಕೇಳಿದರು:

"ಅನ್ನ, ತಿಳಿಸಾರು ಮಾಡ್ತೀನಿ. ಸಾಕೇನಪ್ಪಾ?"

ಮುರಲೀಧರನೆಂದ:

"ಇಲ್ಲದ ತೋಂದರೆ ನಿಮಗೆ."

"ತೊಂದರೆಯಂತೆ! ಓ ಹೋ ಹೋ!"

ಈ ದಿನದಿಂದ ಮುರಲೀಧರ ಪತ್ರಿಕೋದ್ಯಮಿ. ಹಣ ಸಂಪಾದನೆಯ ಮಾರ್ಗ ವೆಂದಲ್ಲ ಆ ಉದ್ಯೋಗವನ್ನು ಕೈ ಕೊಂಡುದು. ಆತ ಧ್ಯೇಯದ ಕುದುರೆಯನ್ನೇರಿದ್ದ ಸವಾರ. ಎತ್ತಿಕೊಂಡ ಕೈದು, ಲೇಖನಿ.

ಎಷ್ಟೊಂದು ಸೊಗಸಾದ ಹೆಸರು 'ಪಾಂಚಜನ್ಯ!'

ಆತನ ಬದುಕು ಸುಖಕರವಾಗದೆಂಬುದು ನಿಜ. ಅದು ದೊಡ್ಡದಲ್ಲ. ಶಾಲೆ ಕಾಲೇಜುಗಳು ಆರಂಭವಾದೊಡನೆ, ಒಳ್ಳೆಯ ಕಡೆ ಒಂದೆರಡು ಪಾಠಗಳನ್ನು ಗೊತ್ತು ಮಾಡಿ ಕೊಂಡರಾಯ್ತು. ಎಷ್ಟು ಸಂಪಾದನೆ ಬೇಕು ಒಬ್ಬ ಮನುಷ್ಯನಿಗೆ?

ನಾರಣಪ್ಪನೆಂದ:

"ನುಣ್ಣಗೆ ಮುಖಕ್ಷೌರ ಮಾಡ್ಕೊ ಮುರಲಿ. ಇಡೀ ಒಂದು ವಾರದ ಹುಲು ಸಾದ ಬೆಳೆಯೇ ನಿನ್ನ ಮುಖದ ಮೇಲಿದೆಯಲ್ಲ!"

'ಪಾಂಚಜನ್ಯ' ಬಡಕಲು ಪತ್ರಿಕೆ. ಒಂದೆರಡು ಸಂಚಿಕೆಗಳನ್ನು ಮುರಲೀಧರ ನೋಡಿದ್ದ. ಆ ಪತ್ರಿಕೆಗಿನ್ನು ಜೀವ ತುಂಬಬೇಕು. 'ಪಾಂಚಜನ್ಯ' ಎಂಬುದು ಅನ್ವರ್ಥನಾಮವಾಗಬೇಕು. ಮೈಮುರಿದು ದುಡಿಯಬೇಕು. ಒಳ್ಳೆಯ ಪತ್ರಿಕೋ ದ್ಯೋಗಿಯಾಗಬೇಕು ತಾನು —ಒಳ್ಳೆಯ ಪತ್ರಿಕೋದ್ಯೋಗಿ.

ಇನ್ನು ಅಧ್ಯಯನ? ಮುಂದೆ ನೋಡಿಕೊಂಡರಾಯ್ತು ಆ ವಿಷಯ.

ತಾನಿನ್ನೂ ಚಿಕ್ಕವನು. ವಯಸ್ಸು ಇಪ್ಪತ್ತು ತುಂಬುತ್ತಿತ್ತು ಅಷ್ಟೆ. ಹೃದಯ ಹಚ್ಚ ಹಸುರು. ತಾನು ಮಾಡಬೇಕಾದ ಕೆಲಸ ಹಿಮಾಲಯ ಸಮಾನವಾದುದು, ನಡೆಯಬೇಕಾದ ದಾರಿ ಕೊನೆ ಇಲ್ಲದ್ದು.

ಶ್ರೀಕಂಠಯ್ಯನವರನ್ನೊಮ್ಮೆ ಕಾಣಬೇಕೆನಿಸಿತು ಮುರಲೀಧರನಿಗೆ.

ಆ ಲಕ್ಷ್ಮೀಕಾಂತ!

ಪಾಠ ಹೇಳುತ್ತಿದ್ದ ಮನೆಗಳ ಹುಡುಗರಿಗೂ ತಿಳಿಸಬೇಕು—ತಾನು 'ಪಾಂಚ ಜನ್ಯ'ದ ಉಪಸಂಪಾದಕನಾದ ವಿಷಯ. [ಶ್ಯಾಮನ ಅಕ್ಕನಿಗೆ ಮದುವೆಯಾಗಿರ ಬಹುದು ಈಗಾಗಲೇ.]

ಆ ರಾಮಚಂದ್ರಯ್ಯ ಏನೆನ್ನುವನೊ!

ಅಯ್ಯರ ಭೋಜನ ಗೃಹಕ್ಕೊ ಒಮ್ಮೆ ಭೇಟಿ ಕೊಡಬೇಕು. ಮಗ್ಗುಲು ಕೊಠಡಿ ಯವರಿಗೆ, ಮೂಲೆಯ ಕೊಠಡಿಯವರಿಗೆ ವಿಷಯ ತಿಳಿಸಬೇಕು.

ಲೇಖನಿಗೆ ಭವಿಷ್ಯತ್ತಿತ್ತು. [ಎಷ್ಟೊಳ್ಳೆಯವನು ಕಾಶೀಪತಿ!] ಬಾಹುಗಳಿಗೆ ಬಲವಿತ್ತು. ಕೆಚ್ಚು ಹುಮ್ಮಸುಗಳಿಗಂತೂ ಅಭಾವವೇ ಇರಲಿಲ್ಲ.

ಉದ್ಯೋಗ ದೊರೆತ ವಿಷಯ ತಿಳಿಸಿ [ಸಂಬಳದ ಪ್ರಸ್ತಾಪ ಮಾಡದೆ] ಅಣ್ಣನಿ ಗೊಂದು ಕಾಗದ ಬರೆದ ಮುರಲೀಧರ. ತನ್ನ ಹೊಸ ವಿಳಾಸವನ್ನಿತ್ತ:

ಮುರಲೀಧರ
ಉಪಸಂಪಾದಕ
'ಪಾಂಚಜನ್ಯ'
ಚಿಕ್ಕಪೇಟೆ, ಬೆಂಗಳೂರು ನಗರ.

ನಾರಣಪ್ಪನ ತಾಯಿ ಕರೆದರು:
"ಊಟಕ್ಕೆ ಬಾ ಮುರಲಿ."
ಆತನೆಂದ:
"ಬಂದೆ ಅಮ್ಮಾ."